ದೂರ ಕ್ಕೆಕಳ್ಳ, ಬಿಂಗಡಿಸ, ಹೊರಗೆ ಹಾಕ ಬೆತ್ತೋಗ —*rem* ಎತಿದ *è loco* ನಿಗ ಮಿಸ —*se paulisper* ಸರಿಸ —*domum* ನಿಗ ಮಾಮಾಡ— *à periculo*ತಪ್ಪಿಸಿಕೊಳ್ಳ —V. Removeo— *castra* ಕೂಚಮಾಡ—*se-ab*ಅಗಲಿಸಿಕೊಳ್ಳ—*à se culpam* ತನ್ನನ್ನು ನಿರಪರಾಧಸ್ತನೆಂದು ತೋರಿಸ

Amphemerin os, i, o. *g.* ದಿನಾಗಳ ಜ್ವರ.

Amphibal um, i, *n.* ದುಪ್ಪಟಿ, ಬನಾ ತಿನದುಪ್ಪಟಿ, ಕಂಬಳಿ.

Amphibi um, i, *n*. ಉಬಯಜೀವಿ, ಜಲದಲ್ಲಿಯೂ ಗದ್ದೆಯಮೇಲೆಯೂ ಜೀವಿಸುವ ಪ್ರಾಣಿ—*animal* ಯಾದ ನ್ನು.

Amphiboli a—logi a, æ, *f.* ದ್ವಿಮುಖಮಾತು, ದ್ವ್ಯಾರ್ಥವಾದವಾಕ್ಯ, ಜಂತೆಮಾತು,

Amphibrach us, i, (*poësi*) ಜಗಣ

Amphisben a, æ, *f.* ದ್ವಿಮುಖಸರ್ಪ, ಇತರ್ಣತೆಹಾವು, ಅಜೀರಣು.

Amphitan e, es, *f.* ಹೊನ್ನನ್ನು ತರ್ಬುಣವನ್ನು ಯೆಳಕೊಳ್ಳುವರತ್ನ.

Amphitalam us, i, *m*. ಊಳಿಗದವರ ಕೊಠಡಿ, ಉಡುಪಿನ ಕೊಟ್ಟಡಿ, ಗೇರೆ ಪೆಟ್ಟಿಯ ಪಕ್ಕೆಗೊರಗುವಂಥಾ ಪೆಟ್ಟಿ.

Amphitheatral is, *m, f.* e, *n.* ಮಲ್ಲರರಂಗದ—ಆಟದ ಶಾಲೆಯ.

Amphtheatric us, a, um, ಮಲ್ಲರ.. ವಸ್ತ್ರಾದಿಗರ.. ಶಾಲೆಗೆ ಸೇರಿದ.

Amphitheatr um, i, *n* . ಮಲ್ಲರರಂಗ, ಹಾವಟಿಗೆ...ಅಂತಸ್ತು...ಉಳ್ಳ ತಮಾಷೆಗಳರಂಗ, ಬಟುವಾದ ಶಾಲೆ.

Amphor a, æ, *f. larga* ಕೊಲು, ಕಲಶ, ಕೊಲ, ಕಳಸಿಗೆ, ಹಾಂಡ (ಎರಡಿಡಿಯುಳ್ಳ) ಅಳತೇ ಪಾತ್ರೆ—*pro frumentis* ಓಡಿ—*pellicea* ತಿದ್ದಿಗೆ—V. Hydria.

Amphoral is, *m. f.* e, *n.* ಮೆಸ್ತೇಳಿದ ಅಳತೆಪಡಿಯುವ.

Amplè — iter, *adv.* ತೇನೆ, ತುಂಬ, ವಿಸ್ತಾರವಾಗಿ, ಬಹಳ, ಅಗಲವಾಗಿ, ಘನತೆಯೊಂದಿಗೆ, ಯೋಗ್ಯವಾಗಿ.

Ample cto, is, ere, *v. a.* ctor, cteris, xus sum, cti *v. d.* ತಕ್ಕೈಸ, ಅಪ್ಪಿಕೊಳ್ಳ, ತಬ್ಬಿಕೊಳ್ಳ, ಹೇಮಾಲಿಂಗನೆ ಮಾಡ, ಕಂಠಲಗ್ನ ಮಾಡ, ಕಟ್ಟಿಕೊಳ್ಳ, —*conjuges*ಕೂಡ,ಅಮರಿಕೊಳ್ಳ,ವಿಷಯಿಸ, ಸಂಸಾರಮಾಡ-- V. Coeo--*sectam* etc. ಸೇರ, ಕಟ್ಟಿಕೊಳ್ಳ, ಬಳಗಾಗ, ಅಂಗೀಕರಿಸ, ಅನುಸರಿಸ—*Ambire* ಸುತ್ತಿಕೊಳ್ಳ ಆವರಿಸ—V. Complector— Amplex o-- are,—xor, ari, *v. d.* id.

Amplex us, ûs, *m.* ತಕ್ಕೆ, ಅಪ್ಪುಗೆ, ಹೇಮಾಲಿಂಗನೆ, ಸಂಶ್ಲೇಷ, ಆಶ್ಲೇಷ, ಅಂಕಪಾಳಿ— *conjugalis* ಸಂಯೋಗ, ಸಂಸಾರ,ಅನುಷ್ಠಾನ,ಅನುಷ್ಠಂಗ ,ಕೂಷ್ಟಾಟ, ಕೇದಾಟ, ಕೇತ —V . Coitus, *ambitus* ಸುತ್ತು,ಸುರುಳು—V. Circuitus-- *amplitudo* ಸುತ್ತಳತೆ, ಬಳಳತೆ.

Ampliatio, nis, *f* . ಅಗಲಿಕೆ, ವಿಸ್ತರಿಕೆ , ಅಧಿಕರಿಸುವಿಕೆ, ಹೆಚ್ಚಿಕೆ — *judicii mora* ಹೈಸಲಿನ ತಾಮಸ.

Ampliat us, a, um, ವಿಸ್ತರಿಸಲ್ಪಟ್ಟ, ಅಗಲಿಸಿದ, ಹೆಚ್ಚಿದ.

Amplificatio, nis, *f.* ಬೆಳಿಸುವಿಕೆ, ಹೆಚ್ಚಿಸುವಿಕೆ, ವಿಸರಿಸುವಿಕೆ—*exage ratio* ಜಲ್ಲಿಹೇಳುವಿಕೆ, ಜಾಸ್ತಿಸುಡಿ, ಊಟತೆ — *orationis* ವರ್ಣಿಸುವಿಕೆ, ವಿವರಿಸುವಿಕೆ.

Amplificator, is, *m*— tri x, cis , *f.* ಹೆಚ್ಚಿಸುವವ — *verbosus* ಊತ್ಲೆಕೊಚುವವ.

Amplificat us, a , um , ಹೆಚ್ಚಿದ, ಹೆಚ್ಚಿಸಲ್ಪಟ್ಟ, ವಿಸ್ತರಿಸಿದ, ಸಂವರ್ಧಿತ.

Amplificè, *adv.* ಬಹಳ..ವಿಸ್ತೀರ್ಣ..

ಸಂಭ್ರಮ..ವಾಗಿ, ಗಂಭೀರ್ಯದೊಂದಿಗೆ.

Amplific o, are. ಹೆಚ್ಚಿಸ, ಅಧಿಕರಿಸ, ವಿಸ್ತರಿಸ, ನಿಗರಿಸ, ಅಗಲಿಸ — *exagerari* ಜಲ್ಲಿಹೇಳ, ಊಟ್ಲಿಕೊಚ್ಚ.

Ampli o, are, ದೊಡ್ಡದುಮಾಡ, ಅಗಲಿಸ—V. Amplifico.

Amplitud o, inis, *f.* ಪ್ರಖ್ಯತ್ತೆ, ಹೇರಾಳತ್ವ, ಘನತೆ, ವಿಶಾಲ, ಮಹಾತ್ವ—*telæ* ಅಡ್ಡಗಲ.

Ampliùs, *adv.* ಅಧಿಕವಾಗಿ, ಹೆಚ್ಚೆಚ್ಚಾಗಿ, ಜಾಸ್ತಿ, ಮತ್ತು, ಇನ್ನು ಇದು..ಅದು...ಶಿವಾಯಿ, ಮೇಲೆ— *in numero* ಜಿಲ್ಲಾನ— *pronunciare* ಹೆಚ್ಚಾದ ದರ್ಯ್ಯಾಪಿ ಚೇಕೆಂದು ನಿರ್ಣಯಿಸ—quid ampliùs ಮತ್ತೇನು, ಇನ್ನೇನು.

Ampl us, a, um. ವಿಶಾಲ..ವಿಸ್ತಾರ ಅಡ್ಡಗಲ...ಹೇರಳ..ವಾದ, ಆತತ, ಸರಳ—*vestis* ಅಳ್ಳಕ—*locus* ಮೇಲಾದ ಜಾಗೆ.

Amptru o, amtru o, are . *v. n.* ತಿರುಗ, ಸುರುಳ, ಹೊರಳ, ಕುನಿದು ಸುತ್ತಿ ತಿರುಗ.

Ampull a, æ, *f.* ಶೀಶೆ, ಬುಡ್ಡಿ, ಕುಡಿಕೆ, ಸಣ್ಣಕೂಜ, ಕುಪ್ಪಿಗೆ—*sacra* ಅರ್ಚಣಃ ಯೆಂಣೆಕುಡಿಕೆ—*vitrea* ಕಾಶೀಕುಪ್ಪಿ— *pellicea* ಕುಡುಪ, ತೈಶಿದ್ದಿಗೆ—(*ventouse*) ಆವಿಬಿಡುವದಕ್ಕೆ ತಗ್ಗ ಮತ್ತು— *sermonis* ವಾಚಕದ ಉತ್ಪ್ರಾಣೆ, ಬಡಾಯಿಮಾತು, ಗಂಭೀರವಚನ.

Ampullace us, a, um. ಕುಪ್ಪಿಗೆರೂಪಾಗಿ, ಗಾಜಿನ ಚಿಕ್ಕಕುಡಿಕೆಯಾದ—*sermo, homo* ಉಬ್ಬಿದ.

Ampullari us, i, *m.* ಕುಪ್ಪಿ, ಶೀಶೆ ಮಾಡುವವ.

Ampull or, ari, *v. d.* ದೊಡ್ಡಸ್ತಿಕೆ ಮಾಗಿ ಮಾತಾಡ, ಡಂಭ...ಗಾಂಭೀರ್ಯದೊಂದಿಗೆ..ಪ್ರಶಂಸಿಸ.

Amputatio, nis, *f.* ಖಂಡಿಸೋಣ, ಶಸ್ತ್ರ ಮಾಡೋಣ-*membri* ಅಂಗಛಿನ್ನ, ಊನ—*vocis* ರಾಗದನಷ್ಟ.

Amput o, are, *v. a.* ಕಡಿಯು, ಕೊಯ್ಯ, ಕೊಯಿಧಾರ, ಕಡಿದುಹಾಕ, ಹೊಯ್ಯ, ಖಂಡಿಸ — *frustulatim* ಛಿದ್ರಛಿದ್ರಿಸ—*ramos arborum* ಸವರ, ಕತ್ತರಿಸ, ಕಪಾಟುಮಾಡ—*membrum* ಅಂಗಛಿನ್ನ..ಛೇದನೆ..ಮಾಡ.

Amul a, æ, *f.* ಶಿಲಘಣಕೊಟ್ಟೆ.

Amulet um, i, *n.* ಅಂಗರಕ್ಷೆ, ಅಗ್ನಿಮಂತ್ರ, ರಕ್ಷಣೆಚೀಟು, ಕಾಪು..ಕಾವು..ಕಟ್ಟು—*tubus* ತಾಯಿತಿ—*orizæ coloratæ* ಮಂತ್ರಾಕ್ಷತೆ.

Amurc a, æ, ಎಣ್ಣೆ ಹಿಂಡಿ, ಮಷ್ಟು, ಅಡಿಗಂಟು, ಗಸಿ, ಬದುಡು—V. Fæx.

Amussim, ad..ex.. amussim, *adv.* ಸರಿ ... ಹಾಂಗೋಪಾಂಗ ...ಕರಾರು.. ಪಾಂಗ್ಯ..ಸುಮುದ್ರೆ..ಆಗಿ, ನೆಟ್ಟಗೆ, ಬರಾಬರಿ, ಹೇಷುಮುಟ್ಟಾಗಿ.

Amuss is, is, *pro mensurâ* ನೂಲು, ಮಟ್ಟಾಕುವಿಗೆ, ತಿರಸ್ಕೋಲು, ತಿರಕನೀಕುಲಿಗೆ, ತಿಗಡಿ—*aquæ* ನೀರಿನಮಟ್ಟ, ಹೇಷುಮಟ್ಟು-*pro lineis* ಗಜ, ಅಳತೆ, ಸೂತ್ರ.

Amussi um, i, *n.* ಕೋಲು, ಗೀಜೋಕಟ್ಟಿಗೆ— *Exemplar* ನಮೂನೆ—*plumbi* ಸೂತ್ರ, ಕಲ್ಲಿಮೂಕ, *pro arboribus.* ತ್ರೈರಾಶಿಕೆ.

Amyctic a, orum, *n. pl.* ಕುಣ್ಣುಸುಡುವ ಔಷಧಗಳು.

Amygdl a, æ, *f.*—um, i, *n.*—us, i, *m.* ಬಾದಾಮಿ ಗಿಡ—*fructus* ಬೀಜ.

Amygdalæ faucium, ಗಂಟ್ಲಮಣಿ.

Amygdale us, lin us, a , um , ಬಾದಾಮಿ..ಮರದ—ಬೀಜದ.

Amyl on--um, i, *n.* ಗಂಜಿ , ಗಂಜಿ

ಕಾರ, ಸಕೆ—*imbuta tela* ಗಂಜಿಬಟ್ಟೆ—*imbuere* ಗಂಜಿಕ್ಕು, ಗಂಜಿಗೆ ಹಾಕು, ಗಂಜಿ ಮಾಡು—*parare* ಗಂಜೀಯಿಡೋದು.

AN

An, *adv.* ಓ, ಅ..ಇ..ಲ್ಲವೋ..ವೇ, ಇ..ಅ..ದಾದರೂ, ಆದರೂಸರಿ—*annon* ಅಲ್ಲವೆ, ಇಲ್ಲವೆ.

Anabaptism us, i, *m.* ಎರಡನೇಜ್ಞಾನಸ್ನಾನ.

Anabaptist a, æ, *m.* ಎರಡನೇ ಜ್ಞಾನಸ್ನಾನಕೊಡುವ ಪತಿತ.

Anabasi us, i, *n.* ದೂತನು.

Anabath rum, i, *n.* ಹಾವಟಿಗೆ, ಮೆಟ್ಟು, ಏಣಿ, ಸೋಪಾನ.

Anaboli um, i, *n.* ದುಪ್ಪಟಿ, ಕಂಬಳಿ.

Anachores is, is, *f.* ವನವಾಸ, ಅಜ್ಞಾತವಾಸ, ಏಕಾಂತಸ್ಥಳ.

Anachoret a, æ, *m.* ವನವಾಸಿ, ವನಪ್ರಸ್ಥನು, ಆಶ್ರಮವಾಸಿ, ಯತೀಶ್ವರ, ಅವದೂತನು, ಅನಗಾರ, ಮುನಿ—(*Jamgama*) ಅತೀತ—*cella, domus* ಒಟರಾ, ಆಶ್ರಮ.

Anaclinteri um, i, *n.* ತಲೆಮಂಚ.

Anacœliasm us, i, *m.* ಸುಖ ಭೇದಿ ಮದ್ದು.

Anadema, tos, *n.* ತಲೆ..ಅಣೆ..ಶೃಂಗಾರ--ಜಡೆ.

Anagnost es, æ, *m.* ಓದುವವ.

Anagog e, es, *f.* ದೇವ ರಹಸ್ಯವಾದ ಅರ್ಥ, ಜ್ಞಾನಾರ್ಥ—*morbus* ರಕ್ತಕಾರ.

Anagogic us, a, um. ಗುಪ್ತ..ಜ್ಞಾನಾರ್ಥ..ವುಳ್ಳ.

Anagramma, tis, *n.*--tism us, i, *m.* ಬೇರೆ ಅರ್ಥಕೊಡುವ ಅಕ್ಷರಗಳ ಕ್ರಮದಲ್ಲಿಭೇದ.

Anagraph e, es, *f.* ದಪ್ತರ, ವಹಿ, V. Acta, Album.

Analect a, orum, *n, pl. liber,* ಸಂಗ್ರಹ, ಬೇರೆ ಪುಸ್ತಕಗಳಲ್ಲಿ ತೆಗದು ಆರಿಸಲ್ಪಟ್ಟವಿಶೇಷಗಳು-*ciborum* ಎಂಜಲು

Analemma, tis, *n.* ಸೂರ್ಯಾಯನವನ್ನು ... ಸಂಚಾರವನ್ನು ... ಗುರಿಸುವ ಯಂತ್ರ.

Analogi a, æ, *f.* ಹೋಲಿಕೆ, ಸಂಬಂಧ, ಅಪ್ಪಂದ, ಒಪ್ಪಾದೆ, ಅನುಸಾರಿತ್ವ.

Analogic us, a, um, ಹೊಂದಿಕೆಯಾದ, ಸಮಾನತ್ವವುಳ್ಳ, ಒಪ್ಪಾದೆಯಾದ, ಸರಿಬೀಳುವ, ತುಲಿತ.

Analog us, a, um. ಸರಿಬರುವ. ತುಲ್ಯ..ಪಮಾನ...ಹೋಲಿಕೆ... ಒಪ್ಪಾದೆ... ಸಾದೃಶ್ಯ..ವಾದ.

Analys is, is, *f.* ವಿಮರ್ಶೆ, ತಪಶೀಲು, ವಿವರ—*facere* ವಿಮರ್ಶಿಸ, ವಿವರಿಸಿನೋಡ, ಭೇದಿಸಿನೋಡ— *grammaticalis* ಅನ್ವಯ — *facere* ಅನ್ವಯಿಸ, ಪದಭೇದ—ಪದ ವಿಭಾಗ—V. Compendium.

Anaphor a, æ, *f.* ಯುಕ್ತಿಸುವಿಕೆ—*siderum* ನಕ್ಷತ್ರ... ಗ್ರಹಗಳ...ಏರೋಣ—*odoris* ಪಂಸನೇ ಘ್ರಾಣ, ವಾಸನೇ ಹಾರೋಣ—*rumor* ಸುಗತಿ— *auxilium* ಸಹಾಯ—(Rethoric) ತಿರಿಗಿ ಹೇಳೋಣ — Anaphoricum horologium ನೀರುಗಡ್ಯಾರ.

Anarchi a, æ, *f.* ಅರಾಜಕ, ರಾಜದ ಅತಲಕುತಲ, ಕಸಿಪಿಸಿ, ಅನಾಯಕ, ಅನ್ಯಾನಾಯಕ.

Ana s, tis, *f. domestica* ಕುಳ್ಳಬಾತು -- *sylvestris* ಸಳ್ಹಕ್ಕಿ, ರಾಜಹಂಸ, ಕಾದಂಬ.

Anastas is, is, *f.* ಪುನರುತ್ಥಾನ, ಪುನರ್ಜನ್ಮ.

Anatari um, i. *n.* ಕುಳ್ಳಬಾತು ಸಾ

ಕುವಕಿಕೆ.

Anatari us, i, *m.* ಬಾತುಕಳ ಮೆಯಿಸುವವ.

Anathema, tis, *n.* ಶಾಪವು, ಶಪನೆ, ಆಣೆಯಿಟ್ಟುಮಾಡಿದ ಕಾಣಿಕೆ, ನಾಶಕ್ಕೆನಿಯಮಿಸಲಿಕ್ಕೆ, ಸಭೆಗೆ ಹೊರಗಾಗಿತಳ್ಳೋಣ —*ex voto* ಮಠಗಳಲ್ಲಿ ತೂಗುಹಾಕುವ ಕಾಣಿಕೆಗಳು.

Anathematiz o, are, ಶಪಿಸ, ಶಪನೆಯಿಡ, ಆಣೆಯಿಟ್ಟುನಾಶನಕ್ಕೆನೇಮಿಸ.

Anatocism us, i, *m.* ಬಡ್ಡಿಗೆ ಬಡ್ಡಿ, ಚಕ್ರವೃದ್ಧಿ.

Anatom e, es,—i,a, æ, *f.* ಸರ್ವಾಂಗಶೋಧನೆ, ನಾಡಿಶೋಧನೆ,ಅಂಗಪರಿಷೆ ಅಂಗಮರ್ಮವಿದ್ಯ.

Anatomic us, i, *m.* ಅಂಗಪರಿಷೆವಿದ್ಯಶಾಲಿ—us, a, um,ಶರೀರದಶಲ್ಯಧಾತು, ನರ ಈ ಮುಂತಾದಪರಿಷೆಗೆ ಸೇರಿದ

Anc eps, ipitis, o, g, *incertus* ಸಂಶಯ, ಅನುಮಾನ—*verbum* ಗುಪ್ತನಾದ—*fieri* ಸಂಶಯ ಪಡ, ಮನ್ನಾಡಿಕೊಳ್ಳ—*duplex* ಜಮಡಿ, ಇರಣಡಿಯಾದಿ,ದ್ವಿಮುಖವಾದ—*gladius* ಇರುಮುಖದ..ಇಗಣಡೆ..ಗತ್ತಿ—*bestia* V. amphibium—*periculum* ಗಂಡಾಂತರವಾದ.

Anchor a, æ, *f.* ಲಂಗುರ *v.* ಲಂಗರು—*projicere* ಬಿಡ, ಹಾಕ—*retrahere* ಯೆತ್ತ, ಎಳೆಯ—*protectio* ಆಶ್ರಯ —sacra ಕಡೇಲಂಗರು, ಕಡೆ ಆದಾರ.

Anchoral e, is, *n.* ಲಂಗರದ..ಹೊರಜಿ—ಸರಪಣಿ.

Anchorat us, a, um , ಲಂಗುರ ಬಿಟ್ಟಿರ, ಲಂಗುರದಮೇಲೆ ಪೂರಿ.

Ancil e, is, *n.*—li a, orum, *n. pl.* ರೋಮಾಪುರಿಯಲ್ಲಿ ಪೂಜಿಸಲ್ಪಟ್ಟ ಘೊಂಡುಬಗೆ ಗುರಾಣಿಗಳು.

Ancill a,æ, *f.*ಗಾಡಿ, ಊಳಿಗಾತಿ ಬೋನಗಿತ್ತಿ, ದಾಸಿ , ಕರ್ಮಕಾರಿ — ul a, æ, ಸಂಣ ಊಳಿಗಾತಿ, ಗಾಡಿ—V.Famula.

Ancillar is, is, *m. f.*e, *n.* ದಾಸಿಯ, ನೀಚ, ಕೂಲಿಗಾತಿಗೆತಕ್ಕ.

Ancill o, are, *v. a.*-or, ari—V. Famulo, Servio.

Ancis us, ûs, *m* . ವೃತ್ತ ಛೇದನೆ, ಸುತ್ತುಕತ್ತರಿಸುವಿಕೆ—V. circumcisus.

Anclabr is, is, *m.* ಪೀಠದ ಸಮಾಪನಾಗಿ ಪೂಜೆ ಸಾಮಗ್ರಿಗಳ ಹಾಕುವ ಮೇಜೆ.

Ancon, is, *m.* ಮೊಣಕೈ —ಅದರ ಮಡಿ—*angulus* ಕೋಣೆ, ಮೂಲೆ— *tecti* ಲಡಾವಿನ ವಲಯವು — *maris* ಸಮುದ್ರದಕೇವಿನ ದಿನ್ನೆ--*Nili* ನೀಲೆಂಬನದಿಯ ದೊಡ್ಡಕಾಲುವೆ—*amussis* ಶಿಲಪಿಯ ಗೈಯ್ಯ — V. catapulta— *securis* ಖಡ್ಗ—*venatorum*ಬೇಟೆಗಾರರ ಕವೆಯಾದ ಕೋಲು.

Anc us, i, *m.* ಗಿಡ್ಡಮೊಣಗೈಯವ.

Ancylogloss um, i, ನಾಲಿಕೆ ಕಟ್ಟುವ ನರ—*balbuties* ನತ್ತಿ, ನಿಂಗೆ.

Andabat a, æ, *m.* ಕಂಣುಕಟ್ಟಿ ಜಗಳ ಮಾಡುವ ಕತ್ತೀಸಾಧಕರು.

Androgyn us, a, um, V . Hermaphroditus.

Andron, is, *m.* ಮನೆಗಳಲ್ಲಿ ಗಂಡರ ವಾಸಸ್ಥಳ, ದೇವಾಲಯಗಳಲ್ಲಿ ಗಂಡಸರಿಗೆ ನೇಮಿಸಿದ ಪಾರ್ಶ್ವ—ಶಾಲೆ, ಎರಡುಗೋಡೆಗಳ ಮಧ್ಯಸಂದು—Androniti s, dis, *f.* ಸುತ್ತಲು ಕಂಭಗಳುಳ್ಳ ಗಂಡಸರ ಸಾಲೆ.

Anecdot us, a,um, ಶಿಳಿಯದ..ಪ್ರಸಿದ್ಧಿಯಾಗದ..ಚರಿತ್ರೆ—Anecdot a, or-

um, *pl*, *n*. ನೂತನರಥ, ಚಿಕ್ಕ ವೈಶಾಂತಗಳು.

Anell us, i, *m*. ಚಿಕ್ಕವುಂಗರ.

Aneth um, i ,*n*. ಸಿಪ್ಪಸೀಗೆ, ಮಿಶಿ, ಶೀತಶಿವ, ಮಧುರಿಕೆ—*species* ಕುಪ್ಪಗಿಡ.

Anevrisma , tis , *n* . ರಕ್ತಧಾತುವಿನ ಕೋಶ ಹರಿಯುವಿಕೆಯಿಂದಲಾದರೂ ವೃದ್ಧಿಯಿಂದಲಾದರೂ ಬರುವ ನಾತ.

Anfractuos us,a,um, ವಂಕರವಾದ, ಬಳಸು...ಸುತ್ತುಸುತ್ತಲಾದ.

Anfract us, a, um, ಬಾಗಾರ, ಬಗ್ಗಿದ, ಜೊಟ್ಟಾದ, ಸುತ್ತುವುಳ್ಳ.

Anfract um, i, *n*. ಅಡ್ಡಹಾದಿ.

Anfract us, ûs, *m*. ಸುತ್ತು, ಬಳಸು, ಬಾಗು, ವಂಕರ—*prætextus* ಕುನೆವನು.

Angar a, orum , *pl*. *n*. ಅಂಚೇಮನೆ, ಟಪ್ಪಾಲುಚಾವಡಿ.

Angari a, æ, *f*. ಇಟ್ಟಿಬಿಟ್ಟಿ, ಕೂಲಿಯಿಲ್ಲದೆ ಚಾಕರಿ—ಕೆಲಸ, ಟಪ್ಪಾಲು..ಬಂಡಿ—ಕುದರೆ—ಎತ್ತು, ಬೇಗಾರಿ ಆಳು.

Angarial is,is, *m*, *f*.e,*n*. ಅಂಚೆ.. ಟಪ್ಪಾಲು..ಊಳಿಗ..ಬಂಡಿ..ಕುದುರೆ..ಸಂಬಂಧ—*copia* ಬಿಟ್ಟಿ ಆಳು..ಕಂಡಿ.. ಎತ್ತುಗಳನ್ನು..ಪ್ರಯೋಗಿಸ ಸ್ವತಂತ್ರವು—*labor* ಇಟ್ಟಿ ಬಿಟ್ಟೀಕೆಲಸ.

Angari o,..are, *v*. *a*. ಕೂಲಿಯಿಲ್ಲದೆ ಕೆಲಸಕ್ಕೆ ತಳ್ಳ, ಕಡ್ಡಾಯದಿಂದ ಬಿಟ್ಟಿ ಆಳುಗಳನ್ನು ಕರೆಯು--ಹೊಡದು ಕರೆತರ—ಹಿಡಿಯು— *propter debitum* ಕೀಕಾರು ಮಾಡ.

Angari us,..r us, i, *m*. ಅಂಚೆಗೆ... ಬಿಟ್ಟಿಗೆ..ಆಳುಗಳ ವಿಚಾರಿಸುವವ, ಅಂಚೆಗಾರ, ಬಿಟ್ಟಿ ಆಳು, ಕುಳುವಾಡಿ.

Angelic us, a, um, ದೇವ ದೂತ.. ನಂಮನಸ್ಸು..ಅರೂಪಿ.. ಆದ , ಸಂಮನಸ್ಸುಗಳಿಗೆ ಸಂಬಂಧವಾದ.

Angel us, i, *m*. ದೇವದೂತನು, ಅರೂಪಿ ಜೀವಿ, ಸಂಮನಸ್ಸು.

Angell us, i, *m*. ಚಿಕ್ಕ ಮೂಲೆ.

Angin a, æ, *f*. *morbus*, (*croup*) ಸಂದುರೋಗ, ಗದಬಾವು, ಅಗ್ರಮೆಟ್ರಿಗಟ್ಟು—*mentis*, ದುಃಖಾಕ್ರಾಂತ.

Angiport um,i,*n*.—us, ûs, *m*, ಸಂದು ಬೀದಿ, ಮನೇಸಂದು, ಅಡ್ಡಹಾದಿ , ಸುತ್ತಾಗ ಶ್ರೋಣಿ, ಹಾಯಕಡೆಯಿಲ್ಲದಬೀದಿ.

Angl i, orum, ಇಂಗ್ಲೀಷಾರರು, ಇಂಗ್ಲಾಂಡ್ಡೇಶದವರು.

Angli a, æ, ಸದರಿಯುವರ ರಾಜ್ಯ, ದ್ವೀಪಾಂತ್ರ, ಇಂಗ್ಲಾಂಡ್ಡೇಶ.

Anglican us, a, um, *secta*, *ecclesia*, ಸದರಿ ರಾಜ್ಯಕ್ಕೆ ಸ್ವಂತ ಮತಾಚಾರ, ಸರಕಾರದಿಂದ ನಡಿಸಲ್ಪಡುವ ಕ್ರೀಸ್ತುವರ ಬಂದುಬಗೆ ಸಭೆ.

Anglic us, a, um, ಇಂಗ್ಲಾಂಡ್ಡೇಶದ
Anglus, a, um, id.

An go, gis, xi, gere, *v*, *a*, ಕುತ್ತಿಗೆ.. ಕಂಠ..ಕೂರಳು..ಹಿಸುಕ, ಉಸುರು ಕಟ್ಟ, ಉಬ್ಬಸಗೊಳಿಸ—*verucio* ಒದ್ದಾಡ, *v*, *n*, *in morbo* ತಳ್ಳಟ..ತಳ್ಳಣ..ಪಡ — *angi animi*,..*animo* ದುಃಖಾಕ್ರಾಂತ.. ಕ್ಲೇಶ..ಪಡ, ಮನೋಕಳವಳಪಡ.

Angor, is, *m*. ಗಂಟ್ಲಗ್ರ, ಉಬ್ಬಸ—*mentis* ಶೋಕಾಗ್ನಿ, ಆಂದೋಳನೆ, ಅಂಗಲಾಪು, ಕಳವಳ, ಆಧಿ, ಮನಕಲಕ, ಪೀಡೆ, ಪರಿವೇದನೆ—*morbi* ತಳ್ಳದ , ಆರಾಟ ಸಂಕಟ,

Anguicul us, i, *m*. ಸಂಣಹಾವು.

Anguifer, a, um, ಹಾವುಗಳ ಹುಟ್ಟಿಸುವ—fer, i, *m*. ಒಂದು ನಕ್ಷತ್ರರಾಶಿ.

Anguigen a, æ, *m*, *f*,--us, a, um, ಹಾವಿನಲ್ಲಿ ಹುಟ್ಟಿದ, ಸರ್ಪದ ಸಂತತಿ.

Anguill a, æ, *f*. ಹಾವುಮೀನು —

flagellum ಚಾಟಿ.

Anguin us — An gue us, a, um ಸರ್ಪದ, ಹಾವಿನ—*vernatio* ವಸಂತಕಾಲದಲ್ಲಿ ಹಾವು ಪುಚ್ಚುವ ಪೊರೆ.

Anguipe s, dis, ಸರ್ಪದ ಹಾಗೆ ಸೊರಟ ಕಾಲುಳ್ಳವ.

Angu is, is, *m.* ಸರ್ಪ, ಹಾವು, ಕುಂಡಲಿ—*aquæ* ಜಲವ್ಯಾಳ—*varii coloris* ಕೆರೆಹಾವು—*boa* ಹೆಬ್ಬಾವು, V. Serpens.

Angular is, is, *m. f.* e, *n*, –i us, a, um. ಕೋಣ, ಕೋಣವಾದ, ಮೂಲೆಮೂಲೆಯಾದ, ಮೂಲೆಯಲ್ಲಿರಿಸಿದ್ದ—*principalis*, ಮೂಲ್ಯವಾದ—*lapis angularis* ಮೂಲೆ ಕಲ್ಲು, ಕತ್ತರಿಕಲ್ಲು.

Angulatim, *adv.* ಕೋಣದ ಕೋಣಕೋಣಕ್ಕೆ, ಮೂಲೆಮೂಲೆಯಾಗಿ.

Angulat us, Angulos us, a, um, ಕೋಣವಾದ ಮೂಲೆಯುಳ್ಳ.

Angul us, i, *m.* ಮೂಲೆ, ಕೋಣ, ಅಶ್ರಿ, ಅಸ್ರ—*oculi* ಕಂಣು ಕುಣಿಕೆ, ಅಪಾಂಗವು—*externus* ಸೋಗೆ—*viæ, vici* ಸಂದು, ಬೀದಿಮೂಲೆ, in angulo ಏಕಾಂತವಾಗಿ, ಅಂತರವಾಗಿ.

Angustat us, a, um, ಇಕ್ಕಟ್ಟಾದ, ಸಂಕಟವಾದ, ಸಂಕಟದಲ್ಲಿ ಬಿದ್ದ, ಇಮುಕಿಸಿದ, ಸಂಕುಚಿತ, ಇಡಿಕಿದ.

Angustè, *adv.* ಇಕ್ಕಟ್ಟು..ಇಮುಕು..ಕಿರಿದು..ಆಗಿ.

Angusti a, æ, *f*, ಗಂಡ, ಅವಸ್ಥೆ, ಸಂಕಟ, ಅವಧಿ, ಶ್ರಮ—*mentis* ಹೃದಯದಂತಾಪ, ಪ್ರಾಣ, ಕ್ಲೇಶ, ಚಿಂತಾಕ್ರಾಂತ-*pecuniæ* ತಂಟೆ, ತಗಾದಿ, ತೊಂದರೆ—*loci* ಇಕ್ಕಟ್ಟು, ಇಮುಕು, ಅಗಚಾಟ್ಲು, ಒತ್ತಾಟ--*temporis* ಸಮಯದ ಸಂದುಕಟ್ಟು, ಅಭಾವ—*montium* ಗಟ್ಟ, ಗಟ್ಟು,—Angusti æ, arum, *f. pl.* id.

Angusti o, are, ಅಗಚಾಟಲು..ಅವಸ್ಥೆ..ಪಡಿಸ.

Angust o, are, ಇಕ್ಕಟ್ಟುಮಾಡ, ಇಡಿಕಿಡಮಾಡ, ಕಿರಿದುಬಿಡ, ಇಮುಕಿಸ, ಬಿಗಿಸ,—*animam* ಶ್ವಾಸಕಟ್ಟ—iari, ಯಾತನೆ..ವ್ಯಸನ..ಒತ್ತಾಟ..ಅಗಚಾಟ್ಲು..ಪಡ, ಶ್ರಮೆ ಬೀಳ—*vita* ಅವಸ್ಥೆಪಡ, ಕೊರಲ ಮಿಡುಕ.

Angust us, a, um, ಅಗಲ..ವಿಶಾಲ..ಇಲ್ಲದ, ಇಕ್ಕಟ್ಟು..ಇಮುಕು..ಕಿರಿದು..ಆದ, ಸಂಬಾಧ—*locus* ಗೊಂದಿ..ದು.

ANH.

Anhelan s, tis, o, *g*, ಬುಸಬುಸಪಟ್ಟು, ಉಬ್ಬಸದಿಂದ ಆತುರಬಿದ್ದ, ಕುತ್ತರಿಸಿ—*desiderans* ಅತ್ಯಾಸೆಪಟ್ಟ—*inopia* ಸವೆದ ದರಿದ್ರ—*cibum* ಕರ ಬೀಳ.

Anhelanter,—latim, *adv.* ಬುರ್ರನೆ, ಮಹಾ ಆಶೆ..ಬುಸುಬುಸು..ಪದರಪದರ..ವಾಗಿ.

Anhelatio, nis, *f.* ಉಬ್ಬಸ, ಉಶ್ವಾಸ, ನಿಟ್ಟುಸುರು.

Anhelat..*vel*, lit us, ûs, *m. acceptus* ಉಸುರು, ಉಶ್ವಾಸ—*emissus* ನಿಶ್ವಾಸ—*reddere, emittere* ಬಿಡ--*attrahere* ತೆಗೆಯು, V. Halitus, — *vapor* ಉಗಿ, ಆವಿ, ಹೊಗೆ—*suspirium* ನಿಟ್ಟುಸುರು—*lassitudine,vel,suffocatione* ಆಸಪ್ರಾಸ

Anhel o, are, *desidero* ಆತುರಕೊಳ್ಳ, ಇಚ್ಛಿಸಿಕೊಳ್ಳ—*respiro*, ಸುಯ್ಯ, *difficilè* ಶ್ವಾಸ ಪೇರೆಯು, ಶ್ವಾಸಕಟ್ಟ—*odorem dare* ನಾರ, ವಾಸನೆ ಬೀಸ — *cursu* ಕುತ್ತರಿಸ, ಕುತ್ತರಿಸೋಗ.

Anhel us, a, um, ಉಸುರು..ಶ್ವಾಸ..ಕಟ್ಟಿಯಿರುವ, ಕುತ್ತಲಪಟ್ಟು, ಕುತ್ತರಿ, ಶ್ವಾಸ ಕಟ್ಟುವ, V. Asthma.

Anicell a-Aniol a,-Anicul a, æ, *f.*

ಚಿಕ್ಕಮುದಿಕಿ.

Anicetum, i, V. Anisum.

Anil is,anicular is,is,*m.f.* e.*n.*—culos us,a,um. ಮುದಿಕಿಯಾದ, ವೃದ್ಧೆಯಾದ -- ಮುದಿತನದ್ದು.

Anilita s, tis, *f.* ಹೆಂಗಸುರುಗಳ ವೃದ್ಧಾಪ್ಯತನ, ಮುದಿತನವು.

Aniliter, *adv.* ಮುದಿಯ ಮರ್ಯಾದೆಯಾಗಿ—ಮುದಿಕಿಯಾಗಿ.

Anilit or, ari, *v. d.* ಮುದಿ ಆಗ.

Anim a, æ, V. Animus— spiritus. *spîritualis* ಆತ್ಮ—(*philosophia*) ಪುರುಷ, ಕ್ಷೇತ್ರಜ್ಞ, ಚೇತಸ್ಸು, ವಿಜ್ಞಾನ— *ë corpore sejuncta* ಹೊಂದಿದಸು —*animalis* ಜೀವಾತ್ಮ, ಜೀವ, ಚೇತನ ಪ್ರಾಣ, ಅಂತರಾತ್ಮ, ಉಸುರು, ಚೇತನ — animam efflare, exhalare, effundere ಜೀವ ಬಿಡ, ಸಾಯು -- *agere, trahere,* ಅವಧಿ, ಅವಸ್ಥೆಯಾಗಿರ— *adimere--extinguere* ಕೊಲೆಮಾಡ — *projicere* ತನ್ನನ್ನೇ ಕೊಲ್ಲು— *purpuream vomere* ರಕ್ತದೊಂದಿಗೆ ಪ್ರಾಣಬಿಡ — *animæ silentes* ಮೃತವಾದ ಆತ್ಮಗಳು— *putei* ಬಾವಿಯನೀರು — *animalium* ಮೃಗಗಳ ಪ್ರಾಣ, ಜೀವ — *vegetalium* ಸಸ್ಯಾದಿಗಳ ಸಾರ, ಬೆಳೆಯುವಿಕೆ—*aer* ಆಗಾಯ—*ventus* ಗಾಳಿ, ವಾಯು—*animæ amphoræ* ರಸಬಾಂಡ ಬೀಸುವ ವಾಸನೆ V. Anhelitus.

Animabil is, is,*m. f.*e,*n.* ಜೀವತರುವ, ಜೀವಿಸಮಾಡುವ.

Animadversio, nis, *f. visùs* ನೋಟ. ಕಂಡರಿಕೆ—*mentis* ಮನಸ್ಸಿಡುವಿಕೆ, ಗವನ, ಯೋಚನೆ—*punitio* ಶಿಕ್ಷೆ, ಗದರಿಕೆ—*censura* ಜಿಗುಪ್ಸೆ.

Animadversor,is, *m.* ನೋಡಿಕೊಂಡಿರುವವ --- *castigator* ದಂಡಿಸುವವ.

Animadvers us, a,um--*part.* ನೋಡಿ ಯಿರುವಂಥಾದ್ದು — *animadversorum corpora* ಸರಕಾರದಿಂದ ಕೊಂಧಾಕಲ್ಪಟ್ಟವರ ಹೆಣಗಳು.

Animadver to, tis, ti, sum, tere. *v. d. visu* ನೋಡಿಕೊಂಡಿರ, ಕಂಡೆಡ, ಕಂಡುಹಿಡಿಯ, ಕಂಡರಿಸ—*mente* ನಿಷ್ಠಿಡಿಯ, ಮನಸ್ಸಿಗೆಯಿಡ—*vitupero* ಜಿಗುಪ್ಸೆ ಮಾಡ—*curo* ಆಶ್ರೈಸ, ಕಿವಿಕೊಡ-- *punire* ಶಿಕ್ಷಿಸ.

Animæqu us, a, um, V. Æquanimus.

Animal, is, *n* . ಜೀವಕ, ಚೇತನ್ಯ, ಪ್ರಾಣಿ, ಜೀವಿ, ಚೇತನ್ಯಸ್ವರೂಪ, ಚರ —lia ಜೀವರಾಶಿ---*rationale* ಜ್ಞಾನ ಜಂತು, ಮನುಷ್ಯ---*irrationale* ತಿರ್ಯಗ್ಜಂತು, ಜಂತು, ಮೃಗ—*domestica cicurata* ಥೀಕಗಳು.

Animalcul æ, arum *pl.f.* ಅಣುಜಂತುಗಳು.

Animal is, *m, f. e, n.* ಜೀವಕ, ಜೀವಿ, ಪ್ರಾಣಿ, *aer* ತಿಗದುಕೊಳುವ ಶ್ವಾಸ, ಆಗಾಯ—*vincula* ನರ.ಗಳು—*animales dii* ದೇವರನ್ನಲ್ಪಡುವಮನುಷ್ಯರು.

Animan s, tis, o, *g.* ಜೀವತೆಗುವ, ಚೇತನ ವುಳ್ಳವ, ಉಸುರು ಕೊಡುವ--ಪ್ರಾಣಿ, ಜೀವಿ.

Animatio, nis, *f.* ಚೇತನ...ಉಸುರು..ಜೀವ..ಇಡುವಿಕೆ—*idolorum* ಪ್ರಾಣಪ್ರತಿಷ್ಠೆ V. Consecratio.

Animator, is, *m.* ಚೇತನಪಾಲಿಕ, ಜೀವಾಕೊಡುವವ.

Animat us, ûs—*m.* V. Vita.

Animat us, a, um. ಜೀವವುಳ್ಳ, ಚೇತನವಾದ, ಜೀವಿಸಿಕೊಂಡಿರುವ--*excita-*

tus ಧೈರ್ಯಗೊಂಡು, ಕಲಿಯಾದ, ಉತ್ಸಾಹ ಪ್ರೇರೇಪಿಸಲ್ಪಟ್ಟ—*animata et inanimata* ಚೇತನಾಚೇತನ, ಚರಾಚರವು —*intentione* ಮನಸ್ಸಿನಲ್ಲ, ಅಭಿಪ್ರಾಯದೊಂದಿಗೆ.

Animitùs, *adv.* ಪೂರ್ಣಮನಸ್ಸಾಗಿ—ಕೇವಲದಯದಿಂದ—ಚೇತನವಾಗಿ.

Anim o, are, *v. a.* ಬದುಕಿಸ, ಜೀವಿಸಮಾಡ, ಜೀವಕಳೆಯೆಬ್ಬಿಸ—*inffundo* ಅಸು...ಅಸುಧಾರೆ..ಯೆಶೆಯ —*incito* ಹುಷಾರುಕೊಡ, ಪ್ರೇರೇಪಿಸ, ಕೇಗಿಸ —*insufflo* ಊದ—ವುರುಬ, ಬೀಸ.

Animosè, *adv.* ಧೈರ್ಯ..ಕಲಿ..ಗೆಲು...ಪೂರಾಮನಸ್ಸು ಆಗಿ—*invidè* ಮತ್ಸರವಾಗಿ.

Animosita s, tis, *f.* ವೈರವು — ಮತ್ಸರವು, ಚೇರಗೇಡಿ, ಆಕ್ರೋಶದ, ರೋಷ.

Animos us, a, um, ಧೈರ್ಯವಾದ, ಕಲಿ..ಗೆಲುವು..ಚೈತನ್ಯ..ಗುಂಡಿಗೆ..ಯುಳ್ಳ, ಧೃತಿಯಾದ, ಎದೆಯುಳ್ಳ, ದೃಢ...ನಿಶ್ಚೇರ್ತಿ..ಯಾನ.

Anim us, i, *m*, *principium vitæ* ಚೇತ್ರಜ್ಞ, ಜೀವಕಳೆ, ಶ್ವಾಸ, ಜೀವ, ಚೇತನೆ—*cor* ಹೃದಯ, ಉರ, ಮನ, ಮನಸ್ಸು—*fortitudo* ಜವಶಕ್ತಿ, ವೀರಶಕ್ತಿ, ಉರ, ಗೆಲುವು, ಗುಂಡಿಗೆ, ಕವಿತನ —*voluntas* ಅಭಿಪ್ರಾಯ, ತಾತ್ಸರ್ಯ, ಚಿತ್ತ—*mens* ಬುದ್ಧಿ, ಜ್ಞಾನ, ಗುಣ, ಸ್ವಭಾವ— ex-animo ಸಂತೋಷದಿಂದ—*animum recipere* ಕಲಿಯಾಗ — *Deus mundi animus* ಜಗದಂತರ್ಯಾಮಿ (ಜಗನ್ಮೂರ್ತಿ) (*pantheismus.*)

Anis um, i, *n*, ಒಂದು ಬಗೆಜೀರಿಗೆ.

Annal es, ium, *m*, *pl.* ವರುಷಾಂತರಗಳ ವೃತ್ತಾಂತಗಳು, ಹಳೇಪೂರ್ವೋತ್ತರ — lis, is, *m.* ವರುಷಾಂತರ ವರ್ತಮಾನಗಳ ಪುಸ್ತಕ— li a, orum; *pl*, *n.* ವರುಷಾವರುಷದ ಬಲಿಗಳು.

Annal is, *m*, e, *n.* ವರುಷದ, ಸಂವತ್ಸರಂತರವಾದ, ವರುಷವರುಷಕ್ಕೆ ಬರುವ —*lex*, ಉದ್ಯೋಗಕ್ಕೆ ಯುಕ್ತಪ್ರಾಯವನ್ನು ನಿರ್ಣಯಿಸುವ ಕಟ್ಟಳೆ— *clavus* ವರುಷಗಳ ಗುರ್ತಾಗಿ ಗುಡಿಗಳಲ್ಲಿ ರೋಮಾನರು ಹಾಕಿಕೊಂಡಿದ್ದ ಮೊಳೆ-*tempus* ಒಂದು ವರುಷಕಾಲ.

Annari us, a, um, ಒಂದುವರುಷದ, ವರುಷಾಂತರ, ಸಂವತ್ಸರದ—*annaria lex* ಉದ್ಯೋಗಸ್ಥರು ಹೊಂದೇ ವರುಷ ಅಧಿಕಾರ ಮಾಡಬೇಕೆಂದು ಸ್ಥಾಪಿಸಿದ ಹುಕುಮು.

Annè, *adv.* ಹೌದೋ ಯೇನೋ, ಉಂಟೋ ಯಿಲ್ಲವೋ.

Annec to, V. Adnecto—Annellus, V, Anellus.

Annexio, nis, *f.* ಶೇರಿಕೆ, ಕೂಡಿಸುವಿಕೆ.

Annex us, ûs, *m.* ಸಂಯುಕ್ತ, ಸಂಬಂಧನೆ, ಕಟ್ಟು.

Annex us, a, um, *part*, — Adnecto, ಸಂಬಂಧವಾದ, ಅನುಬಂಧಿಸಲ್ಪಟ್ಟ, ಸಂಯೋಜಿತ, ಶೇರಿಕೆಮಾಡ.

Annicul us, a, um, ಒಂದುವರುಷದ.

Annifer, a , um, ವರುಷತುಂಬ ಫಲಿಸುವ, ವರುಷಕ್ಕೊಂದುಸಾರಿ ತನದಂಟು ಹೊಸದಾಗಿ ಚಿಗರುವ.

Anniversari um, i, *n.* ಪ್ರತಿ ವರುಷಿಕ, ಸಂವತ್ಸರಿಕ, — ri us, a, um, ಪ್ರತಿ ವರುಷದ, ಪ್ರತಿವರುಷಕ್ಕೆ ಬರುವ — *arma* ಪ್ರತಿವರುಷದ ಜಗಳ.

Annixè, *adv.* ಬಲವಂತವಾಗಿ, ಪ್ರಯಾಸದೊಂದಿಗೆ, ಬಂಡಾಟವಾಗಿ.

Ann o, are, ವರುಷ ಕಾಲ...ಗಳಿಸ--ಕಳೆಯು.

Annon a, æ, *f.* ರಸ್ತು..ಆಹಾರ..ಸಂಗ್ರಹ, ಮೋದಿಖಾನ, ಸೇವು, ದವಸ ಧಾನ್ಯ, V. Alimentum, cibaria.-*squamosa* (*fructus*) ಶೀತಾಫಲ — *frumenti annua suppedita à privatis* ಉಂಬಳಿ..ಡಿ—*annonæ caritas,incendium, gravitas*,ಧಾನ್ಯ ದವಸದ ಗಿರಾಕಿ, ತೆಗ್ಗು—*vilitas* ಅಗ್ಗವಳಿ—*ingravescere* ದವಸ ಗಿರಾಕಿ ಆಗ, ಬೆಲೆಹೆಚ್ಚ — *annonam incendére,flagellare,onerare* ದವಸ ತೆಗ್ಗಿಸ, ಬೆಲೆ ಹೆಚ್ಚಿಸ—*temperare* ಬೆಲೆನಿಷ್ಪಿಣಸ—*levare* ತಗ್ಗಿಸ — *comprimere, supprimere*, ಗಿರಾಕಿಯಾಗುವಂತೆ ದವಸಗಳ ಅಪಹರಿಸಿಕೊಂಡು ಅಡಗ—*annonæ* ಧಾನ್ಯ ಸಂಬಳ — *diurnæ* ಪಡಿ, ತಿತ್ಯ.

Annonari us, i, *m*, ರಸ್ತು ಸಂಗ್ರಹಿಸನು, ಮೋದಿಖಾನೆಗಾರ, ಸೇವುದಾರ.

Annonari us, a, um, ರಸ್ತು ದವಸ ಧಾನ್ಯಗಳಿಗೆ ಸಂಬಂಧವಾದ—*regiones* ದವಸಗಳನ್ನು ಕಂದಾಯಕ್ಕೆ ಕೊಡುವ ಶೀಮೆಗಳು.

Annon or, ari, *v. d.* ರಸ್ತು ಸೇರಿಸ ಹೋಗ, ವರುಷದ ಖರ್ಚಿಗೆ ಧಾನ್ಯಗಳ ಸಂಪಾದಿಸ.

Annosita s, tis, *f.* ಪಡು ವರುಷದ ಕಾಲ,ದೊಡ್ಡ ಪ್ರಾಯ,ದೀರ್ಘಾಯುಷ್ಯ.

Annos us, a, um, ಹಳೆಬನು—ಳು, ಹಳೇದು, ಬಹುಕಾಲದ್ದು, ಪುರಾತನ.

Annotin us, a, um, ಹಿಂದು ವರುಷದ, ವರುಷದ್ದು.

Annual is,is,*m.f.e,n.* ವರ್ಷಾಂತರ, ವರ್ಷಾವರ್ಷ.

Annuatim, *adv.* ವರುಷ ಪ್ರತಿವರುಷ, ವರುಷಕ್ಕೊಂದು ವರುಷ.

Annular is,is,*m,f.e.n.*us,a,um,ವಸ್ತ್ರ, ಗುಂಡಾಂತರ, ಬಳೆಯಾಕಾರ,ಉಂಗರ ಪ್ರಕಾರ, ವಲಯಾಕಾರ, ಚಕ್ರಾಕಾರವಾದ, ಬಟುವಾದ, ಉಂಗರದ, ಬಳೆಗೆ ಸೇರಿದ — *scala* ಸುತ್ತು ಸುರುಳಾದ ಸೋಪಟಿಗೆ, ಸೋಪಾನ—*creta, color* ಚಿತ್ರಕ್ಕೆ ಬಿಳಿರಂಗು.

Annulat us,a,um, ಪುಂಗರ..ಬಳೆ..ಯುಳ್ಳವ — *pedes annulati* ಸಂಕೋಲೆ ಮಳ್ಳಿ.

Annul us, i, *m*, ಬಳೆ, ಉಂಗರ—*sigillaris* ಮುದ್ರೆ ಯುಂಗರ—*pala annuli* ಉಂಗರದ ಬಿಲ್ಲೆ—*crassus* ಗೋಲುಂಗರ—*sine gemma* ಉಬಟು—*pro manibus* ಲುಂಗರ, ಮನುಂಗರ —*cum gemmis* ರತ್ನಯುಂಗರ *cum smaragdo* ಪಚ್ಚೆಯುಂಗರ-*carbunculo* ಕೆಂಪಿನುಂಗರ *saphiro* ನೀಲದುಂಗರ—*lapide vili* ತರಪುಂಗರ —*pro digitis pedum* ಮೆಂಟಿಕೆ,ಅಣಿಮೆಟ್ಟು—*pollice mulieris* ಗುಂಮಟಿಗೆ,ಪಿಲ್ಲಿ,ಕಾಲುಂಗರ—2o, 3o, *digito* ಮಿಂಚು, 4o, ಮಿಾನುಪಿಲ್ಲಿ—*extremo* ಗೆಜ್ಜೆ ಪಿಲ್ಲಿ—*pro naso mulierum* ಮೂಗುತಿ-*dextrâ parte* ಗಾಡಿ — *sinistrâ* ನತ್ತು, ಕಡ್ಡಿ ಮೂಗುತಿ — *curvus et amplus* ಆಲಕಲ ಮೂಗುತಿ—*sartoris* ಅಂಗುಷ್ಠಾನಿ—*sagittarii* ಅಂಗುಳಿತ್ರಾಣ—*ferreus pro fabris* ಅಣಸು—*freni* ಲಗಾಮು ಗಗ್ಗರಿ,ಬಳೆ—ಕಳಿ, ಅಂಗುಡಿ—*pro naso cameli* ಪಂಚಿಯು ಮೂಗುದಾಣದುಂಗರ —*capillorum* ಸುಳಿಕೂದಲು, ಅಲಕ — *catenæ* ಕೊಂಡಿ — *in quo inseritur catenaria* ಹೆಂಣುಚಿಲುಕು—ad annulos sedere ಎಡಗಡೆಮ್ನಲ್ಲಿ ಕುಳಿತುಕೊಳ್ಳ, V. Compes

—Circulus — *annulus osseus* ಕಡೀದು ಪಕರಣ—*pro elephantis proboscide* ಕಟಕ—*figlinus pro puteis* ವಾ..ಓಡೆ-*herbaceus pro sacrificio* ಕುಶಗ್ರಂಥಿ—*metallicus pro cornibus boum* ಕೋಡಣಸು.

Annumeratio, nis, *f.* ಲೆಕ್ಖ, ಎಣಿಸುವಿಕೆ.

Annumer o, are. ಲೆಕ್ಖ ಮಾಡ, ಲೆಕ್ಖಕ್ಕೆ...ಸೇರಿಸ...ಕೂಡಿಸ—ಎಣಿಸಿನೋಡ, ಸಂಖಿಸ.

Annuntiatio,nis, *f.* (B. M. V. ಮಂಗಳವಾರ್ತೆ) ಅರುಹಿಕೆ, ವರ್ತಮಾನ—V. Publicatio.

Annuntiator, is, *m.* ಅರುಹಿಸುವವ. ದೂತನು.

Annunti o, are. ವರ್ತಮಾನಹೇಳ, ತಿಳಿಯಮಾಡ, ಶ್ರುತಪಡಿಸ, ಹೇಳಿಕೊಂಡ, ಸುದ್ದಿತರ—*gubernator* ಬುಸ್ತಿಯಾರು ಮಾಡ, ಡಂಗುರ ಹೊಯಿಸ.

Annu o, is, i, ere. *v. a.* ಸಂಜ್ಞೆಮಾಡ, ಕೈಕಣ್ಣು ಸಂಜ್ಞೆಗಳಿಂದ ... ಒಪ್ಪಿಕೊಳ — ಕೇಳ—*oculo* ಕಣ್ಣು ಮಿಟಿಕೊಳ್ಳ—*consentire* ಚಿತ್ತಗೊಳ್ಳ, ಒಪ್ಪಿಕೊಳ್ಳ *secretò* ಸಂಕೇತಮಾಡ—*favere* ಕುಮಿಕಿಕೊಡ.

Ann us, i, *m.* ವರುಷ, ಸಂವತ್ಸರ, ಆಯುಸ, ಇಸ್ವಿ, ಸಾಲು, ಸಾಲ್—*ultimus præteritus* ಸಾಲುಗುಜಸ್ತಾ — *præsens* ಸಾಲೆಹಾಲ್—*proximus* ಸಾಲೆಆಯ್ಯಂದ—*solaris* ಸೌರಸಂವತ್ಸರ— *lunaris* ಚಾಂದ್ರಸಂವತ್ಸರ—*in quo* 30 *dies solares cuique mensi* ಸಾವನಸಂವತ್ಸರ—*computum Benares usitatum* ಬಾರ್ಹಸ್ಪತ್ಯ ಸಂವತ್ಸರ, — *ætas* ಪ್ರಾಯ—*meus* ನನ್ನ ಅಧಿಕಾರದಕಾಲ—anni rudes ಚಿಕ್ಕಂದು, ಎಳೇಪ್ರಾಯ—emeriti ದೊಡ್ಡಪ್ರಾಯ—legitimi ಉದ್ಯೋಗಕ್ಕೆ ಯುಕ್ತಾಯುಷ್ಯ- sitientes ಮಳೆ ಇಲ್ಲದ—annos ferre ಜೀವಿಸ, ಉಳಿಯ—exigere ಶತಾಯುಷ್ಯ ಕಳಿಸಿಕೊಳ್ಳ—integer annorum ಪೂರ್ಣಪ್ರಾಯವುಳ್ಳ annus, anno ಒಂದು ವರುಷ ಪೂರ್ತಿ—ad annum ಬರುವ ವರುಷ— in annum ಒಂದು ವರುಷಕ್ಕೆ—vertente anno ಒಂದು ವರುಷದೊಳಗೆ—ineunte ವರುಷದ ಪ್ರಾರಂಭದಲ್ಲಿ—exeunte ವರುಷದಾಖೈರಿನಲ್ಲಿ.

Annu um, i, *n.* ವರುಷದಸಂಬಳ, ವರುಷಾಶನ.

Annu us, a,um. ವರುಷದ, ವಾರ್ಷಿಕ, ವರ್ಷಾಂತ, ಸಂವತ್ಸರಿಕ, ವರುಷಂಪ್ರತಿವರುಷನಡೆಯುವ— annuâ vice ವರುಷಾವರುಷಕ್ಕೆ, ಒಂದುವರುಷ ಬಿಟ್ಟೊಂದು ವರುಷ — *intrâ annuum* ವರುಷಾಂತರ.

Anodyn us, a, um. ನೋವಿಲ್ಲದ, ನೋಯದ—a, orum, *pl. n.* ಶಾಂತಿಕೊಡುವಮದ್ದುಗಳು.

Anomali a, æ, *f.* ವಿಪರೀತ,ವಿಕಲ್ಪ, ಅಕಟವಿಕಟ, ಹಿಂದುಮುಂದು—V. Irregularitas.

Anomal us, a, um, ವಿಪರೀತವಾದ ಕ್ರಮವಿಲ್ಲದ, ಹೊಂದದ, ಸಮವಿಲ್ಲದ.

Anonym us, a, um, ಅನಾಮಕ, ಹೆಸರಿಲ್ಲದ, ಗುಪ್ತ.

Anqui ro, ris, sivi, situm, rere. V. Inquiro. ದರ್ಯಾಪ್ತಿಮಾಡ—*arguere* ತಪ್ಪು..ಸಾಟ—ಸಾಧಿಸ—*aliquem, de aliquo, capitis, de capite,de pecuniá* ಸಾವಿಗೆ ತಕ್ಕಫಿರ್ಯಾದಿಮಾಡ, ದಗಾ..ಲಂಚದನಿಮಿತ್ತ...ವ್ಯಾಜ್ಯವಾಡ.

Anquisitè,*adv.* ಸರಿಯಾಗಿ, ಅಜಮಾಯಿಸಿ, ಜಾಗ್ರತೆಯಾಗಿ.

Anquisitio, nis, *f.* ದರ್ಯಾಪ್ತಿ, ವಿಚಾರಣೆ, ತಲಾಷು — *judiciaria* ಫಿರ್ಯಾದಿ, ವ್ಯಾಜ್ಯ.

Anquisit us, a, um, *part.* Anquire

Ans a, æ, *f.* ಹಿಡಿ, ಪಿಡಿ — *aratri* ಮೇಳಿ..ಣೆ—*instrumenti* ಕಾವು—*molaris* ಬೀಸಿಕಲ್ಲು, ಗೂಟ—*ex fune* ಉಗಟ —*rudentis* ಹೊರಜೀಕುಡಿ— *auriculæ* ಕಿವಿಯಹಾಳಿ—ansas sermonis dare ತನ ಮರ್ಜಿ ಬಾಯಿಮಾತುಗಳಿಂದ ಬೈಲು ಮಾಡ—*occasio* ಹೇತುವೆ, ನಿಮಿತ್ತ.

Ansat a, æ, *f.* V. Jaculum.

Ansat us, a, um, ಹಿಡಿಯುಳ್ಳ, ಕಾವುಉಳ್ಳ.

Anser, is, *m.* ಹಂಸೆ, ಬಾತು—*rufus* ಚಕ್ರವಾಕ, ಚಕ್ಕವಕ್ಕಿ, ರಾಜಕಲ, ಹಂಸ—*femina* ವರಟಿ.

Anserin us, a, um, ಬಾತುಗಳಿಗೆ ಸಂಮಂಧ.

Ansul a, æ, *f.* ಕಿರಿಹಿಡಿ, ವೃಗಗಳ ಕಟ್ಟುವಬಳೆ, ಉಂಗರ, ಸೊಪಾಟಿನ ಬಾರು — ಕಸೆ,

Ant æ, arum, *pl. f.* ಹೊಸ್ತಲು, ನಿಲದ ಕಾಲು—*columna* ಚದರ ಅರ್ಧ ಕಂಭ, ಆಲಯದ ಮೂಲೇಚದರ ಕಂಭ.

Antagonist a, æ, *m.* ಎದುರಾಳು, ಇದಿರುವಾದಿ.

Antarctic us, a, um, ತೆಂಕಲು, ತೆಂಕಣದಿಕ್ಕು, ದಕ್ಷಿಣ ಮೂಲೆ.

Antari us, a, um ನಿಲುವಿನ..ಹೊಸ್ತಲಿನ..ಕಂಭಗಳ..ಸಂಮಂಧ—*bellum* ಪಟ್ಟಣ ಬಾಗಲಿಗೆ ಜಗಳ—*antarii funes* ಒಂದು ಯಂತ್ರ ಬಿಗಿಸುವ ಹೊರಜಿಗಳು.

Antè, *præp. acc.* ಎದುರಿಗೆ, ಸಮ್ಮುಖಕ್ಕೆ, ಅಭಿಮುಖವಾಗಿ, ಮುಂದು, ಮುಂದೆ, ಮೊದಲಾಗಿ, ಮುಂಚಿತವಾಗಿ, ಪ್ರಧಾನವಾಗಿ.

Antè, *adv*, ಮುಂಚೆ, ಮುಂಚಿತ, ಪ್ರಾಕ್ಕಿನಲ್ಲಿ, ಇಂತಮುಂಚೆ, ಮೊದಲು ಮೊದಲಾಗಿ, ಮುಂದು ಮುಂದು, ಪೂರ್ವದಲ್ಲಿ—*longè, multò antè* ಬಹುಕಾಲ...ಹೊತ್ತು ಮುಂಚೆ.

Anteà, *adv.* ಮುಂದು...ಮುಂಚಿತ...ಮೊದಲೇ ಮೊದಲು...ಆಗಿ — *tempus* ಪ್ರಾಕ್ಕು..ಪೂರ್ವ..ಕಾಲ, ತತ್ಪೂರ್ವ.

Anteact us, a, um, ಮುಂಚಿತವಾದ, ತೀರಿಹೋದ, ಹಿಂದಾದ್ದು, ಗತ..ಭೂತ..ವಾದ.

Antec apio, apis, epi, aptum, apere, *v. a.* ಮೊದಲನೆಯಾಗಿ..ಮುಂದಾಗಿ ...ಹಿಡಿಯ—ಗೊಳ್ಳ, ಸ್ವೀಕರಿಸಿಕೊಳ್ಳ, V. Anticipo.

Anteceden s, tis, *o, g.* ಹಿಂದಿನ, ಗತವಾದ, ಪ್ರಾಕ್ಕು—*dignitate* ಮೇಲಾದ, ಶ್ರೇಷ್ಠವಾದ—*in viâ*, ಮುಂದು ಹೋಗುವ...ನಡೆಯುವ.

Antece do, dis, ssi, ssum, dere. *v. a. acc, dat.* ಮುಂಧೋಗ, ನೊಳ, ಮುಂದೆ ನಡೆಯ, ಮುಂದೋರ.

Antecell o, is, ui, ere. ಮೇಲ್ಗೊಳ್ಳ, ಮೇಲಾಗ, ಉತ್ತಮವಾಗ, ದಾಟಿಹೋಗ, ಹಿಂಧಾಕ, ಅಧಿಕರಿಸ, ಗೆಲ್ಲ, ಜಯಿಸ, V. Præcello.

Antecessio, nis, *f.* ನೊಳಿಕೆ, ಮುಂದಾಗಿರಲಿಕೆ, ಮುಂದುರು, ಮುಂದು ಹೋಗುವಿಕೆ—*libri* ಪೀಠಿಕೆ.

Antecessor, is, *m.* ಮುಂದಿನವ, ಪೂರ್ವ—*primus stirpis* ಕೂಟಸ್ತನು,—antecessor es, um, *pl. m.* ಹಿರ್ಯರು, ಪೂರ್ವೀಕರು—*milites* ಅಗಾಡಿರಾಹುತರು.

Antecess us, ûs, *m.* ಮುಂದುರು, ಮುಂದು..ಬರೋಣ-ಹೋಗೋಣ-ನಡಿಯೋ

ಣ — *pecuniam in antecessum,* ಸಂಚಕಾರ—*agricolis* ಕೆಕಾವಿ, *semen iisdem* ಕುಲ.

Antecæni um, i, *n.* ರಾತ್ರಿ ಸ್ವಲ್ಪ ಭೋಜನ— antècœna, æ, *f.* ಊಟದಲ್ಲಿ ಮೊದಲನೇ ಪದಾರ್ಥಗಳ ಯಿಕ್ಕುವಿಕೆ.

Antec urro, urris, ucurri, urrere ursum; curs o, are, ಮುಂಭೋಗು, V. Antecedo.

Antecursor, is, *m.* ಹರಕಾರ, ಕಳವಾರ—*exercitûs,* ಅಗಾಡಿ — *cursores satellites antè magistratus* ಬಾಜು.

Antedi co, cis, xi, ctum, cere, ಮುಂದರುಹಿಸು, ಮುಂಚೆಯೇ ಎಚ್ಚರಿಸು, V. Prædico.

Antedictu s, a, um, ಸದರಿ, ಸದರಹಿ, ಐಜಣ, ಮೇಲೆ ಹೇಳಿದ, ಮಜಕೂರು.

Ante eo, is, ivi, itum, ire, ಮುಂದು ನಡೆಯು, V. Antecello, Præeo.

Ante fero, fers, tuli, latum, ferre, *v. a.* ಮುಂಗೊಂಡು ಹೋಗು, ಮುಂದಕ್ಕೆ ತರು—*gressum* ಮುಂದು ನಡೆಯು, V. Antehabeo.

Antefix us, a, um, ಮುಂಭಾಗಕ್ಕೆ ...ಹಾಕಲ್ಪಟ್ಟ—ಕಟ್ಟಲ್ಪಟ್ಟ — antefix a, orum, *pl. n.* ಒಸಾರ, ಛೋಣಿ, ಕುಂಬಾರನಿಂದ ಮಾಡಿದ ಚಿತ್ರಗಳು.

Antegenit us, a, um, ಮೊದಲು ಹುಟ್ಟಿದ—*puer* ಚೊಚ್ಚಲು ಮೊಗುವು.

Antegre dior, deris, ssus sum, di. ಮುಂದು ನಡೆಯು, V. Antecedo.

Antehab eo, es, ui, itum, ere, ಅಧಿಕ ಪ್ರೀತಿ ಮಾಡು, ಹೆಚ್ಚಮೆಚ್ಚು, ಅತಿಪಕ್ಷ ಮಾಡು.

Antehàc, anteriùs, *adv.* ಮುಂದು ಮುಂದಾಗಿ, ಇಷ್ಟರವರಿವಿಗೂ, ಮುಂಚಿತವಾಗಿ—*supradictus* ಮಜಕೂರು, ಸದರಹಿ.

Ante lat us, a, um, *part.* antefero

Anteli i, orum, *m. pl.* ಬಾಗಲು ಮುಂದೆ ಹಾಕಿದ ದೇವರುಗಳ ವಿಗ್ರಹಗಳು.

Antelogi um, *v.*—loqui um, i, *n.* V. Exordium ಅಭಿಮಾನಕ್ಕೋಸ್ಕರ ಮೊದಲು ಮೊದಲಾಗಿ ಮಾತಾಡಲಪ್ಪಣೆ.

Antelucan us, a, um, (ಪ್ರಾ)ತಕ್ಕಾಲದ, ಬೆಳಗ್ಗೆಮುಂಚಿನ—*cœna* ಬೆಳಗಾಗುವತನಕ ಸಾಗಿದ ರಾತ್ರಿಭೋಜನ—*officium* ಬೆಳಗ್ಗೆಮುಂಚೆ ಆಗಬೇಕಾದವೃತ್ತಿ.

Anteluciò—luculò, *adv.* ಸೂರ್ಯೋದಯಕ್ಕೆ ಮುಂಚೆ, ಮುಂಬಗರಿಗೆ ಮುಂಚೆ, ಬೆಳಗ್ಗೆಮುಂಚೆ.

Anteludi um, i, *n,* V. Præludium.

Antemeridial is, is, *m. f.* e. *n.* ಎಡಮಧ್ಯಾಹ್ನ, ಪೂರ್ವಾಹ್ನ, ನಡುವಗಲಿಗೆ ಮುಂಚೆಮಾದ, ಮಧ್ಯಾಹ್ನಕ್ಕೆಮುಂಚೆ ಆಗುವ.

Antemeridian us, a, um, *id.*

Antemiss us, a, um, *part. arbores* ಎಣ್ಣಿಗೆ ಗುರುತಾಗಿ ನಾಟಿದಮರಗಳು.

Antemi tto, ttis, si, ssum, ttere. V. Præmitto, ಮುಂ..ಮುಂದು ಕಳುಹಿಸು

Antemural e, is. *n.* ಕೋಟೆಚೆಕೋತ್ತಳ, ಅಲಂಗ, ಮುಂಗೋಟೆ.

Antenn a, æ. *f.* ಹಡಗಿನ ಪಠಗಳ ಕಟ್ಟುವ ಅಡ್ಡಮರ—nn æ, arum ಹುಳ.. ಜಂತುಗಳ..ಕೊಂಬುಗಳು.

Anteoccupatio, nis, *f,* ಮುಂಗೊಳ್ಳುವಿಕೆ.

Anteoccup o, are, V. Præoccupo.

Antepar o, are, V. Præparo.

Antepart a, orum, *pl. n.* ಮುಂಸಂಪಾದಿಸಿದ ಆಸ್ತಿ—*patria* ಪಿತ್ರಾರ್ಜಿತ

Antepenultim us, a, um, ಅಂತ್ಯಕ್ಕೆ ಮುಂಚೆ ಯರಡನೇ.

Antepolleo, V. Præcello ಅತಿ ಬಲವಾಗಿರ, ಸಾಮರ್ಥ್ಯದಲ್ಲಿ ಅತಿಕ್ರಮಿಸ.

Antepo no, nis, sui, situm, nere, *v. a.* ಮುಂದುಕರ, ಮುಂದಿಟ್ಟುಕೊಳ್ಳ, ಇದಿರಿಡ, ಪಸಂದಾಗಿ ನೋಡ, ಸಮುಖಕ್ಕೆ ಒಪ್ಪಿಸ, ಇತರಕ್ಕಿನ್ನಾ ಅದು ಪಸಂದು ಮಾಡ, ಅಧಿಕವಾಗಿ ಮೆಚ್ಚಿಕೊಳ್ಳ.

Antepoten s, tis, *o. g.* ಅತಿಬಲ ಶಾಲಿ, ಅತಿ ಸಾಮರ್ಥ್ಯವಾದ.

Antequàm, *adv.* ಮುಂಚೆ, ಅ...ಇ...ದಕ್ಕಿಂತ ಮುಂಚೆ—*veniam,* ನಾನುಬರಲಿಕ್ಕಿಂತ ಮುಂಚೆ.

Anterior, *m. f.* ius, *n.* ಪೂರ್ವ, ಮುಂದಿನ, ಮುಂಚಿನ, ಮುಂದಲ, ಮೊದಲಿನ, ಪ್ರಾಕ್ತಿನ, ಮುಂಗಡೆಯಾದ, ಮುಂಭಾಗ, ಅಗಾಡಿ —*tempus præteritum,* ಪ್ರಾಕ್ತಕಾಲ, ಹಿಂದೆಕಾಲ—*pars* ಅಪುರೋಭಾಗ.

Anteri s, dis, *f.* ಆಧಾರ — *murus* ಅಂಡಗೋಡೆ, ಒರೆ-*ponere* ಇಡ, ಹಾಕ.

Ant es, ium, *pl. m.* ದ್ರಾಕ್ಷಿತೋಟದ ಅಂಚು...ಎಲ್ಲೆಯಲ್ಲಿರುವ ದ್ರಾಕ್ಷಿಗಿಡಗಳ ಸಾಲು —ರಾಣುವೆಯಸ್ತೋಮ — ಪಾದ, ಒಂದುಬಗೆ ನಾಟ್ಯ.

Antesignan us, i, *m.* ಪತಾಕಿಯವ, ನಿಶಾನಿಯವ —V. Vexillarius—Instigator. ಪ್ರೇರೇಪಕ, ಬೋಧಕ.

Antest o, as, iti, atum, are, *v. n. dat.* ಮೊದಲನೇವಶ್ರೇಯಲ್ಲಿರ, ಮುಂದುನಿಲ್ಲು—V. Antecello.

Antest or, ari, *dep.* V. Attestor.

Anteven io, is, i, tum, ire, *v. n. acc. dat.* ಎದುರಾಗಿಹೋಗ, ಬರ — V. Prævenio.

Antever to, tis, ti, sum, tere *v. n.* ಮುಂದಾಗಿಶೇರ, ಒಬ್ಬನಿಗಿಂತ ಮುಂಚೆ ಶೇರ, ಅಧಿಕವಾಗಿ ಮೆಚ್ಚ—V. Anteo.

Antevol o, are, *v. n. acc.* ಮುಂಭಾಗವಾಗಿ ಹಾರ, ಮುಂದೆ ಓಡ.

Anthemi s, dis, *f.* Anthemi um, i, *n.* ಶಾವಂತಿಗೇ ಹೂವು.

Anther a, æ, *f.* ರೋಜ..ಗುಲಾಬಿನ...ಬೀಜ—*medicina* ಬಾಯಿಯ ಹುಂಣುಗಳಿಗಾಗುವ ಪುಷ್ಪದಿಂದ ಮಾಡಿದ ಅವುಷಧ.

Anthin us, a, um, ಪುಷ್ಪಗಳಿಂದ ಮಾಡಿದ್ದು.

Anthologi a, æ, *f.* -- ca, orum—*pl. n.* ಪುಷ್ಪಾದಿಗಳ ಸಂಗ್ರಹ— scientia ಪುಷ್ಪಾದಿಗಳಪರಿಕ್ಷೆ— um, i, *n.* ವಿನೋದ...ಅಲಂಕಾರವಾದ...ವಾಕ್ಯಗಳ ರಚನೆ.

Anthracin us, a, um. ಇದ್ದಲಿನ ಹಾಗೆ ಕಪ್ಪು, ಕರಿಯಾದ, ದುಃಖವಾದ.

Anthraci us, i, ಇದ್ದಲುಗಾರ—tes, æ ಕೆಂಪಿನ ಒಂದುಬಗೆ ರತ್ನ.

Anthra x, cis, *m.* V. Carbunculus —*ulcus* ಹೊಕ್ಕರುಣ್ಣು.

Antropolatr a, æ, *m.* ಜೇಸುನಾಥರ ದೈವತ್ವವನ್ನು ನಿಷೇಧಿಸಿ ಮನುಷ್ಯನಹಾಗೆ ಆರಾಧಿಸುತ್ತಿದ್ದ ಪತಿತ.

Antropomorphit æ, arum, *pl. m.* ಸರ್ವೇಶ್ವರನನ್ನು ಮನುಷ್ಯರೂಪವುಳ್ಳವ ಕೆಂಡೆಣಿಸಿದ ಪತಿತರು.

Anthropophagi a, æ, ಮನುಷ್ಯರ ಮಾಂಸದ ಭಕ್ಷಣೆ.

Anthropophag us, i, *m.* ಆಘೋಂಗ, ಆಘೋಂಬವ, ನರನ್ನ ತಿಂಬುವಕಿರಾತ.

Antiad es, um— Anti æ, arum— *pl. f.* ಸ್ತ್ರೀಹಣೆಯ ಕೂದಲುಗಳು, ವೃಗಳಕಕೇಸುರಿ.

Antica, æ, *f.* (*pars*) ದಕ್ಷಿಣಭಾಗ— *janua* ಮುಂಬಾಗಲು.

Antichrist us, i, *m.* ಕ್ರೀಸ್ತನಾಥರಿಗೆ ವೈರಿ.

Antichton es, um, *m. pl.* ಭೂಚಕ್ರದ ಬೇರೆ ಪಾರ್ಶ್ವದವರು—V. Antipodes.

Anticipatio, nis, *f. cogitatione* ನಿರೀಕ್ಷಣೆ, ಕಾಯೋಣ — *actu* ಮುಂದುಮಾಡೋಣ—*pecuniæ* ಸಂಚಕಾರ.

Anticip o, are, ಮುಂದಾಗಿ...ಮಾಡ —ಬರ—ಹೋಗ—ಹಾದಿನೋಡ-- ನಿರೀಕ್ಷಣೆಮಾಡ.

Antic um, i, n. ಮನೇಬಾಗಲು, ಮುಂಭಾಗ — us, a, um ಮುಂಭಾಗದ, ಎದುರಾದ.

Antidor um, i, *m.* ಕೃತಜ್ಞತೆಯಿಂದ ಕಾಣಿಕೆ, ಅನ್ಯೋನ್ಯವಾದ ದತ್ತ.

Antidot um, i, *n.*—tus, i, *m.* ವಿಷದ ಅನುಪ್ರ, ಗರಳ ಖಂಡನೆ, ವಿಷಚಿಕಿತ್ಸೆ, ಹಂಚಿಕೆ — (*contra dæmonium* ಭೂತಚಿಕಿತ್ಸೆ) — *contra mortem* ಸಂಜೀವಿ, ಸಂಜೀವನಕರಣಿ.

Antigramma, tis, *n.* ಮುಂದಿನ ದಸ್ತೈವಜು, ರದ್ದುಮಾಡುವ ಕರಾರು ನಾಮೆ — ಎದಿರ್ಕಾಗದ.

Antigraphari us, i— Antigraphe-us, i, *m.* ರಾಜಮುದ್ರೆ ವಿಚಾರಣೆಕರ್ತ

Antigraph um, i, *n.* ಮೇಲೆಹೇಳಿದ ಉದ್ಯೋಗ, ಹುಕುಮಿನ ನಕಲು, ಸಂಪ್ರತಿ—ph us, i, *m.* ಹಂಸಪಾದ ಪುಳ್ಳೆ ತಿದ್ದುಪಾಟಿನ ಟಿಪ್ಪಣೆ.

Antilen a, æ, *f.* ಕುದುರೇ ಯೆದೆ.

Antilex is, is, *f.* V. Contumacia.

Antilocutio, nis, *f.*—logi um, loqui um, i, *n.* V. Contradictio, sophisma. ತಂತ್ರನ್ಯಾಯ.

Antipap a, æ, *m.* ಕಳ್ಳಪಾಪು.

Antipathi a, æ, *f.* ಅಸಹ್ಯ, ವಾಕರಿಕೆ, ಪ್ರತಿಕೂಲತೆ, ವಿರೋಧ, ಬಿಕತ್ವ ಗುಣಾಗುಣದ ಪ್ರತಿಕೂಲತ್ವ.

Antiphern a, orum, *n, pl.* ಸತಿಗೆ ಪತ್ನಿವಿವಾಹದ ಸಾಧನ ಪತ್ರಿಕೆಯಿಂದ ಕೊಡುವ ಆಸ್ತಿ—ಬಳುವಳಿ.

Antiphon a, æ, *f.* ದೇವಸಂಕೀರ್ತನದಂತ್ಯದಲ್ಲಿ ಹಾಡುವ ವಾಕ್ಯಗಳು.

Antiphonari um, i, *n.* ಮೇಲೆಹೇಳಿದ ವಾಕ್ಯಗಳ, *vel*, ಸಂಗೀತಗಳ ಪುಸ್ತಕ

Antiphras is, is, *f.* ನಿಜಕ್ಕೆ ವಿರೋಧ ವಾಕ್ಯ, ಸಾರಾಂಶಕ್ಕೆ ಎದಿರಾರ್ಥ.

Antipod es, um, *m. pl.* ಭೂಮಂಡಲದ ಸಮ ಕೆಳ್ಭಾಗ, ಅಂಥಾ ಸೀಮೆಯ ವಾಸಿಗಳು.

Antiquari us, i, *m.* ಹಳೇಪುರಾಣ ಪುಸ್ತಕ ಯಾ ಮುಂತಾದ ವಸ್ತುಗಳನ್ನು ಹುಡುಕುವವ—ಮೆಚ್ಚುವವ, ಪ್ರತಿಬರೆಯುವವ—us, a, um, ಪ್ರಾಕ್ತ, ಪೂರ್ವದ್ದು —*ars antiquaria* ಹಳೇಪತ್ರಿಕೆ..ಪುಸ್ತಕ ಪ್ರೋತಿ ಸರಿನೋಡಿ ಬರೆಯುವವಿದ್ಯ.

Antiquatio, nis, *f.* ಕಟ್ಳೇರದ್ದು ಮಾಡುವಿಕೆ.

Antiquè, *adv.* ಪೂರ್ವದಲ್ಲಿ, ಹಿಂದಿನಕಾಲಾಂತ್ರಗಳಲ್ಲಿ, ಮುಂಯುಗಂಗಳಲ್ಲಿ, ಪ್ರಾಕ್ತಕಾಲ, ಹಳೇತರವಾಗಿ.

Antiquita s, tis, *f.* ಪೂರ್ವಿಕತ್ವ, ಪೂರ್ವಕಾಲವು, ಪ್ರಾಕ್ತ, ಹಿಂಗಾಲ, ಹಳೇಮರ್ಯಾದೆ, ಹಳೇತನ, ಪುರಾತನ.

Antiquitates ಹಳೇಚರಿತ್ರೆಗಳು.

Antiquitùs, *adv.* ಬಹುಕಾಲಕ್ಕೆಮುಂ

ಚೆ, ಪೂರ್ವಕಾಲದಲ್ಲಿ, ಪೂರ್ವದಲ್ಲಿ, ಬಹುಕಾಲಲಾಗಾಯಿತು.

Antiqu o, are. ರದ್ದು ಮಾಡು, ನಿರಾಕರಿಸು— *legem* ಹುಕುಮುತಿರುಗಿಸು.

Antiqu us. a, um. ಪುರಾ, ಪುರಾತನ, ಹಳೆ, ಹಳೇದಾದ, ಚಿರಂತನ, ಪ್ರಾಚೀನ ಪ್ರತನ, ಚಿರತನ, ವೃದ್ಧ, ಸ್ಥವಿರ, ಹಿಂದಣ—V. Vetus—antiquior ಅಧಿಕ ಹಳೇದಾದ, ಮೇಲಾದ, ಅಧಿಕಶ್ರೇಷ್ಠ.

Antirrhetic a, orum, V. Apologeticus.

Antist es, itis, *m.* ಶ್ರೇಷ್ಠಗುರುವು, ಮೇತ್ರಾಣಿ, ಪ್ರಥಮಾಚಾರ್ಯ, ಶಿರಸ್ತಾಚರ್ಕ, ಶ್ರೇಷ್ಠನು, ವಿಚಾರಣೇಕರ್ತೃ.

Antistita, æ, *f.* ಪೂಜಾರಿಗಿತ್ತಿ — V. Abbatissa.

Antistor, is, *m.* ಮೇಲ್ವಿಚಾರಣೆಕಾರ, ಕೆಲಸನಡಿಸುವವ.

Antithes is, is, *f.* Antitheton, i, *n.* ಪ್ರತಿಕಷ್ಟಿ, ಪ್ರಸವ್ಯಯುಕ್ತಿ.

Antithe us, i, *m.* ದ್ವೈತ್ಯ, ದೇವವೈರಿಭೂತ.

Antlia, æ, f. ನೀರಿನಯಂತ್ರ, ನೀರನ್ನು ಮೇಲಿ ಸೇದುವ ಯಂತ್ರ.

Antrorsum, *adv.* ಮುಂದಾಗಿ, ಮುಂಭಾಗದಲ್ಲಿ.

Antr um, i, *n.* ಗವಿ, ಗುಹೆ—V. Caverna.

An us, ûs, *vel,* uis, *f.* ಮುದುಕಿ, ಮುದಿ, ಅಜ್ಜಿ, ವೃದ್ಧಾಪ್ಯಳು, ಗತಾರ್ತವೆ.

An us, i, *m.* ಆಸನ, ಕುಂಡಿ, ಗುದ, ತಿಕ, ಮುಕುಳಿ, ಪಾಯು, ಸೀಧ, ಅಪಾನ, ಅಪಾನದ್ವಾರ — *inflammatio* ಗುದಕಂಡೂತಿ—*fluxus sanguineus* ಗುದಮೂಲ

Anxiè, *adv.* ಚಿಂತೆಯಾಗಿ, ಚಿಂತಿಸಿಕೊಂಡಿರಬಾಗಿ, ಪಸರಪಸರವಾಗಿ.

Anxieta s, tis, *f*—tud o, inis, *f.* ಚಿಂತೆ, ಆಧಿ, ಮನೋವ್ಯಾಧಿ, ತಿಂಕರ, ರಣರಣಕ, ಆರಾಟಸಂಕಟ, ಕಳವಳಿಕೆ, ವ್ಯಾಕುಲತೆ, ವೈಕಲ್ಯ, ಹಲುಬು, ಆಂದೋಳನೆ, ತಾಪತ್ರಯ, ತಲ್ಲಣ, ಜಂಜಾಟ, ಹಂಬಲಿಕೆ—*magna* ಹಸರ ಚಿಂತೆ — *studii* ಲವಲವಿಕೆ.

Anxi o, are, *v. a. mens* ತಲ್ಲಣಪಡಿಸು, ತಲ್ಲಡಿಸು, ಹಲಬಿಸು, ಹಂಬಲಿಸು—*circà unum* ವಿಚಾರಪಡಿಸು, ಕಳವಳಗೊಳಿಸು, ತಿಂಕರಪಡಿಸು, ಚಿಂತೆಕೊಡು.

Anxi us, a, um. *abl. gen. acc.* ಚಿಂತಿಸುವವ, ಅನುಮಾನಪಡುವವ, ಮನಕಳವಳಿಕೆಯಾದ, ವಿಚಾರಪಟ್ಟು— *cogitatio* ಹಂಬಲ—V. Studiosus—*anxius furti* ಕಳ್ಳಗಂಜಿ — *potentiæ* ತನ್ನಧಿಕಾರಕ್ಕೋಸ್ಕರ ಕಾಮಾಕಾರವುಳ್ಳ—*sui* ತನ್ನಂತಸ್ತಿಗೆ ಚಿಂತಿಸಿ—*anxium habere* ಕಳವಳಪಡಿಸು.

AO

Aorist us, i, *m.* ಅನದ್ಯತನ ಭೂತಕಾಲ.

Aort a, æ, *f.* ಹಿರೇನರ, ಪಿಂಗಳನಾಡಿ, ಇಡಾಪಿಂಗಳ.

AP

Apagè,— esis, *ind.* ಆಚೆಗೆ ತಳ್ಳಿಬಿಡು, ಚೀತಕ್ಕೊಂಡೋಗು, ಅಸಡು—apage te à me ನಿಂನ ಮುಖ ನನಗೆ ತೋರಿಸ ಬೇಡ, ತೊಲಗಿಪೋಗು.

Apal a, orum—*pl.n.* ಪೊಸಮೊಟ್ಟೆ

Aparcti as, æ, *f.*— us, i, *m.* ಬಡಗದ ಗಾಳಿ.

Apathi a, æ, *f. præcipuè ergà mundanas voluptates* ವೈರಾಗ್ಯ, ವಿರಕ್ತಿ, ಆಸೇಪಿಚನಷ್ಟ—*ergà Deum* ಭಕ್ತಿಪಿಚನಷ್ಟ, V. Acedia.

Apator, is, *m.* ತಂದೆಯಿಲ್ಲದವ.

Apeliot es, æ, *m.* ಮೂಡಲ ಘಾಳಿ.

Apepsi a, æ, *f.* ಅಜೀರ್ಣ.

Ap er, ri, *m. f.* ಕಾಡಹಂದಿ, ಸೂಕರ, ಕಂದುಕಾಡಹಂದಿ, ಕೋಲ, ಅಡವೀಮಿಕ, ವರಾಹ, ದಂಷ್ಟ್ರಿ, ದಂಷ್ಟ್ರಾಯುಧ, ಕಿರಿ —*dentes* ಕೋರೆಹಲ್ಲು, ಕೋರೆದಂಷ್ಟ್ರ — apros immittere fontibus ತನಗೆ ತಾನೇ ಕೇಡು ಮಾಡಿಕೊಳ್ಳ.

Apercul us, i, *m.* ಕಾಡಹಂದೀಮರಿ.

Aper io, is,ui, tum, ire ತೆರೆಯು — *januam* ತೆರೆಯು—*ligatum* ಬಿಚ್ಚಿಬಿಡು—*mentem suam* ಆಡಿತೋರಿಸ—*sensum* ತಿಳಿಸ, ಟೀರಿಸ—*nexum* ಕೀಲುಬಿಚ್ಚ, ಕಳಚ *secretum* ಗುಟ್ಟುತಿಳಿಸ, ಕಂಡುಕೊಡ—*cor* ಮನಸ್ಸುವಡೆಯು, ಮನಕರಗಿಸ—*flos, se* ವಿಕಶಿಸ—*ludum* ಓದುವಶಾಲೆ ಸ್ಥಾಪಿಸ.

Apertè, *adv.* ಬಯಲು... ಬಹಿರಂಗ ..ಸ್ಪಷ್ಟ..ವಾಗಿ—*sincerè* ನಿಷ್ಕಪಟ..ಸತ್ಯ ...ವಾಗಿ.

Apertiv us,ritiv us, a, um ವಿರೇಚನಕ್ಕೆ...ಸುಖಭೇದಿಗೆ...ಕಾರಣವಾದ.

Apertio, nis, *f.* ತೆರತ, ತೆರೆಯುವಿಕೆ — Apertura.

Apert um, i, *n.* ಬೈಲು, ಮೈದಾನ, ಊರಂಗಳ.

Apertur a, æ, *f.* ಸಂದು, ಕುಕ್ಕೂಲ, —*os instrumenti* ಬಾಯಿ, ಮೂಖು— *humi* ಕೊರಕಲು — *muri* ಕಂಡಿ, ಜೀರು, ಗಂಡಿ.

Apert us, a, um—*janua* ತೆಗೆದ, ತೆರೆದ—*lætus* ಅರವಾದ—*flos* ವಿಕಶಿಸಿದ, ಸ್ಫುಟ—*sincerus* ನಿಷ್ಕಪಟವಾದ — *mare apertum* ನಡುಸಮುದ್ರ—*aperta loca* ಬಟ್ಟಬೈಲು—*in aperto* ಪ್ರಸಿದ್ಧಿಯಾದ.

Ap ex, icis, *m.* ತುದಿ, ಕೊನೆ, ಅಗ್ರ ಶಿಖರ — *capitis* ಜುಟ್ಟು, ಕಬೂಲ — *avis* ಮುಕುಟ — *orthographiæ* ಗುಡುಸು, ಅಕ್ಷರಗಳಧಾತು—*excellentia* ಶ್ರೇಷ್ಠತ್ವ, ಉತ್ತಮತ್ವ—*quæstionis* ಸಂಗತಿಯಸೂಕ್ಷ್ಮ—*pileoli* ಕುಲಾವಿನ ಕಳಸ—*sericus* ಕೂಚಣ, ಗುಚ್ಛ — *equi è pilis bovis grunnientis* ಜಲ್ಲಿಕೆಡಕಾ.

Aphæres is, is, *f.* ವಾಚಕದ ಮೊದಲನೇಪದದ ನಿಷೇಧ.

Apheteri a, orum, *pl. n.* ಪಂದ್ಯದಲ್ಲಿ ಕುದುರೆಗಳು ಓಡುವ ರಂಗದ ಮೊದಲು, ಮುಕ್ತಿಗೆ ಹೊಂದು ಯತ್ನ.

Aphorism us, i, m. ಸೂತ್ರ, ಶ್ಲೋಕ, ಶ್ರುತಿ.

Aphract um, i, *n.* us,i, *m.* ದೋಣಿ.

Aprod es, æ, *m.* Aphron, i, *n.* ಒಂದು ಬಗೆ ಬಿಳೀಗಸಗಸೇಗಿಡ.

Apht æ, arum, *f.* ಅಗ್ಗ—*pessimæ* ಅಗ್ಗಮೇಟಿ ಗಟ್ಟು—*calore interno* ಹುಗಳು, ಮುಳ್ಳಗ್ಗ, ಬಾಯಿ ಹುಣ್ಣು, ಆವಪಾಕ.

Apiari um, i, *n.* ಜೇನುಗೂಡು- rius, i, *m.* ಜೇನುಹುಳ..ಸಾಕುವ—ಮಾರುವವನು.

Apicat us, a, um, ಶಿಖರ, ಮುಕುಟ ಉಳ್ಳವ, ಗುಚ್ಛ...ಜುಟ್ಟು..ಉಳ್ಳ, ಮೊನೆಯಾದ—equus ಜಲ್ಲಿಕುದುರೆ.

Ap is,is, *f.* ಜೇನು..ನೊಣ-ಹುಳ, ಸರಘೆ, ಸಾರಂಗ, ಮಧುಕರ, ಮಧುಲಿಹ, ಮಧುಪ— *alba,* ಕಿರಿ ಜೇನುಹುಳ —*nigra* ತುಂಬೆ, ತುಂಬಿ, ಗುಂಗೆ, ಬಿಂಗ, ಭ್ರಂಗ, ಮರಕುಟಿಕ, ಆರಡಿ—*major* ಇಂದಿಂದಿರ—*species cujus alæ smaragdino colore* ಕಂಚಗಾರ ಜೀರಂಗಿ—*rubra, stimulum habens* ಕಡಜು.

Api um, i, *n.* ಒಂದುಬಗೆ ಸೊಪ್ಪು.

Aplud a, æ, ಹೊಟ್ಟು, ತೃಣ.

Aplust re, is — ra, orum, *pl. m.* ಹಡುಗುಗಳ ನಿಶಾನಿಗಳು.

Apocalyps is, is, *f.* ದರ್ಶನವೆಂಬ ವೇದಾಗಮ, ದರ್ಶನ.

Apoch a, æ, *f.* ರಶೀದಿ, ಸಂದ ಚೀಟು, ಒಪ್ಪಿತ..ಚೆಲ್ಲು..ಸಂದಾಯ..ಚೀಟು. *partium in hæreditate* ಪಾಲಿ ಖತ್ತು-*conventionis* ಕರಾರುನಾಮೆ— *resiliationis* ರಾಜೀನಾಮೆ.

Apoch o, are, *v. a.* ಅಂಥಾ ಚೀಟು ಬರದುಕೊಡು.

Apocop us, i, *m.* ಲೋಪ.

Apocrisiari us, i, *m.* ರಾಜಮುದ್ರೆ ವಿಚಾರಣೆಕರ್ತ, ರಾಜನಿಯೋಗಿ—*legatus* ಸ್ಥಾನಪತಿ, ಅರ್ಚ: ಪಾಪುಸ್ವಾಮಿಯವರ ದೂತನು—*episcopi* ಮೇತ್ರಾಣಿಯವರ ಸ್ಥಾನದಗುರು.

Apocrot us, a, um, ಅಪಮರ್ಯಾದೆಯಾಗಿ ನಡಿಸಲ್ಪಟ್ಟ.

Apocryph us, a, um, *liber* ಬಾಹ್ಯಶಾಸ್ತ್ರ, ಸ್ವಕಪೋಲಕಲ್ಪಿತ—*in scripturâ sacrâ* ವೇದಾಗಮಗಳಲ್ಲಿ ನಿಶ್ಚಯಿಸಲ್ಪಡದ.

Apodect æ, arum, *pl. m.* ಸುಂಕ...ತೆರಿಗೆ..ಕಿಸ್ತು..ಜಮೆಗಾರರು.

Apogæ um, i, *n.* ಉಂನತತ್ವ, ಊಚ, ಉಭ್ರಮ, ಸಂಪೂರ್ಣತೆ— *solis* ಸೂರ್ಯಾಯನದ ವೃನ್ನತ.

Apogæ us, i, *m,* ಕರೇಘಾಳಿ.

Apograph um, i, *n.* ಪ್ರತಿ—*correctum* ಶುದ್ಧ ಪ್ರತಿ, ನಕಲು.

Apolactiz o..are, V. Calcitro.

Apoli s, dis, *m.* ಗಡಿಗಾಪಿತಳ್ಳಲ್ಪಟ್ಟವ.

Apologetic us, a, um, ನ್ಯಾಯಪ್ರಪ್ಪಿಸುವ, ದೂಷಣೆ ಖಂಡ್ರಿಸುವ.

Apologi a, æ, *f.* ದೂಷಣೇ ಖಂಡಿತ, ನ್ಯಾಯ..ಸಾದೃಷ್ಟಾಂತಗಳನ್ನು..ತೋರಿಸುವಿಕೆ.

Apologism us, i, *m.* ತೆಖ್ಖಿ, ತೆಖ್ಖಾಚಾರ-*insania* ಹುಚ್ಚುತನ. V. Apologia.

Apolog us, i, *m.* ಕಥಾತಂತ್ರ, ಸಾಮ್ಯ, ಸಾಮತಿ, V. Fabula. ಮೃಗಗಳ ಸಲ್ಲಾಪ.

Apolyticæ epistol æ, arum, *pl. f.* ಜೇಲಿ ವಿಚಾರಣೆಯಲ್ಲಿ ಗುರುಪಟ್ಟಗ್ರಹಿಸುವದಕ್ಕೆ ಅಪ್ಪಣೆಯಾದ ನಿರೂಪ.

Apophlegmatism us, i, *m.* ಉಗುಳು ನೀರು ಬರಮಾಡುವ ಔಷಧ.

Apophthegma, tis, *n.* ಮಹಾತ್ಮರ ವಾಕ್ಯ, ದಿಟ್ಟವಾದ ಮಾತು.

Apoplectic us, a, um, ಸನ್ನಿ ಸಂಬಂಧವಾದ.

Apoplexi a, æ--xi s, is, *f.* ಬುಗ್ರವಾಯು, ವಾತಸನ್ನಿ, ಸನ್ನಿಪಾತ.

Apori a, æ, *f.* ಸಂದೇಹ, ಸಂಶಯ, — atio, nis, *f. id.* ದಾರಿದ್ರ, V. Dubium.

Apori o, are, *v. a.* ದಾರಿದ್ರತಂದು ಹಾಕ, ಸಂಕಟ...ತೊಂದರೆ...ಪಡಿಸ, ಪೀಡಿಸ.

Apori or, ari *v. d.* ದಾರಿದ್ರ...ಸಂಕಟ..ಮನೋಕಲಕದಲ್ಲಿ...ಇರ—ಬೀಳ, ಯುದ್ಧಾತದರಲ್ಲಿರ, ದಿಕ್ಕು ಕಾಣದ ಹಾಗಿರ.

Aporrhet a, orum, *pl. n.* V. Forica.

Apostasi a, æ, *f.* ಮತಭ್ರಂಶತ್ವ, ಸನ್ಮಾರ್ಗ ಭ್ರಷ್ಟತನ, ದೇವ ಪರಿತ್ಯಾಗ-*voti* ವ್ರತಭಂಗ-*militis* ರಾಜದ್ರೋಹ.

Apostat a, æ, *m.* ಮತದ್ರೋಹಿ, ಮತಭ್ರಷ್ಟ, ವೇದಪರಿತ್ಯಾಗಿ, ಧರ್ಮ

ತ್ಯಾಗಿ —*voti* ವ್ರತ..ಭಂಗನು—ಗೇಡಿ—*miles* ರಾಜದ್ರೋಹಿ.

Apostatic us, a, um, ಮತ..ವ್ರತ..ಸತ್ಯವಿಶ್ವಾಸ..ಭಂಗಕ್ಕೆ ಸೇರಿದ.

Apostema, tis, *n.* ಗುಳ್ಳೆ, ಹುಂಣು, ಕುರುವು—*in palpebra* ಕಂಚಿಟ್ಟಿ—ಟ್ಟು, ಕಣ್ಣು ಕುಟಿ, ಬಿಟ್ಟಿ.

Apostolat us, ûs, *m*. ದೇವ ಸ್ಥಾನಪತೀತನ, ಸತ್ಯವೇದ ಪ್ರಸಂಗಿಸೋಣಕ್ಕೆ ದೈವನೇಮ.

Apostolic us, a, um, ಅಪೋಸ್ತಲರ ಪರಿಮುಖವಾಗಿ ಸ್ಥಾಪಿಸಲ್ಪಟ್ಟಂಥಾದ್ದು, ಸುವಿಶೇಷದ ಪ್ರಸಂಗಿಗಳಿಗೆ ಯುಕ್ತವಾದ, ಅಪೋಸಲರಿಂದ..ಆದ—ಬಂದ.

Apostoli um, i, *n.* ಒಬ್ಬ ಅಪೋಸ್ತಲರ ನಾಮಂಕಿತದಲ್ಲಿ ಕಟ್ಟಿದ ಗುಡಿ.

Apostol us, i. *m.* ಕಳುಹಿಸಲ್ಪಟ್ಟ, ಸ್ಥಾನಾಪತಿ, ಜೇಸುಕ್ರಿಸ್ತುವಿನ ಸ್ವಾಮಿ ವ್ಯರೊಳಗಣ ವೊಬ್ಬನು.

Apostroph a, æ—e, es, *f.* ಸಂಬೋಧನ, ವೊಬ್ಬನ ಆಕ್ಷಾಯ, ಒಬ್ಬನ್ನ ಆಕ್ಷಾನಸಿ ಮಾತಾಡ—*injuriosè* ಮೋಸ್ತವಾಗಿ ಒವೊಬ್ಬನ್ನ ದುಭಾಷೆ ಆಡ, ಮಾಕರಿಸ.

Apostroph us, i, *m*. ಜೀವಾಕ್ಷರಕ್ಕೆ ಬದಲಾದ ಸ್ಪುಟ—ಗುರುತು.

Apotami a, æ, *f*. ಮೋಡೀಖಾನೆ, ರಸ್ತುಗಳವುಗ್ರಾಣ.

Apothec a, æ, *f.* ರಸ್ತು..ತಿಂಬುವ ಪದಾರ್ಥಗಳ..ಗಿಡ್ಡಂಗಿ—ಕೊಠಡಿ—ವುಗ್ರಾಣ

Apothecari us, i, *m.* ಉಗ್ರಾಣಿಕ, ವ್ಯಾಪಾರಿ, ಕೋಮಟಿಶೆಟ್ಟಿ — *medicus* ಮದ್ದು...ಔಷಧ...ಸಿದ್ಧಮಾಡುವವ, ಔಷಧದ ಅಂಗಡಿಕಾರ.

Apothec o, are, ಉಗ್ರಾಣಗಳಲ್ಲಿ..ಬಾನೆಯಲ್ಲಿ..ಸರಕುಗಳನ್ನು ಕೂಡಿಸ—ಅಡುಕ.

Apotheos is, is, *f. statuæ* ಶಿಲಾ ಪ್ರತಿಷ್ಠೆ V. Consecratio—*hominis* ದೇವರೊಳಗೆ...ಸೇರಿಸುವಿಕೆ—ಯೋಪರ್ಣಡಿಸುವಿಕೆ.

Apothes is, is, *f.* ಇರಿಸತಕ್ಕ ಪದಾರ್ಥಗಳ...ಆಯಿಕೊಳ್ಳುವಿಕೆ—ವಿಂಗಡಿಸುವಿಕೆ.

Apozema, tis, *n.* ಸೊಪ್ಪುಗಳ ಕಷಾಯ

Apozem o, are, ಅಂಥಾ ಕಷಾಯ ಕಾಸ.

Apparatè, *adv.* ಗಂಭೀರ್ಯ..ಒಡ್ಡೋಲಗ...ಮಹಾ ಪ್ರಶಸ್ಥ..ಆಡಂಬರ..ವಾಗಿ

Apparatio, nis, *f.* ಅಣಿ, ಆಯಿತ, ತಯಾರು—*pompa* ಒಡ್ಡೋಲಗವು, ಗಂಭೀರ್ಯವು—V. Præparatio.

Apparator, is, *n*. ಅಣಿಗಾರ, ಶೃಂಗಾರಿಸುವ, ತಮಾಷೆ...ಉತ್ಸವಗಳ...ಸಿದ್ಧಮಾಡುವವ — tri x, cis *f.* ಮಾಡುವವಳು.

Apparatori um, i. *n.* ಹೋರಿಗಳ ಸಮೀಪ ವೊಂದು ಬಗೆ ಚಾವಡಿ.

Apparat us, ûs, *m.*—io, nis, *f.* ಆಯಿತ, ಸಂಸಾರ, ಅಣಿ—*pompa* ಒಡ್ಡೋಲಗ, ಆಡಂಬರ, ಅಟಹಾಸ, ಗಂಭೀರ್ಯ—*ambitiosus* ಜಂಭ—*instrumenta* ಸಾಮಗ್ರಿ, ಸಾಮಾನು, ಉಪಕರಣ—*belli* ಯುದ್ಧೋಪಕರಣ, ಮುತ್ತೈದೆ — *domûs* ಕಂಚಮುಟ್ಟುಗಳು, ಬಾಣಿ ಮುಟ್ಟು, ಕೊಠಿ ಮುಟ್ಟು—*textoris* ಆಣಿ, ಅಚುಬಾಬು—*itineris* ಮಾರ್ಗೋಪಕರಣ, ಸಾರಣಿ.

Apparen s, tis, *o. g.* ದೃಶ್ಯ, ದೃಷ್ಟ, ಕಾಣಿಸುವ.

Apparenti a, æ, *f. visio* ಮೋಸ್ತ, ಸಮುಖ, ಸಾಕ್ಷಾತ್ಕರಿಕೆ — *similitudo* ಆಕಾರವು, ರೂಪವು, ಅವತಾರ — *probabilitas* ತೋಚುವಿಕೆ, ಕಾಣಿಸುವಿಕೆ,

ಆಲೋಕನೆ, ಕಾಣಬರೋಣ, ನೋಟ,

Appar eo, es, ui, itum, ere. *v. n. dat. visui* ಕಂಣಿಗೆ ಬೀಳ, ಕಾಣಬರ, ತೋರ, ದೃಶ್ಯವಾಗ, ಗೋಚರವಾಗ, ಮುಖಾವಲೋಕನೆ ಮಾಡ—*confusè, transitorie* ಕಂಣಿಗೆ ಸುಳಿಯ, ಕಂಣುಮುಂದೆ ಸುಳಿದಾಡ — *Deus se manifestare* ಸಾಕ್ಷಾತ್ಕರಿಸ—*menti* ತೋಚ, ಹಾ..ಹೀ..ಗೆ ತೋಚ, ತೋರ.

Apparitio, nis, *f.* ಗೋಚರ, ದೃಷ್ಟಿ, ದರ್ಶನ, ಸಾಕ್ಷಾತ್ಕಾರವಾಗೋಣ — *indistincta* ಕಣ್ಣಿಗೆ ಸುಳಿವು—*munus* V. Apparitor.

Apparitor, is, *m. vici* ತಳವಾರ, ಕುಳವಾಡಿ — *tribûs* ಚಲವಾದಿ—*gubernii* ಜವಾನ, ದಫೆದಾರ್, ವಾಲೇಕಾರ, ಹಸ್ತಕನು, ಅರ್ಜಬೇಗ.

Apparitori um, i, *n.* ಠಾಣ, ಕಂದಾಚಾರದ ಕಚೇರಿ, ಠಿಕ್ಲೇಕಚೇರಿ, ಬಾರಿಗಾಟ ಕಚೇರಿ.

Appar o, are, ತಯಾರು..ಸಿದ್ಧ..ಜಮೆ..ಮಾಡ, ಹೊಂದಿಸ, ಕೂಡಿಸ, ಹುಟ್ಟಿಸ—*fabricam* ಕಪಟ ನೆನಸ—V. Præparo.

Appegi, *præt*, Appingo.

Appellatio, nis. *f. nomen* ನಾಮ, ನಾಮಧೇಯ, ಲಾಂಛನೆ, ಹೆಸರು — *vocatio* ಆಹ್ವಾನನೆ, ಸಮಾಹ್ವಾನನೆ, ಅಭಿಧೆ, ಅಭಿಧಾನ—*impositio nominis* ನಾಮಕರಣ *syllabarum* ಕಾಗುಣಿತ—*in lite* ಮೇಲಾದ ನ್ಯಾಯಸ್ಥಾನಕ್ಕೆ ಏರುವಿಕೆ, ಸದರ ದಾಲತ್ತಿಗೆ ಹೋಗೋಣ.

Appellativ us, a, um, ಜಾತೀ ವಾಚಕ.

Appellator, is, *m.* ವಾದಿ, ನ್ಯಾಯ ತಿರುಗಿಸಿ ಕೇಳಿ ನ್ಯಾಯಸ್ಥಾನಕ್ಕೇರುವವ, ಉತ್ತರ ಫಿರ್ಯಾದಿದಾರ.

Appell o, are--it o..are, *v. a.* ಆಹ್ವಾನಿಸ, ಹೆಸರಿಟ್ಟು ಕರೆಯ, ಹೆಸರಿಕ್ಕ, ನಾಮಕರಣ ಮಾಡ — *nominatim* ಲಾಂಛಿಸ — *præsentes* ಹಾಜರು ಹಾಪಿಸೋದ, ಹಾಜರು ಪಟ್ಟಿ ಓದ—*testes* ಸಾಕ್ಷಿ ಹಾಕ— *ad aliquem* ಮೊರೆಯಿಡ, ಅಭಯ ಕೇಳ—*ad magistratum* ಫಿರ್ಯಾದಿ ಮಾಡ — *ad superiorem curiam* ಸದರ ದಾಲತ್ತಿಗೇರ, ಉತ್ತರ ಸಭೆಗೆ ಫಿರ್ಯಾದಿ ... ಅಪೀಲ್ ... ಮಾಡ --*litteras* ಅಕ್ಷರಗಳ ಕೂಡಿಸ, ಕಾಗುಣಿತ ಮಾಡ, ಒಕ್ಕಲಿಸ—*lectorem* ಓದುವವನಿಗೆ ಅಡ್ಡಲಾಗಿ ತಡೆಯ— *solum* ಭೂಮಿಜಾಗ ಕ್ಷೆಯಾಗಿ ಸಾಗುವಳಿ ಮಾಡ—Appellari ಅ..ಎ..ನಿಸಿಕೊಳ್ಳ.

App ello, ellis, uli, ulsum, ellere, *v. a.* ಸಮೀಪಿಸ, ಸೇರಿಬರ, ಅಂದ---*ad aquam* ತಂನೀರ ತೋರಿಸ---ಕರಕೊಂಡು ಹೋಗ--*ferrum* ಒಬ್ಬನ ಕೊರವಳಿನಲ್ಲಿ ಕತ್ತಿ ಹಾಕ—*ad ripam* ಕೇವಿಗೆ ತಾಕ, ದಡಕ್ಕೇರ—ಸೇರ—ತೆರ—*ad scopulos* ಹಾಸಿಕಲ್ಲುಗಳಲ್ಲಿ ತಾಕ, ಒಡದು ಹೋಗ, —*ad aliquem* ಒಬ್ಬನ ಬಳಿಲಿ..ಸೇರ, ಅಂದಿಕೊಳ್ಳ --- *incitare* ಪ್ರೇರೇಪಿಸ, ಕೆರಳಿಸ — *ad mortem* ತಂನನ್ನು ಹತಮಾಡಿಕೊಳ್ಳ ಕಡ್ಡಾಯ ಮಾಡ—*animum ad uxorem* ಮದುವೆ ಮಾಡಿಕೊಳ್ಳ, ನೆನಸ.

Append eo es, V. Suspendo, ತೂಗುಹಾಕ, ತಗಲಿಡ, ತಗಲಿಹಾಕ.

Appendici um, i. *n.* ಸಂಬಂಧ, ಸಮೀಪವಾದ, ಬಾಬು — *morbus* ಅನೇಕ ರೋಗಗಳ ಸಂಗ್ರಹ.

Appendi x, cis, *f. domûs* ಒಪ್ಪಾರು, ಕಾವಲಿಗೇಮನೆ, ಕೊಟಾರ — *pernentia* ಸಂಬಂಧಿಕೆಯಾದ, ಬಾಬು, ಸೇರಿದ, ಹೊಂದಿರುವ--*scripti* ತಾಜಾಖಲಂ, ಸಂಕ್ಷೇಪ, ಶಿಂಘಾಗ —*spina* ಬಂದುಬಗೆ

ಮುಖ್ಯ ಗಿದ—appendices ಉಪರಾಣುವಿಗೆ ಳು, ಮೊಸ್ಟಾಗಿ ಸೇರಿದ ಭಾಜು.

Appen do, dis, di, sum, dere. *v. a.* *pondus* ತೂಕನೋಡ, ಎಣಿಸಿ ಕೊಡ —*suspendere* ತೂಘಾರ, ಜೋಲ...ಕಟ್ಟ—ಹಾಕ, ನೇಣ್ಹಾಕ, ನೇಥಾಕ, ಸಿಕ್ಕಿಸ—*pretium* ಅಚ್ಚ, ಕೆರ, ಮತಿಸ—*mutuò* ಕಡಾ ಕೊಡ, V. Perpendo.

Appensor, is, *m.* ತೂಕ ನೋಡುವ, ತೂಗಿ ಕೊಡುವವ.

Appens us, um. *part.* ತೂಗಿದ, ತೂಗಿ ಹಾಕಲ್ಪಟ್ಟ—*pretium* ಕೆರ್ತ, ಅಳಿದ, ಕೈಯಲ್ಲಿ ಕೊಟ್ಟ. V. Suspensus.

Appens us, ûs, *m.* ತೂಗುವಿಕೆ, ತೂಕ ನೋಡುವಿಕೆ, ನಿಯರು ಮಾಡುವಿಕೆ.

Appetend us, a, um. ಆಶಿಸತಕ್ಕ, ಇಚ್ಛೈಸಬೇಕಾದ.

Appeten s, tis, *part,* ಅಭಿಲಾಷೆಗಾರ, ಅಭಿಲಾಷಿಸಿ, ಆಶಿಸಿಕೊಂಡು—*ardenter* ಕಾಂಕ್ಷೆ...ಅಪೇಕ್ಷೆ...ವುಳ್ಳ.

Appententer, *adv.* ಆಶೆ..ಅಭಿಲಾಷೆ..ಇಚ್ಛೆ..ಯಾಗಿ.

Appetenti a, æ. ಅಪೇಕ್ಷೆ, ಕಾಂಕ್ಷೆ, —*cibi* ತುದಾಪೇಕ್ಷೆ, ಕರಪೇತಿಕ್ಷನ —*magna* ತುದಾತುರ—*irregularis* ಗುಹ್ಯ ಚಾಪಲ್ಯ—*convalescentis* ಜಿಂಚ್ಹಾ ಚಾಪಲ್ಯ—*defectus appetitûs cibi* ಮಂದಾಗ್ನಿ—*restringere* ಹೊಟ್ಟೆ..ಕರುಳು..ಕಟ್ಟ.

Appetibil is, is, *m. f.* e. V. Appetendus.

Appetitio, nis, *f.* ಹಿಡಿಯ ಕೈ ನೀಡಲಿಕೆ, V. Appetentia.

Appetitor, is, *m.* ಆಕಾಂಕ್ಷೆಗಾರ, ಅತ್ಯಾಸೆಯುಳ್ಳವ, ಕರಪೇತಿಗ.

Appetit us, ûs, *m.* *natura* ಭಾವ, ಗುಣ, ರಸ, -ಈಷಣ, V. Appetentia —*naturales hominis tres*-ಈಷಣತ್ರಯ, —*conjugii* ದಾರೇಷಣ, *prosapiæ* ಪುತ್ರೇಷಣ, *pecuniæ* ವಿತ್ತೇಷಣ, *vel, auri* ಹೊಂನಾಸೆ, *agrorum* ಮಣ್ಣಾಸೆ—*luxuriæ* ಪೆಣ್ಣಾಸೆ.

Appetitus animæ novem, ನವರಸಾದಿಗಳು—1^{us} *laudis* ಶಾಂತರಸ 2^{us} *amoris conjug* ಶೃಂಗಾರರಸ 3^{us} *fortidinis* ವೀರರಸ 4^{us} *misericordiæ* ಕರುಣಾರಸ 5^{us} *admirationis* ಅದ್ಭುತರಸ 6^{us} *hilaritatis* ಹಾಸ್ಯರಸ 7^{us} *terroris* ಭಯಾನಕರಸ 8^{us} *aversionis* ಭೀಭತ್ಸ ರಸ 9^{us} *furoris* ರೌದ್ರರಸ— vitiosi sex ಅರಿಷಡ್ವರ್ಗಗಳು 1^{us} *luxuria* ಕಾಮ 2^{us} *ira* ಕ್ರೋಧ 3^{us} *avaritia* ಲೋಭ 4^{us} *amor* ಮೋಹ 5^{us} *superbia* ಮದ 6^{us} *invidia, vel, odium* ಮಾತ್ಸರ.

Appet o, is, ii, *vel,* ivi, itum, ere. *v. a.* ಕೇವಲ ಇಚ್ಛೈಸ, ಆಶಿಸ—*advenire* ಸಮೀಪಿಸ, ಸೇರ *aggredi* ಮೇಲೆಬೀಳ, ತಾಕ, ಅದರಿಬರ—V. optare—Concupiscere.

App ingo, ingis, egi, actum, ingere *v. a.* ಕಟ್ಟ, ಹಾಕ, ನೆಡ, ಜಚ್ಚುರೂಡಿಸ, ಕೈನೀಡ, ಆತುಕೊಳ್ಳ—*rostro* ಕುಕ್ಕ, ಚುಚ್ಚ—vitam ಕೊಲ್ಲರುದುಕ—humerum gladio ಕತ್ತಿಯಿಂದ ಭುಜ ಕುಟ್ಟ—lapidibus ಕಲ್ಲೆಸೆಯ manibus ಹಿಡಿಯ.

Appi ngo, ngis, nxi, ctum, ngere. ಬರದಾಟಕ್ಕೆ ... ಚಿತ್ರಕ್ಕೆ...ಕಿದ್ದಿಹಾಕ, ಚಿತ್ರಕ್ಕೆ ರಂಗುಹಾಕ, ಚಿತ್ರಬರೆಯ.

Applau do, dis, si, sum, dere. *v. a.*

ಅಪ್ಪಳಿಸಿಕೊಂಡಾಡ, ಸ್ತುತಿಸ, ಘೋಷಿಸ ಅಪ್ಪಳಿಸಿ..ತಟ್ಟಿ..ಶಬ್ದಮಾಡ, ಕಣಾಯಸ್ನ

Applausor, is, *m.* ಕೈಬೊಡುಕೊಂಡು ಸ್ತುತಿಸುವವ.

Applaus us, ûs, *m.* ಸ್ತುತಿ, ಶಾಘಾಷ, ಘೋಷಣೆ, ಮೆಚ್ಚಿಕೆ, ಹೊಗಳು, ಹರುಷದ ಹೊಯಿಲು—*alarum* ಶಿಕ್ಕೆಗಳಬೊಡಿತ—s us, a, um, *part.* ಸ್ತುತಿಸಲ್ಪಟ್ಟ, ಹೊಗಳಲ್ಪಟ್ಟ.

Applicatio, nis, *f.* ಹಚ್ಚುವಿಕೆ, ಹೊಂದಿಕೆ, ಅಂಟಿಸುವಿಕೆ, ಒರಗಿಸುವಿಕೆ—*mentis ad* ಮನಸಿಡುವಿಕೆ, ಆಸಕ್ತಿ, ಜಾಗ್ರತೆ, ಎಚ್ಚರ, ಸಾವಧಾನ. V. Studium — jus applicationis ತನ್ನ ಶ್ರಮದಲ್ಲಿದ್ದ ಸತ್ತ ಅನ್ಯದೇಶಸ್ಥನ ಆಸ್ತಿಮೇಲೆ ಸ್ವತಂತ್ರಿಕೆ.

Applicat us, *vel*, cit us, a, um, *part.* ಹಚ್ಚಿದ—ಜೋಡಿಸಿದ—ಹೊಂದಿಸಿದ—*mente* ಎಚ್ಚರವಾದ—ಗವನವಾದ—ಆಸಕ್ತ — applicato captivo ಶೆರೆಯಾದವನು ಕರೆಯಲ್ಪಟ್ಟ..ಟ್ಟು.

Applic o, as, avi, *vel*, ui, atum, are, *v. a.* ಒರಗಿಸ, ಹಚ್ಚ, ಹೊಂದಿಸ, ಅಂಟಿಸ, ಅಂಟಿಕ್ಕ, *sibi*, ಹಚ್ಚಿ..ಹತ್ತಿಸಿ..ಕೊಳ್ಳ—*mentem* ಮನಕೊಡ, ಮನವಿಡ, ಮನಸ್ಥರಿಸ, ಉದ್ದೇಶಿಸ—se ad aliquem ಒಬ್ಬನ್ನಂದಿಕೊಳ್ಳ, ಆಶ್ರಯಅಪೇಕ್ಷಿಸಿಕೊಳ — verba verbis ಮಾತು ಮಾತಿಗೆ ಹೊಂದಿಸ.

Appo no, nis, sui, situm, nere *v. a.* ಇಡ, ಇಕ್ಕ, ಸ್ಥಾಪಿಸ, ಕೂಡ..ಮೇಲೆ..ಹತ್ತರ..ಮುಂದು..ಹಾಕ—ಮಡಗ, ತಂದುಕೊಡ—*cibum* ಬಡಿಸ, ಇಕ್ಕ, ಅಟ್ಟಿಕ್ಕ—*chirographum* ಕೈಯೊಪ್ಪ...ಒಪ್ಪಿತ...ಹಾಕ—ಇಡ.

Apportatio, nis, *f.* ಕೊಂಡುಬರೋಣ, ಹೊತ್ತುಕೊಳ್ಳೋಣ,

Apport o, are, ಕೊಂಡುಬರ, ಹೊತ್ತುಕೊಳ್ಳ—V. Asporto.

Appositè, *adv.* ತಕ್ಕದ್ದು..ಯುಕ್ತ...ಸರಿ...ಯೋಗ್ಯ ಪ್ರಕಾರ...ಕಾಲೋಚಿತ..ವಾಗಿ..ಆದ.

Appositio, nis, *f.* ಹಾಕುವಿಕೆ, ಇಡುವಿಕೆ, ಹಚ್ಚಲಿಕೆ, ಸೇರಿಸುವಿಕೆ— *cibi* ಅನ್ನ ಬಡಿಸುವಿಕೆ — *textûs* ಉದಾಹರಣ, ದೃಷ್ಟಾಂತ.

Apposit um, i, *n.* V. Epithetum ಗಂಟು, ಅಡಕ್ಕಿಡದ್ದು.

Apposit us, a, um. ಹತ್ತರ..ಮೇಲೆ..ಹಾಕಿದ್ದು — *Conveniens* ಯುಕ್ತವಾದ, ಆಯುಕ್ತವಾದ — *ad officium* ಹೊರರದ.

Apposit us, ûs, *m.* V. Applicatio, medicamen. ಪಟ್ಟಿ, ಲೇಪ.

Appot us, a, um. ಚಂನಾಗಿಕೂಡಿದ—*irrigatus* ಚಂನಾಗಿ ತೊಯ್ವಿಸಲ್ಪಟ್ಟ.

Apprehen do — pren do, dis, di, sum, dere. *v. a.* ಹಿಡಿಯ, ತಕ್ಕೊಳ್ಳ, ಕೊಚ, ಕೈಹಾಕ, ಕಹಿಸ—*spiritus* ಆವಹಿಸ—*injustè* ಆಕ್ರಮಿಸ, ಅಪಹರಿಸ—*avidè* ಗಬರಿ..ಹಿಬ್ಬಿ..ಕೊಳ್ಳ—*dentibus* ಕಚ್ಚಿಕೊಳ್ಳ—*firmiter*—ಅದಿಮಿ..ಜಿಗಿ..ಬಿಗಿ..ಕಡೆ..ಗುತ..ಹಿಡಿಯ—*complecti* ಅವಲಂಬಿಸ, ಅಮರಿಕೊಳ್ಳ—*intelligere* ಗ್ರಹಿಸಿಕೊಳ್ಳ, ಕಂಡು ಹಿಡಿಯ — *admonere* ಖಂಡಿಸ, ಅಡ್ಡಗಿಸ.

Apprehensio, nis, *f.* ಹಿಡಿ, ಹಿಡಿತ, ಹಿಡಿಯೋಣ, ಕೈಹಾಕುವಿಕೆ, ಗ್ರಹಣ, ಸಂಗ್ರಹ, ಹಬ್ಬಿಕೆ—*intelligentiæ* ಕಂಡುಹಿಡಿಯುವಿಕೆ, ಗ್ರಹಿಕೆ, ಮಹತ್ತು—*injusta* ಆಕ್ರಮಣೆ-*dentibus* ಕಚ್ಚಿಕೊಳ್ಳುವಿಕೆ.

Appreti o, are, *pretium* ಖರೀದಿ ನಿರ್ಣಯಿಸ, ನಿಕೆನೋಡ, ಬೆಲೆ..ಸ್ತುತಿಸ—ಕಟ್ಟ, ಉಜ್ಜಾಕಟ್ಟ, ಮಾಡ—*hominem* ಅ

ಶಿಮಾನಿಸ, ಮೆಚ್ಚ.

Apprimà—mè, *adv.* ಘಟ್ಟಿ.. ಬಹುಪಸಂದು..ವಿಶೇಷ..ಪ್ರಧಾನ..ವಾಗಿ.

Apprim us, a, um, ಮೊದಲನೇತರದ್ದು, ಪ್ರಥಮವಾದ, ಮೇಲಾದ.

Approbatio, nis, *f.* ಅಂಗೀಕರ, ಮೆಚ್ಚಿಕೆ, ಒಪ್ಪಿತ, ಮಂಜೂರು, ಸಂಮತ, ಸಮರ್ಥಕ, ಅನುಕರಣ, ಅನು ಮೋದ, ಮೆಪ್ಪು.

Approbator, is, *m.* ಸಂಮತಪಟ್ಟವ, ಮೆಚ್ಚಿಕೊಂಬುವವ, ಸ್ತುತಿಸುವವ, ಮೆಪ್ಪಿನವ.

Approbat us,a, um — ಅಂಗೀಕರವಾದ, ಸಮರ್ಥಕವಾದ — *titulus* ಸಲ್ಲುವ, ಮಂಜೂರು, ಮೆಪ್ಪಾಸ.

Approbè, *adv* . ಬಹುವಶ್ಲೀದು ...ಮಹಾ ಪಸಂದು... ಚೊಕ್ಕಟ... ಔಚಿತ್ಯ... ವಾಗಿ.

Approb o,are. ಅಂಗೀಕರಿಸ, ಮೆಚ್ಚ, ಮೆಪ್ಪು...ಒಪ್ಪು..ಕೊಡ, ಮಂಜೂರುಮಡ, ಅನುಮೋದಿಸ— V. Probo. *favere* ಕುಮರಕೊಡ.

Approb us, a, um . ಮಹಾಪ್ರಮಾಣಿಕ್ಯನು, ಸತ್ಯವಂತ, ಶೀಲಶಾಲಿ.

Appron o, are, *v. n.* ಬಗ್ಗಿಕೊಳ್ಳ—ಮೊಣಕಾಲಿನಮೇಲೆ ಬೀಳ—ಎರಗ V. Procumbo.

Approper o, are, *v. a. et, n.* ತೀವರಿಸ, ಶೀಘ್ರಪಡ—ಪಡಿಸ—V. Propero.

Appropinquatio, nis, *f*. ಸೇರಿಕೆ, ಹತ್ತರವಾಗೋಣ, ಒತ್ತಿಬರುವಿಕೆ — V. Propinquitas.

Appropinqu o; appropi o, are, *v. n.* ಸಮೀಪಿಸ, ಹತ್ತರಿಸ, ಸನ್ನಿಧಿಸ, ಹೊಂದ, ಕದೆಯು, ಅಂಡಿಸ, ಅಂಡಿಸಿಕೊಳ್ಳ, ಸೇರ, ಬಳಿಗೆಬರ, ಒತ್ತಿಬರ, ತಗಲ, ಸೋರ—*proximius* ಹತ್ತಿರಬರ.

Appropriatio, nis, *f.* ಅಕ್ಕಿಸಿಕೊಳ್ಳುವಿಕೆ, ಸ್ವೀಕರ—*injusta* ಅಪಹಾರ.

Appropri o,are, *v. a. sibi* ಸ್ವೀಕರಿಸ, ಅಕ್ಕಿಸಿಕೊಳ್ಳ—*injustè* ಅಪಹರಿಸಿಕೊಳ್ಳ

Appuli, *præt*, appello, is.

Appuls us, ûs, *m.* ಹಾದಿ, ಮಾರ್ಗ, ಹಾಯುಗಡೆ, ಸೇರೋಣ, ಬರೋಣ — *magnatum* ಪ್ರಭುಗಳಸಮುಖ— *pecoris* ನೀರುತೋರಿಸುವಮಡ—sus, a, um, —*part* ಸೇರಿದ, ದಡಸೇರಿದ.

Aprari us, a, um, ಕಾಡಂದಿ, ಬೇಟೆಗೆ ಸಂಬಂಧವಾದ.

Apricatio, nis, *f.* ಬಿಸಲಿಗಿರುವದು.

Apricita s,tis,*f.* ಪರಂಜಳ..ನಿರ್ಮಲ.. ವಾದಕಾಲವು, ಸಾಧಾರಣವಾದರುತುವು, ಸಮ ಶೀತೋಷ್ಣ ವುಳ್ಳಕಾಲ.

Apric o, are, *v. a* . ಬಿಸಲಿಗೆಹಾಕ, ಕಿರಿಗಿಕಾಸ, ಪುಟಲಾಯಿಸ.

Apric or, ari, *v. d.* ಬಿಸಲು ಕಾಸ, ಶಗೆ ಕಾಸ, ಬಿಸಲಿಗೆ..ಹೋಗ, ನಿಲ್ಲ.

Apric us, a, um, ಬಿಸಲಿನಲ್ಲಿರುವ, ಬಿಸಲಿಗೆ ಹಿತವಾದ--*flatus* ತಂಪಾದ ಘಾಳಿ. --*dies* ನಿರ್ಮಲವಾದ ದಿನ.

April is, is, *m.* ಚೈತ್ರಮಾಸವು.

April is, is,*m*, *pl.* e.*n.* ಎಪ್ರಿಯಲು ಮಾಸದ.

Aprin us, a, um, ಕಾಡಂದಿಯ.

Aprugn a, æ, *f.* ಕಾಡಂದೀಬಾಡು.

Apsi s, dis. *f*. ಗ್ರಹಗಳಮಂಡಲ, ನಕ್ಷತ್ರಗಳ ಗೋಳಾಕಾರ — *summa* ಶ್ರೇಷ್ಠೋರ್ಧ್ವಯ—*ima* ನೀಚೋರ್ಧ್ವಯ

Aptat us, a, um, ಜೋಡಿಸಲ್ಪಟ್ಟ, ಸರಿಬೀಳುವಹಾಗೆ ಮಾಡಿದ, ಈಡಾದ, ಹೊಂದಿಸಲ್ಪಟ್ಟ, ಸಮಕಟ್ಟಾದ.

Aptè, *adv.* ತಕ್ಕದ್ದು..ಯುಕ್ತ..ಖೇರು..

ಚಿತೆ..ಅವುಸ..ವಾಗಿ.

Aptitud o, inis, *f*. ಯುಕ್ತಿ, ಸಾಮರ್ಥ್ಯ, ಚಾತುರ್ಯ, (ತಾ)ಣೆ, ಗಾವಣಿ.

Apt o, are. ಹೊಂದಿಸ, ಜೋಡಿಸ, ಕೂಡಿಸ, ಸರಿ.. ಅಚ್ಚುಕಟ್ಟು...ತಯಾರು... ಮಾಡ, ಸವನಿಸ–V. Coapto.

Aptot a, orum *pl*. *n*. ವಿಭಕ್ತಿಪಡದ ವಾಚಕಗಳು.

Apt us, a, um ಹೊಂದಿಕೆಯಾದ, ತಕ್ಕಂಥಾವ–ಳು–ದ್ದು, ಚಾತುರವಾದ, ಸಾಮರ್ಥ್ಯವುಳ್ಳವ, ಅನುಕರಣ, ಗಾವಾಡುವ, ಸಮಕಟ್ಟಾದ, ಯುಕ್ತವಾದ, ಈಡಾದ, ಆಪ್ತ, ಉಚಿತ—*tribus* 3 ಕಾರ್ಯಗಳಿಗೆ ಕೂಡಿದ — *stellis axis* ನಕ್ಷತ್ರ ತುಂಬಿ ಇರುವ ಗಗನ—*exercitus* ಲಘುವಾದ ಸೈನ್ಯ.

Apud, *præp*, *acc*. ಬಳಿಗೆ, ಬಳಿಯಲಿ, ಮನೆಯಲ್ಲಿ — *propè* ಸಮೀಪ, ಅರುಗೆ, ಅಂಚೇಲಿ—*apud regem stare* ರಾಜಸಂನಿಧಿಯಲ್ಲಿ..ಮುಂದಾಗಿ..ಬದೀಕೆ..ಲಿ—*exercitum esse* ದಂಡಿನಲ್ಲಿರ— apud matrem rectè est ತಾಯಿಗೆ ಸೌಖ್ಯವಾಗಿದೆ—auctores ಗ್ರಂಥಕರ್ತರಲ್ಲಿ — juventutem ಬಾಲಕರೊಳು —majores ಹಿರ್ಯರ ಕಾಲದಲ್ಲಿ—apud se esse ಪ್ರಜ್ಞೆಯುಳ್ಳಿರ.

Ap us,odis, *m*. ಒಂದು ಬಗೆ ಹಕ್ಕಿ.

Apusi a, æ, *f*. ಇಲ್ಲದಿರುವಿಕೆ, ನಷ್ಟ, ಕೇಡು.

Apyrin us, a, um, — Apyren us, ಬೀಜಕಾಳು ಇಲ್ಲದ.

Apyrot us, i, ಅಗ್ನಿಯಿಂದ ಕೆಡದ ಮಾಣಿಕ್ಯ.

AQ.

Aqu a, æ, *f*. ನೀರು, ಜಲ, ಉದಕ, ಅಂಬು, ಅಪ್ಪು, ಆಪ, ವಾರಿ, ಸಾರ, ಅರ್ಣ, ತೋಯ, ಶಂಬರ, ಅಂಭ, ಅಂಭಸ್ಸು, ಪಯ, ಪಯಸ್ಸು, ಪಾಥ, ಪಾಥಸ್ಸು, ಪುಷ್ಕರ, ಕೃಪೀಟ, ಕಾಂಡ, ಕುಶ, ಸಲಿಲ, ಪಾನಿ— *linganistæ* ಅಗ್ಗಿಣೆ—*ad pedes abluendos* ಪಾದ್ಯ—*frigida* ತಣ್ಣೀರು, ಶೀತೋದಕ—*gelida* ಹಿಮಾಂಬು—*tepida* ಕೋಬಿಸಿನೀರು, ಬೆಚ್ಚಗೆ—*calida* ಬಿಸಿನೀರು, ಉಷ್ಣೋದಕ—*ebulliens* ಕುದಿಯುವ ನೀರು, ಮರಳುವನೀರು—*dulcis* ಸೀನೀರು, ಒಳ್ಳೇನೀರು—*salsa* ಉಪ್ಪುನೀರು, ಕ್ಷಾರೋದಕ — *corrupta* ಗೊಜ್ಜಲ ನೀರು, ಕೊಳಕು ನೀರು —*calcinea* ಚವುಳುನೀರು — *turbida* ಮಂಡು...ಬೊಗಡ..ನೀರು—*limpida* ತಿಳಿ..ನಿರ್ಮಲ..ನೀರು — *in foramine petræ* ಅದ್ರಿಭಾತೆ-*e scaturigine* ಊಕೆನೀರು—*rupe fluens* ಅದ್ರಿತೋಯ, ಝರಿನೀರು—*fluens* ಹರಿಯುವ—*stagnans, pigra* ಕೂಪಲಜಲ—*aquæ ductûs* ಕಾರಂಜೀನೀರು—*alveoli* ತಿಳಿಮೇನೀರು—*distillata* ಜಲಧೃತಿ; ಬೆವರಿನೀರು—*rosea* ಪಂನೀರು, ನಿಂಬೆ ನೀರು, — *nucis coco* ಎಳ್ನೀರು — *aqua fortis* ಗಂಧಕದ್ರಾವಕ, ಗಂಧಕಧೃತಿ—*cœlestis* ಮಳೇನೀರು—*inter cus,vel,cutem* ಮಹೋದರ—*ex ore,vase, rejecta* ತೀರುಂಬಳ—*urina* ಮೂತ್ರ, ಉಚ್ಚೆ,— aquam præbere ಏಂದು..ಪಾತ್ರ..ಮಾಡ—manibus ಕೈಮಜನಕ್ಕೆ ಕೊಡ—aquam et terram poscere ಜಗಳ ಸೇಮಿಸ—aquam perdere ಕಾಲಾತ್ಯಯಮಾಡ--in aquâ scribere ಶೀಘ್ರವಾಗಿ ಮರಕುಹೋಗ — aqua mihi hæret in hâc causâ ಇದರಲ್ಲಿ ಬರು ಸಂಕಟ, ತೀರದ ಕಾರ್ಯವಾಗಿದೆ--*rubra et superstitiosa pro aspersione* ಓಕುಳಿ, ವಸಂತನೀರು *sacra* ತೀರ್ಥ... *orizæ coctæ* ಗಂಜಿ.

Aqu æ,arum, *pl*.*f*. ಉಷ್ಣೋದಕದ...

ಬುಗ್ಗೆ, ಧಾತುವಿನ...ಜಲದ...ಬುಗ್ಗೆ.

Aquæductio, nis, *f.* ನೀರುಕಟ್ಟುವಿಕೆ, ಹೊಯಿಕೆ, ನೀರು ತಿರುಗಿಸುವಿಕೆ, ನಡೆಸುಗಿಕೆ.

Aquæduct us, ûs, *m.* ಕಾರಂಜಿ, ಕಾಲಿವೆ—*stagni* ಕೆರೆಯ ಕೋಬು, ಮದಗು--*domûs* ಬಚಲು, ಜಲದಾರಿ--jus ನೆರೆಯವನ ಹೊಲದಮೇಲೆ ನೀರು ದಾಟಿಸ ಸ್ವತಂತ್ರ — Aquæ haustus, ûsಅನ್ಯರ ಬಾವಿಯಲ್ಲಿ ನೀರು ಸೇದ ಸ್ವತಂತ್ರ.

Aquagi um,i,*n* . ನೀರೋಟ, ಹಳ್ಳ, ಕುಟ್ಟು ಕಾಲುವೆ.

Aqualic us, i, *m.* ನೀರಿನದೋಣಿ—*pelliceus* ಪಕಾಲಿ—*venter* ಹೊಟ್ಟೆ, ಹೆಗ್ಗರುಳು.

Aqual is, is, *m.* ಚಂಬು, ನೀರುಗಡಿಗೆ, ಕುಡಿ, ಕಳಶ—*parvulum vas* ಹೊಗೆ—*pelliceus* ಪಕಾಲಿ—*exiguus* ಖಿಸ್ತಿ.

Aquan s, tis,o, *g.* ನೀರುಸೇದ..ಹೊಗೆಯ..ಹೋಗುವ.

Aquari um, i, *n.* ನೀರುಗಡೆ, ದೋಣಿ, ಕಾಲುವೆ, ನೀರಿನತೊಟ್ಟಿ, ತೊಡ —*lotoris* ಮಡಿವಾಳನ ತೊಟ್ಟೆ— *eluvies* ಬಚ್ಚಲು, ಜಲದಾರಿ--*tugurium ubi datur aqua* ಅರವಟಿಗೆ, ಚಪ್ಪರ—riol um, i, *n.* ಚಿಕ್ಕ ದೋಣಿ, ಸಣ್ಣ ನೀರು ಗಡೆ.

Aquariol us, i, *m.*—a, æ, *f.* ಸೂಳೆಗಿರಿಯ ಊಳಿಗದವ—ಗಿಡ್ಡಿ, ಸೂಳೇರಿಗ, ಅಂಥ ಮನೆಗೆ ಯಜಮಾನ--*maritus* ಕೇಸುಬುದ್ಧಿಯುಳ್ಳ ಗಂಡ.

Aquari us, i, *m.* ಬಾವಿ...ಕೊಳ...ಕಾಲುವೆ..ಅಗೆಯುವ ವೊಡ್ಡ—*bove* ಪಕಾಲಿಗಾರ— *suprà dorsum* ಕಸ್ತಿ — us, a, um, ನೀರಿನ, ಜಲದ—sulcus ಹೊಲದಲ್ಲಿ ನೀರಿಗೆ ಹಳ್ಳ—aquariæ cotes ಸಾಣೆಕಲ್ಲು—*stella* ಕುಂಭರಾಶಿ.

Aquatè, *adv.* ನೀರೊಂದಿಗೆ.

Aquatic us, a, um,—til is,is, *m. f.* e. *n.* ಆಪ್ಯ, ನಾದೇಯ, ಕಚ್ಚ — *animal* ಜಲದ ಜಂತು, ಯಾದಸ್ಸು, ಜಲಚರ, ಕಂಚರ, ಅಂಬುಚರ, ಜಡಜೀವಿ—*natus ex aquá* ಕಾಂಡಜ—*messis* ನೀರಾವರಿಯಪೈರು, *terra irrigua* ನೀರಾವರಿಯಭೂಮಿ—*pecus* ಮತ್ಸ್ಯ.

Aquatio, nis, *f.* ನೀರುಕುಡಿಸುವಿಕೆ, ತೋರಿಸುವಿಕೆ— *irrigatio* ನೀರು ಹೊಯ್ಯುವಿಕೆ—ಕಟ್ಟುವಿಕೆ—*pro eleemosyna* ಅರವಟಿಗೆ, ಪಾನೀಯಶಾಲೆ—*locus* ನೀರುಗಡೆ—*pluviæ* ಯಥೇಷ್ಟವಾದ ಮಳೆ.

Aquator, is, *m.* ತಂಣೀರನ್ನು ತಂದಿರಿಸುವವ, ನೀರುಗಾರ, *pro agris* ನೀರು ಕಟ್ಟುವವ.

Aquat us, a, um. ನೀರ ರುಚಿಯಾದ, ನೀರು ಬೆರಸಿದ, ನೀರಿನಹಾಗೆ, ನೀರಾದ, ನಿರಾಕಾರವಾದ.

Aquesc o, is, ere , *v. n.* ನೀರಾಗ, ನೀರಾಗಿಹೋಗ, ಕರಗಿಹೋಗ.

Aquiduc us, a, um, ಆರಿಸುವ, ಬಿಡಿಗಿಸುವ, ಇಂಗಿಸುವ.

Aquifoli a, æ, *f.*—um, i, *n.* ಮುಳ್ಳಿನೆಯುಳ್ಳ ಗಿಡ.

Aquifug a, æ, *m.* ಜಲವೈರಿ, ನೀರನ್ನು ಅಸಹಿಸುವ.

Aquigen us, a, um ಕಾಂಡಜ, V. Aquaticus.

Aquil a, æ, *f.* ಹದ್ದು — *constellatio* ಅಗ್ರ ತಾರೆ — *vexillum* ರೋಮಾನರ ಕೊಡಿ.

Aquilegi um, i, *n.* ಕೊಳ..ಸರೋವರ, ಜಲಗಳ ಸಂಗ್ರಹಿಸುವೋಪಾಯ.

Aquil ex, egis, *vel*, icis, *m.* — egus, i, *m.* ನೀರ ವಿಚಾರಣೆಗಾರನು, ಜಲ..

ದ ಬುಗ್ಗೆಗಳನ್ನು ತಿಳಿದುಕೊಳ್ಳುವವ.

Aquilici a, orum, *pl. n.* — um, i, *n.* ಮಳೆಗೋಸ್ಕರ ಅರ್ಪಿಸುವ ಬಲಿ.

Aquilifer, i, *m.* ರೋಮಾನರ ರಾಣುವೆಗಳಲ್ಲಿ ಹದ್ದಿನ ಪ್ರತಿಮೆಯುಳ್ಳ ಝಂಡ ದಾರಕ.

Aquilin us, a, um, ಹದ್ದಿನ— *nasus* ಗಿಣಿ ಮೂಗು.

Aquilo, nis, *m.* ಉತ್ತರ, ಬಡಗದಿಕ್ಕು.

Aquilonal is, is, *m. f.* e, *n.*—aris, ni us, a, um, ಉತ್ತರದ, ಬಡಗಿನ— lon es, um, *pl. m.* ದೆವ್ವ ಘಾಳಿಗಳು, ಝಂಝಂಗಳು, ಬಿರುಘಾಳಿಗಳು.

Aquil us, a, um. *Color* ಬೂದಿಬಣ್ಣ, ಧೂಸರ, ಕಪಿಲವರ್ಣ, V. Fuscus.

Aquim anal e, antil e, inil e, is, *n.* —nari um, aquiminari um, i, *n.* ಜೋಡತಪ್ಪಲೆ, ಪಂಚಪಾತ್ರೆ, ಚಂಬು, ಕರಹಾಡಿ, ಕೈಕಂಣು ಮಜನ ಮಾಡುವ ಪಾತ್ರೆ, ಕವಳಿಗೆ, ನೀರುಕಲಶ.

Ejur o•••are. *v. a.* ಕೂಡದು..ಬೇಡ ...ಒಲ್ಲೆನೆಂದು ಆಣೆಯಿಟ್ಟು ಸಾಧಿಸ, ಉಡಾಫೆಮಾಡ—judicum ಒಪ್ಪನ್ನ ನ್ಯಾಯಾಧಿಪತಿಯೆಂದು ಬೇಡವೆನ್ನ—*bonam copiam* ಸಾಲಗಾರರಿಗೆ ಸಾಲಕ್ಕೋಸ್ಕರ ತನ ಮನೆಮಾರು ಕೊಟ್ಟು ಬಿಡ—*imperium* V. Abdico.

Ejusdemmodi, *gen.* ಒಂದೇತರ, ಸರಿ..ಸಮವಾದ ಪ್ರಕಾರವಾಗಿ.

Ejusmodi—Ejuscemodi, *gen.* ಆತರದ್ದು, ಆಬಗೆಯಾಗಿ—*adv.* ಇಷ್ಟಿಷ್ಟು, ಬಗಳವಾಗಿ—*ità* ಈ ಪ್ರಕಾರ.

EL

Ela bor, beris, apsus sum, bi, *v. d.* ಸರಕೊಂಡುಬೀಳ, ಜರಿಯು, ಜಾರ, ಅಗುಳ, ಜಾರಿಬೀಳ—*è manibus* ಕೈಮಿಂಚ, ಸರರಿಸಿ...ನುಸರಿ..ಹೋಗ—ಬೀಳ—*subito* ಜರಕ್ಕನೆ ಜಾರ—*evadere* ತಪ್ಪಿಸಿ...ತೊಲಗಿ...ಸರರಿಸಿ..ಹೋಗ—vita ಜೀವಬಿಡ—omni suspicione ಸಕಲ ಗುಮಾನಕ್ಕೆ ತಪ್ಪಿಹೋಗ—*amitti* ಕಳದು... ಅಳಿದು..ಹೋಗ, ಬಂದ್ಲಿಲ್ಲದಹಾಗೆ ಹೋಗ—*è memoriâ* ಶುದ್ಧವಾಗಿ ಮರತು ಹೋಗ.

Elaboratè, *adv.* ಚೊಕ್ಕಟವಾಗಿ, ಪ್ರಯಾಸ..ಜಾಗ್ರತೆ...ಯೊಂದಿಗೆ, ಕೈಗಾರಿಕೆಯಾಗಿ.

Elaboratio, nis, *f.*—t us, ûs, *m.* ಜಾಗ್ರತೆ, ಗವನ, ಸಾವಧಾನ, ಪ್ರಯಾಸ, ಗೇಮೆ.

Elaborat us, a, um, *part.* ಜಾಗ್ರತೆಯೊಂದಿಗೆ ಮಾಡಿದ್ದು— *non elaboratum* ಅಶ್ರದ್ಧೆಯಾಗಿ ಮಾಡಿದ್ದು — à parentibus imperium ಹಿರಿಯರ ಪರಾಕ್ರಮಗಳಿಂದ ಪ್ರಾಪ್ತಿಸಿದ ರಾಜ್ಯವು.

Elabor o..are, *v. a.* ಜಾಗ್ರತೆ...ಗವನ..ಪ್ರಯಾಸ...ದೊಂದಿಗೆ ಕೆಲಸವ ಮಾಡು—ಗೆಯ್ಯು, ಸಂಪೂರ್ತಿ ಮಾಡು.

Elact o..are, *v. a.* ಹಾಲು ಮರೆಸು, ಮೊಲೆ ಬಿಡಿಸು.

Elangu eo, es, i, ere — esc o, is, ere, *v. a.* ಕಾರ—*cor* ಗುಂಡಿಗೆ ಹೊಡೆಯು—ಬಿಚ್ಚು, V. Langueo.

Elanguid us, a, um, ನವಿದು, ಹೊರಗಿ ಬೀಳುವ V. Languidus.

Elapid o..are, *v. a.* ಒಂದು ನೆಲದಿಂದ ಕಲ್ಲುಗಳಾಯಿಕೊಂಡು ಕೆಗದುಹಾಕು.

Elaps us, a, um, *part.*—Elabor ಗತವಾದ, ತೀರಿದ, ಹೋದ, ಹಿಂದಿನ, ಸರಕದೆಯಾದ— *tempus* ಪ್ರಾಕು — *evasus de cœde* ಕೊಲೆಗೆ ತಪ್ಪಿಸಿಕೊಂಡ—de pectore ಮರಕುಹೋದ — *à crimine* ತಪ್ಪಿಲ್ಲವೆಂತ ಬಿಡುಗಡೆಯಾದ — in deliquio ಮೂರ್ಛೆಯಾದ - elapsi in pravum artus ಕೀಲುತಪ್ಪಿದ ಅವಯವಗಳು.

Elaque o..are, *v. a.* ಉರುಲು.. ಬಲೆ...ಗಳಿಂದ ಬಿಡಿಸು.

Elarg ior, iris, itus sum, iri, *v. d.* V. Dilargior.

Elassesc o, is, ere, *v. a.* ತಟ್ಟುಮುಟ್ಟು ಬೀಳು.

Elatè, *adv.* ಪ್ರಸಿದ್ಧವಾಗಿ — *nobiliter* ಗಂಭೀರದೊಂದಿಗೆ—*superbè* ಅಹಂಕಾರವಾಗಿ, ಉಬ್ಬಸೆಯೊಂದಿಗೆ.

Elateri um, i, *n. machinæ* ಸೂತ್ರ —*purgativum* ಉಗ್ರವಾದ ವಿರೇಚನಮದ್ದು (ಕಾಗಸವೃಕ್ಷದ ಕಾಯಿಯ ಸಾರದೊಂದಿಗೆ)

Elatio,nis, *f.* ಯೆತ್ತಿಕೆ, ಏರ..ಎತ್ತ್ರ...ಹಾಕುವಿಕೆ—*laus* ಉಬ್ಬಸೆಯಾದ ಸ್ತುತಿ—animi ಮನೋಮಹತ್ವ..ಮಹತ್ತು— voluptuaria ಆನಂದ ಕ್ಷಮಣೆ— *superbia* ಉನ್ನತ, ಹೊಟ್ಟೆ ಉಬ್ಬರ, ತಿಗ್ಗಿಕೆ, ಹೆಚ್ಚಳ, V. Arrogantia.—*funus* ಅಡಕ.

Elatoriè, *adv.* ಉಟಕೆಕೊಚ್ಚಿ, ಅತ್ಯಂತವಾಗಿ, ಹೆಚ್ಚಿನ ವಿವರದೊಂದಿಗೆ.

Elatr o..are. ಬಗುಳ,ಬೊಬ್ಬೆಯಿಡು.

Elat us, a, um, *part. ex,* Effero. ಯೆತ್ತರವಾದ, ಯೆತ್ತಿದ, ಯೆತ್ತಲ್ಪಟ್ಟ, ಉನ್ನತ, ಮಹತ್ತು—*arrogans* ಗರ್ವ..ಕೊಬ್ಬು...ಹೊಟ್ಟೆವುಬ್ಬಸೆ..ಉಳ್ಳ—*sepultus* ಅಡಕಪಟ್ಟ , ಹೂಳಿಡಲ್ಪಟ್ಟ-*divulgatus* ಪ್ರಕಟ — *cupiditate* ಆಶೆಯಿಂದ ಬಡಿಯಲ್ಪಟ್ಟ, ವಮಲ್ಪಟ್ಟ—*verbum* ಉಚ್ಚರಿಸಲ್ಪಟ್ಟ, ಹೇಳಿದ್ದು.

Elaud o..are, *v. a.* ಸ್ತುತಿಸಿ ಹೇಳ—ಕರೆಯ—ವಿಶೇಷಿಸು.

Elaut us, a, um. *part.*

El avo, avas, avi, autum... otum, avare, *v. a.* ತೊಳಿಯು, ತಿಕ್ಕಿ..ಉಜ್ಜಿ..ತೊಳಿಯು—*aliquem bonis* ಒಬ್ಬನ ಆಸ್ತಿಯೆಲ್ಲಾ ಕಿತ್ತುಕೊಳ್ಳ.

Elecebr a, æ, *f.* V.Illecebra. ಮಯಕ ಕೊಡುವ—elecebræ argentariæ ಹಣ ಆಶೆಯುಳ್ಳ ವೇಶ್ಯೆಗಳು.

Electè, *adv.* ತಿಳಿದುಕೊಂಡು, ವಿವೇಕ...ವಿಮರ್ಶೆ...ಆಗಿ—*loqui* ಉಚಿತತರವಾಗಿ ಮಾತಾಡು.

Electio, nis, *f.* ಆರಿಸಿ...ಆಯ್ದು..ಕೊಳ್ಳುವಿಕೆ, ವೃತ್ತಿ, ಹೆರಕ, ಅಭಿಮತ— *eximius* ಉತ್ತಮ, ಅವುಲ್ ತರ, V. Electus.

Electo..are, *v. a.* V. Allicio--Eligo.

Elector, is, *m.*—tri x, cis, *f.* ನೇಮಿಸುವ, ಆರಿಸಿ...ಕೊಳ್ಳುವ...ಆಯ...ಕೊಳ್ಳುವವ--ನು--ಳು, ಇನ್ನೊಬ್ಬನಿಗೆ ಪಟ್ಟ..ವು ಕೊಡ್ಕ..ಕೊಡತಕ್ಕ ಅಧಿಕಾರ--ಸ್ವತಂತ್ರ..ಉಳ್ಳವ.

Electr um, i, *n. flavum* ಕೃಣ ಗಾಜು,ಬಳುಮದ್ದಿ--*aurum* ಕಂದು ಚಿನ್ನ --e us, a, um, ಕೃಣ ಗಾಜಿನಿಂದಾದ್ದು--ic us, a, um, ಮಿಂಚಿನ...ಧಾತು--ಸಾರದ..ಸಂಬಂಧ--*machina* ಅಗ್ನಿಯಂತ್ರ--(*electricité*) ಮಿಂಚು, ಮಿಂಚಿನ--ಶಕ್ತಿನ..ಧಾತು--ಸಾರ--ifer, a, um, ಕೃಣ ಗಾಜು..ಬೆಳಿಸುವ--ಕರುವ--- in us, a, um. V. Succinus.

Electuari um, i, *n.* ಲೇಹ್ಯಪಾಕ--ಪಾಕು--*elicere* ಪಾಕ..ಪಾಕು..ಹಿಡಿಯು.

Elect us, ûs, *m.* ಆರಿಸಿಕೊಳ್ಳುವಿಕೆ, ನೇಮಕ, ಇಷ್ಟ, ಇಷ್ಟೆ.

Elect us, a, um, *part.* eligo ಶ್ರೇಷ್ಠ, ಉತ್ತಮ, ನೇಮಿಸಲ್ಪಟ್ಟವೃತ, ಆರಿಸಿದ, ಏರ್ಪಟ್ಟ--*Dei* ಮೋಕ್ಷಕ್ಕೆ ದೇವರಿಂದ ಆರಿಸಿಕೊಳ್ಳಲ್ಪಟ್ಟ, ಅಜಬೇಕಿಷ್ಟವ,

Eleemosin a, æ, *f.* ಭಿಕ್ಷ, ದಾನ, ಧರ್ಮ, ಆಮಿಷ,ಕಿರುಕೆ--*de messe Bracmanis* ಅಕ್ಷಯಪಾತ್ರೆ--*pugilli orizæ* ಉಪಾದಾನ--*mendico religioso* ಕಾಯಿಕದುಡ್ಡು--*suimet ponderis* ತುಲಾಭಾರ ಮಾಗು.

Elegan s, tis, *o. g.* ಅಂದ, ಚಂದ, ಚೊಕ್ಕಟ, ಚಂದ, ಪಸಂದ, ಷೋಕ್, ನಾಜೂಕು, ಜಾಡು, ಸುಂಮಾನ, ಸಕ್ರುತು — *formâ* ಚಲುವ, *f.* ವಿ--*vestitu* ನಾಗರಿಕ, ಪಿಸ್ತಾಗಾರ..ಗಾತಿ---*gestu* ಅಂದಿಗ... ಗತ್ತಿ, ವಯ್ಯಾರಗಾರ--ಗಾತಿ---*sermo* ಸುಭಾಷೆ, ಜಾರಮೋಕ್ತಿ, ನಯಮಾತು--*sapiens* ಬುದ್ಧಿ..ವಿವೇಕ..ಶಾಲಿ.

Eleganter, ಲಕ್ಷಣವಾಗಿ, ಚೊಕ್ಕಟ..ಪಸಂದ...ವಾಗಿ.

Eleganti a, æ, *f. in vestitu* ಬಿಯ್ಯಾರ, ಪ್ರತಾಪ, ಪಟಾಟೋಪ, ಶೋಂಗರಿಕೆಸ, ನೀಟು, ನಾಗರೀಕತನ--*sermonis* ದೀಪಕವಾಕ್ಪಟುತ್ವ-*formæ* ನಾಜೂಕು,ಮೈಯೊಯ್ಯ ಬಗು, ಸೊಗಸು, ಅಂದ, ಚಲುವು, ಚೊಕ್ಕಟ, ಲಕ್ಷಣ,ಅಲಂಕಾರ--*ingenii* ಯುಕ್ತಿ, ಗಡಿಕೆ.

Elegi a, æ, *f.*—eg us, i, *m.* ದುಃಖಸ್ವರದ ಶ್ಲೋಕಕಾವ್ಯ ಕಥವ್ಯ--ಪದ— a, orum, *pl. n.* ದುಃಖರಾಗ--ಕಲ್ಯ—ac us, a, um. ದುಃಖರಾಗದ.

Eleg o..are, *v. a.* ಅನ್ಯನಿಗೆ ಪರಣ ಸಾಧನದಿಂದ ಕೊಟ್ಟುಬಿಡ.

Element a, orum, *m. pl.* ಭೂತಗಳು, ಮೂಲ — *scientiæ* ವಿದ್ಯಾಮೂಲಗಳು, ಶಾಸ್ತ್ರದ ಮೊದಲನೇ ಪಾಠಗಳು —ಆಧಾರ—*alphabetum* ಓನಾಮಗಳು.

Elementari us, a, um, ವಿದ್ಯಾಶಾಸ್ತ್ರದ ಮೂಲವನ್ನು ಕಲಿಯುವ.

Elementiti us, a, um, ವಿದ್ಯಾಮೂಲವಾದ, ಆದಿಮೊದಲಾದ.

Element um, i, *n,* ಭೂತ— *quinque* ಪಂಚಭೂತಗಳು.

Elench us, i, *m. index,* ಪುಸ್ತಕದ ಅಕ್ಷವಣೆ, ಡಾಬು— *gemma* ಅಡ್ಡಕಾರದ ಮುತ್ತು—*sophisma* ತಂತ್ರನ್ಯಾಯ, V. Critice.

Elephantiac us,—tic us, a, um, V. Leprosus.

Elephanti a, æ—as is, is, *f.* ಆನೆಕಾಲು, ಜೇಕಾಲು. V. Lepra.

Elephantin us, a, um, ಆನೆಯ — *albus velut* ಜಂತದ ಬಣ್ಣವಾದ — *eburneum* ಜಂತದ---libri ರೋಮಾಪುರಿ ಸಭಾ

ಮಂಟಪದ ದಪ್ಪದಗಳು — atramentum ಜಂತ್ರದಿಂದ ಮಶಿ.

Elephantu s, i, m. Elepha s, ntis, m. ಆನೆ, ಗಜ, ಹಸ್ತಿ, ಕರಿ, ವಾರಣ, ವೇತಂಡ, ಇಭ, ಸುಂಡಾಲ, ಕುಂಜರ, ಕುಂಭಿ, ಕರೇಣುಕಾಪತಿ, ಪಂಚನಖ, ಪುಷ್ಕರಿ, ಮತಂಗಜ—femina ಹಸ್ತಿನಿ, ಕರಿಣಿ, ಪಿಡಿ, ಇಭಿ, ಕರೇಣು, ನುಡಿ—pullus ಗಜಡಿಂಭ—ಗುಂಡಿ—exiguus ಗುಂಡಾನೆ—junior ಕಲಭ, ಕುಂಡಿ—regius ಪಟ್ಟದ ಆನೆ, ಪಟ್ಟವರ್ಧನ, ಅಗ್ರೇಭ — albus ಐರಾವತ—venatorius ಒಕ್ಕಾನೆ, ಶಿಕಾರೀ ಆನೆ—domitus ಸಾದು..ಶಿಕ್ಷ..ಆನೆ — cœtus ಇಭತತಿ, ಗಜ..ತಂಡ—ನಿಕರ—ಪುಂಜ — caput sylvatici gregis ಯೂಥಪ—frons elephantis ಕುಂಭ—incessus ಇಭ...ಗತಿ-ಗಾಮಿ —manus ಸುಂಡ್ಲ—dentibus carens ಮಕ್ಕುಣ—dens ದಂತ—stimulus ductoris ಅಂಕುಶ—ductor ಆನೇಮಾಕುತ್, ಮಾವಟೀ, ಮಾವಟಿಗ, ಸಾದಿ, ಹಸ್ತಿಪಕ, ಮಾಪ್ಲಿೀಕ, ಅಧೋರಣನು — locus ubi sedet ಆಸನ —locus in quo alligant ವಾರಿ—locus ubi deprehenduntur ಕೆಪ್ಪ — lasciviens ಮದ್ದಾನೆ, ಗಂಧಸಿಂಧುರ, ಗಂಡೀರವೇದಿ, ಮತ್ತೇಭ —clitellæ ಕಗು — mugitus ಬೃಂಹಿತ, ಘಂಕಾರ, ಆಡಂಬರ — elephantes orbem gerentes ದಿಕ್ಕುಂಭಿಗಳು.

Elevatio, nis, f. ಏರಿಕೆ, ಏತ್ತಿ, ಯೆತ್ತಿಕೆ, ಯೆತ್ತಾಟ, ಉತ್ಸೇಧ, ಉದ್ಧರ—locus supra januam castelli ಹಸ್ತಿನಖ, —ironica ಹಾಸ್ಯಕ್ಕೆ ಸ್ತುತಿ.

Elev o..are. v. a. ಯೆತ್ತ, ಯೆತ್ತಿಸ, ಯೆತ್ತಿಕೊಳ್ಳ, ಉದ್ಧರಿಸ, ಉದ್ಘಾಟನೆಮಾಡ, ಏರಕೆಗಿಯು, ಏತ್ತು, ಊಚಗಿಡ, ಊಹಾಯಿಸ—vocem ಸ್ವರ ಪೆತ್ತ, ರಾಗ.. ಪೆತ್ತ..ಒತ್ತು, ಉಟಾಯಿಸ—oculos timore ಕಂಣುಮಿಕ್ಕರಿಸ — se in aere ಆಕಾಶವೀಧಿಯಲ್ಲಿ ಏರ—elevans et ad terram indignatione projicere ಕಸಿರಿಡಿಯು—detrahere ತಗದುಹಾಕ—alleviare ಹಾರಮಾಡ— ægritudinem ಉಪಶಮಿಸ—auctoritatem ಅಧಿಕಾರೀಮೇಲೆ—ಹೀನ--ಅಪಮಾನ--ನಿಂದೆ--ಪಡಿಸ.

Eli, ind ನನ್ನ ದೇವನೇ. (ಹೆಬ್ರಿ ಯುಶಬ್ದ.)

Elic io, is, ui, itum, ere, v. a. ತೆಗಿಯು, ಹೊರಡಿಸ, ಎಳೆಯು, ಎಳದುಕೊಳ್ಳ—cruorem ನೆತ್ತುರು ತೆಗಿಯು, ಸೋರಿಸ —alvum ಹೊಟ್ಟೆಕಳೆಯು--vocem ಮಾತಾಡಿಸ—veritatem, sententiam alicui ಒಬ್ಬನ ಬಾಯ್ಯಿಂದ ಪುಂಟಾದ್ದು...ಗುಂಡಿಗೆಯಿಂದ ಅಭಿಪ್ರಾಯವನ್ನು..ಹೊರಡಿಸ—iram ಕೋಪ..ರೋಷ.. ಎಬ್ಬಿಸ, —cupiditatem ಆಸೆಹುಟ್ಟಿಸ— excitare ಪ್ರೇರೇಪಿಸ—quærere ಹುಡುಕ, ಆರೈಯು—evocare ಮಂತ್ರದಿಂದ ಕರೆಯು- ಬರಮಾಡ.

Elicit or, ari, v. d. V. Liceor.

Elici us, a, um, ಯೆಳೆಯುವ, ತೆಗೆಯುವ.

Eli do, dis, si, sum, dere, v. a. ಒಡೆಬಡಿಯು, ಒಡದುಹಾಕ, ಮುರಿಸ, ನಸುಕಿಬಿಡ—V. Allido. pediculos ಕುಕ್ಕ—oculos ಕಂಣುಕೀಳ, ಕಿತ್ತುಹಾಕ — fauces ಮೆತ್ರಿಕಟ್ಟ— spiritum ಉಸುರುಕಟ್ಟ — partum ಹೊಡದುಗರ್ಭವಳಿಸ—ignem è silice ಕಲ್ಲಿನಿಂದ ಬೆಂಕಿ ಹೊರಡಿಸ— colores ಪ್ರತಿಬಿಂಬವಾಗಿ ಬಂಣಗಳನ್ನು ತೋರಿಸ — morbum ವ್ಯಾಧಿಗುಣಪಡಿಸ —ægritudinibus elidi ಆಪತ್ತು ವಿಪತ್ತುಗಳಿಂದ ನಲಿದು ಬೀಳ — vocalem ಸಂಧಿಮಾಡ.

El igo, igis, egi, ectum, igere. *v.a.* ಆರಿಸ, ಆರಿಸಿತೆಗೆಯು, ತಿರಿದುಕೊಳ್ಳ, ಆಯುಕೊಳ್ಳ, ವರಿಸ, ವೆರರಿಕೊಳ್ಳ — *aliquem* ಏಪಡಿಸ, ನೇಮಿಸ — *pass.* ಏಪಡ—*diripere* ಅಪಹರಿಸ, ಕೀಳ, ಕೊಯ್ಯ — *stirpes ægritudinis* ಕಸ್ತಿಕಾರಣಗಳನ್ನು ನೀಗಿಸ.

Elimatio, nis, *f.* ಅರದಿಂದ ತೆಗದುಹಾಕುವಿಕೆ, ಒಪ್ಪಮಾಡುವಿಕೆ— ator, is, *m.* ಉಜ್ಜುವ, ಪಿಕಿಲ್ ಗಾರ.

Elimin o···are, *v. a.* ಹೊರಗೆತಳ್ಳ, ಪ್ರದೇಶಕ್ಕೆ ಕಳುಹಿಸಿಬಿಡ, ಅಗಲಿಸಿಬಿಡ —dicta foràs ಬೈಲುಮಾಡ.

Elim o · are, *v. a .* ಅರದಿಂದ ವುಜ್ಜ, ಪಿಕಿಲ್ ಮಾಡ, ಶುದ್ಧಮಾಡ, ತಿದ್ದ.

Elin go, gis, xi, ctum, gere. *v. a.* ನೆಕ್ಕಿಬಿಡ.

Elingu is, *m.f.*e,*n.* ನಾಲಿಗೆಯಿಲ್ಲದ—*mutus* ಮಾನಿ, ಮಾತಾಡಲಾರದವ—*elinguem reddere* ಬಾಯಿನಿಗೆ ಬಾಯ್ಕಟ್ಟು, ಬಾಯ್ದೆರದಂತೆಮಾಡ.

Elingu o··are, *v.a.* ನಾಲಿಗೆ.. ಕತ್ತರಿಸ—ಕಿತ್ತುಹಾಕ.

El ino, inis, evi, itum, inere, *v.a.* V. Delino.

Eliquabil is, *m. f.* e, *n.* V. Liquabilis.

Eliquam en, inis, *n .* ನೀರು , ರಸ, ದ್ರಾವಕ, ದ್ರವ — *succus* ಸಾರ, ರಸ, ಸಾರು—Eliquatio. V. Liquatio.

Eliquesc o, is, ere, *v. n.* V . Colliquesco.

Eliqui um, i, *n.* ಸೋರಿಕೆ—*eclypsis* ಗ್ರಹಣ.

Eliqu o···are,*v.a.* ತಿಳಿಹಾಕ, ಸೋರಿಸ, ಸುರಿಸ—*vocem* ಠಾಗ..ಸ್ವರ···ಮೃದುಮಾಡ, ಸ್ವರಸಂಚಮಾಡ V. Colliquo.

Elisio, nis, *f. vocalis* ಸಂಧಿ, ಲೋಪ—*liquorum* ಘಟ್ಟಿಮಾಡುವಿಕೆ, ಸಾರ.. ರಸ ..ಹಿಂಡ.. ತೆಗೆಯು.

Elis us, a, um, *part . ex.* elido, ಬಿಗಿಯಾದ—*fractus* ಒಡೆದ, ಒಡೆದ—fauces ಕಟ್ಟಿದ ಮೆಟ್ಟಿ—*oculi* ಕಿತ್ತ ಕಂಣುಗಳು—*egressus* ಹೊರಟ— *imago* ಪ್ರತಿಬಿಂಬ.

Eli x, cis, ನೀರುಹೋಗೆ—*columnæ* ಬೋದಿಗೆಯಸುರುಳು.

Elixatìm, *adv.* ಕುದಿಸಿ , ಕಾಸಿ.

Elixatur a , æ , *f.* ಕುದಿಸಲ್ಪಟ್ಟದ್ದು, ಬೆಂದದ್ದು.

Elixir, *ind* ದ್ರಾವಕ—*vitæ* ಸಂಜೀವನ ರಸಾಯನ--*pharmacum* ಕಷಾಯ, *dilutum* ಘಾಂಟ.

Elix o···are, *v. a.* ನೀರಲ್ಲಿ···ಬೈಸ —ಕಾಸ—ಕುದಿಸ·—ಇಮರಿಡ, ಇಂಗಿಸ.

Elix us, a, um , *v .* ಹಸಿಕಟ್ಟಾಗಿರ, ನೀರಲ್ಲಿ ಬೇಸಿದ—ಕಾಸಿದ—ಇಂಗಿದ, ಹಿಂಜಲ್ಪಟ್ಟ.

Ellips is, is, *f.* ಪದಗ್ರಸ , ಲಕ್ಷಣ--*sublata ellipsi sensum complere* ಅಧ್ಯಾಹರಣ···ಹಾರ .

Ellobi um, i, *n.* V. Inauris.

Ellychni um, i , *n .* ಕುಡಿ , ಬತ್ತಿ, ವತಿ, ಹಂಜು. ಕಂಕುಡ, ಸೊಡಲು— *non emunctum* ಕುಡಿಕಟ್ಟು—*extrahere* ಹಾಚ.

Eloc o · ·are, *v. a.* ಬೇರೆಯವರಕ್ಕೆ ತೆಕ್ಕೊಂಡುಹೋಗ , ಸ್ಥಳಬದಲಾಯಿಸ— filiam ತನ್ನಮಗಳನ್ನು ಮದವೆಗೆ ಕೊಡ—*locare* ಗುತ್ತಿಗೆಗೆ ···ಬಾಡಿಗೆಗೆ..ಕೊಡ—pretium ಧಾರಣೆತೀರಿಸ—ನಿಷ್ಕರ್ಷಿಸ — funus ಅಂತ್ಯಕರ್ಮದಖರ್ಚನೇಮಿಸ — sese in morbo curandum ತನ

ವ್ಯಾಧಿ ತೀರಿಸ ರೂಢಿಮಾತಾಡ.

Elocutio, nis, *f.* ಮಾತಾಡುವ ಬಗೆ, ವಚನನಡೆ, ಉಚ್ಚಾರಣೆ, ಒಕ್ಕಣಿಕೆ, ಪ್ರಸಂಗಿಸೋಣ, ವಾಗ್ಜಾಲ.

Elocutor, is, *m.*—tri x, cis, *f.* ಮಾತಾಡುವ...ವನು...ವಳು, ಪ್ರಸಂಗಿ.

Elocut us, a, um. *part.* Eloquor—ori us, a,um, ವಾಕ್ಚಾತುರ್ಯಸಂಬಂಧ, ವಾಕ್ಯಗಳ ರಚನೆಯ.

Elogi um, i, *n.* ಕೀರ್ತನೆ, ಮೆಚ್ಚುವಣಿಗೆ, ಹೊಗಳ್ತೆ, ಸ್ತೋತ್ರಮಾತು—*facere* ಸ್ತುತಿಸ V. Inscriptio—*litis summarium* ವ್ಯಾಜ್ಯದ ಪ್ರಧಾನವಿಷಯಗಳು—*testimonium* ಸಾಕ್ಷೀ ದೃಷ್ಟಾಂತ—*petitio* ನ್ಯಾಯಗಳಿಂದ ಸ್ಥಾಪಿತವಾದ ಬಿನ್ನಹ—ultima elogia ಮರಣಸಾಧನ.

Elong o···are.*v.a.* ಉದ್ದಮಾಡ, ಸಾಗಿಸ, ಸಾಗಬಡಿಯ, ನಿಗಚ, ನಿಗರಿಸ—*expandere* ವಿಸ್ತರಿಸ, ವಿವರಿಸ.

Elohim, *m. ind.* ಸರ್ವೇಶ್ವರನು—*dii* ದೇವರುಗಳು—*judices* ನ್ಯಾಯಾಧಿಪತಿಗಳು—*Eloi* ನನ್ನದೇವನೇ.

Eloquen s, tis, *o. g. sermo* ಸುಸಲ್ಲಾಪ, ಸುಭಾಷಿತ—*vir* ವಾಗ್ಮಿ, ಮಂಜುಳಭಾಷಿತ, ವಾಗ್ಸಾಮರ್ಥ್ಯನು, ವಾಗ್ಧಾರಾಳವುಳ್ಳವ.

Eloquenter, *adv.* ಸುಭಾಷಿತವಾಗಿ—*et facundè loqui* ವಕ್ಕಣೆಯಾಗಿ..ಧಾರಾಳವಾಗಿ...ಮಾತಾಡ.

Eloquenti a, æ, *f.* ವಾಗ್ಮಿತ್ವ, ವಾಕ್ಚಾತುರ್ಯ, ಸುವಚನ, ವಾಗ್ಧಾರಾಳ, ಮೇಲ್ಬಾಚಕ, ಮಂಜುಳಭಾಷೆ, ವಾಗ್ಝೋರಣೆ, ವಾಕ್ಕಲಂಕಾರ.

Eloqui um, i, *n.* ಪ್ರಸಂಗ, ಸಂಭಾಷಣೆ—*verbum* ವಾಕ್ಯ, ಉಚ್ಚಾರಣೆ.

Elo quor, queris, cutus sum, qui, *v. d.* ಮಾತಾಡ, ಹೇಳ, ವಚನಿಸ, ಉಚ್ಚರಿಸ, ಒಕ್ಕಣಿಸ—*edissere* ವಿವರಿಸ, ತಿಳಿಸ—*in venditione* ಬೆಲೆಕಂಡಿತಹೇಳ.

Elot us, a, um, *part. ex.* Elavo.

Elu ceo, ces, xi, cere, *v. n.* ಪ್ರಕಾಶಿಸ, ಪ್ರಕಟವಾಗ, ಹೆಸರುಗೊಳ್ಳ—elucet per id ಇದರಿಂದ ತಿಳಿವಾಗುತ್ತೆ—spes ನಂಬಿಕೆಯುಂಟು, ಕಾಣುತ್ತೆ.

Elucesc o, is, ere. *v.n.* ಕಾಣಿಸ, ಕಾಣ, ತೋಚ, ತೋರ, ತಿಳಿವು...ತೆರವು...ಆಗ.

Elucidatio, nis, *f.* ವ್ಯಾಖ್ಯಾನ, ತಿಳಿಸುವಿಕೆ, ಟಿಪ್ಪಣೆ—*Elucido* V. Dilucido.

Eluctabil is, *m. f.*e,*n.* ಬಂಡಾಟ..ದುರ್ಘಟನೆ..ಕಷ್ಟ..ಪ್ರಯಾಸ..ಆದ.

Eluctan s, tis, o, *g*, ಹೆಣಗಾಡುವ, ಒದ್ದಾಡುವ, ಕಟು ಪ್ರಯಾಸಪಡುವ.

Eluctatio. V. Luctatio.

Eluct or..ari, *v. d. acc.* ಬಂಡಾಟವಾಗಿ ಹೊರಡ, ಪ್ರಯಾಸದೊಂದಿಗೆ..ಮುಗಿಸ—ಸೆರವೇರಿಸ—ಜಯಿಸ—ನಿಭಾಯಿಸ, ನಡುಕಟ್ಟಿ..ತಲೆಬೊಡುಕೊಂಡು..ಮಾಡ—angustias ಕಣಿಮೆಯಿಂದ ಹೊರಡ—offensam ಅಪಮಾನನೀಗಿಸ.

Elucubr o..are, *v. a.* or, ari, *v. d.* ರಾತ್ರಿಕಾಲದಲ್ಲಿ..ದೀಪದ ಬೆಳಕಿನಲ್ಲಿ..ಬಹುಜಾಗರಣೆಯೊಂದಿಗೆ...ಮಾಡ—ಪೂರೈಸ.

Eluc us, i, *m.* ಜಾಂಗಿಥಂಗಿತನವುಳ್ಳ, ಕೈಪಿನವ—*ebrietatis stupor* ಹೊಟ್ಟು ಮುಚ್ಚತನ, ತಲೆಭಾರ—ಮಂದ—*facetiosus* ಗೇಲಿ..ನಕಲಿ..ಕಾರ.

Elu do, dis, si, sum, dere. *v. a.* ಆಟ..ಬಿಡ—ಮುಗಿಯ—*evadere* ತಪ್ಪಿಸಿಕೊಳ್ಳ, ತೊಲಗ, ತಿರುಗಿಸ, ತಪ್ಪುವದಾಗಿ..ಆ

ಸರಂತೆ..ಮಾಡ V. Deludo. *injuriare* ಅಪಮಾನ..ಗೇಲಿ..ಮಾಡ— *gloriam alterius* ಒಬ್ಬನ ಹೆಸರನ್ನು ಕಗ್ಗಿಸ.

Elu geo, ges, xi, ctum,gere, *v. n. et, a.* ದುಃಖದಹೇಳ...ದುಃಖವನ್ನು.. ಬಿಡ —*deflere* ಪ್ರಲಾಪಿಸ, ಅಳ.

Elumb is, *m. f.* e, *n.*—us, a, um. V. Delumbis.

Elu o, is, i, tum, ere. *v. a.* ತಸಿರಿ ಬಿಡ—V. Deluo—*os* ಬಾಯಿಮುಕ್ಕಳಿಸ—*se bonis* ನಾದಾರಿಬೀಳ.

Elusc o..are. *v. a.* ಕ್ಷೊಂದು ಕಂಣು ಕೀಳ.

Elusi, *præt.* Elus us, a,um, *part. ex,* Eludo.

Eluti a, orum, *pl. n.* ತೊಳಿಯುಲ್ಪಟ್ಟ ತೋಲ—*auri* ತಿಪ್ಪೆಯೊಂದಿಗೆ ಕಲತ ಚಿಂನದ ಚೂರು.

Elutio, nis, *f.* ತೊಳಿಯುವಿಕೆ.

Elutri o..are, *v. a.* ಹೆಚ್ಚಾದ್ದು ಸುರಿಸ —*è vase* ಕುಂಮರಿಸ—*colare* ಕೇರಿಸ, ಬಸಿಯು, ಗಸ್ತರಿಸು—ಶೋಧ್ಯ—*eluere* ಶುದ್ಧ ಮಾಡ, ಅನೇಕಾವರ್ತಿ ಜಲದಿಂದ ತೊಳಿಯು.

Elut us, a, um, *part. ex,* Eluo—*insipidus* ನಿಸ್ಸಾರ, ಸಪ್ಪೆ.

Eluvi es, ei, *f.* ಸೂರನೆ, ಬಚ್ಚಲು, ಗೊಜ್ಜಲಕಾಲುವೆ,ಜಲದಾರಿ-*immunditia* ಗೊಬ್ಬರ, ತಿಪ್ಪೆ—*palus* ಗೊಸಬು, ಪುಸುಬು ನೆಲ—*inundatio* ಪ್ರವಾಹ--*fossa* ಹಳ್ಳ, ಗುಣಿ, ಜರಿ, ನೀರಿನ ಸೊರಕು.

Eluvio, nis, *f.* ಜಲಪ್ರಳಯ, ನೀರಿನ ಪ್ರವಾಹ—*imbris* ಜಡಿ ಮಳೆ, ಮಳೇನೀರು ಪ್ರವಾಹ.

Eluxi, *præt. ex.* Eluceo—Elugeo.

Elux o..are, *v. a.* V. Luxo, ಕೀಲು ಜಡಿಸು.

Eluxuri or, ari, *v. d.* ಶಾಖೆಗಳ ಹೆಚ್ಚಾಗಿ ವಿಸ್ತರಿಸ ,ಅತಿಮೀರಿ...ಬೆಳಿಯು-ತಳಿರ.

EM

Emac eo, es, ui, ere, *v. n.* ಶಾರ ನಲಿದು..ನಾಳೆ.. ಬೀಳ--ಹೋಗ, ತಂಗಿಡ, ಬೆಂಡಾಗ, V. Marcesco.

Emacerat us, a, um, ಕ್ಷೀಣಿ ಹೋದ, ಸಂಣಬಿದ್ದ, ಸವತ, ಜೀನಣಗ.

Emaciat us, a, um, ಬಕ್ಕ, ಕ್ಷೀಣನು — *morbo* ಅರಮ್ಯಾಯ್ಯ, ಸವತೆ...ಕಂಗಿದು ಮ್ಯಾಯಿ, ಜೀನಣಗ, ಮ್ಯಾಕುಂಗಿದವ, ಓಕಾರಿ, ಬೆಂದು, V. Macer.

Emaci o..are, *v. a.* ಬಲಕೆಡಿಸ, ಶಾರಿಸ , ಕಂಗಿಡಿಸ — *arefacere* ಒಣಗಿಸ, ಬಾಡಿಸ, V. Macio.

Emacr esco, escis, ui, escere, *v. n.* or, ari, *v. d.* ಸವಿಯು, ಸವಗೊಳ್ಳ,ಕ್ಷೀಣಿ ಹೋಗ, ಬಾಡಿ...ಒಣಗಿ.. ಹೋಗ,ಮ್ಯಾಗಿಯು, ಕಂಗಿದುಕೊಳ್ಳ, V. Emaceo.

Emacul o..are, *v.a.* ಶುಚಿಕರಿಸ,ಮಾಸು ತೊಳಿಯು.

Emad eo, es, ui, ere, *v. n.* ತೇವವಾಗಿರ, V. Madeo.

Emanatio, nis, *f.* ಪ್ರಸರಣ, ಹೊರಡಿಕೆ, ಸುರಿಯುವಿಕೆ, ಹರಡುವಿಕೆ.

Emancipatio, nis, *f. animæ* ವಿಮೋಚನೆ, ವಿಮೋಚ —*exemptio ex ulterioribus emigrationibus* ನಿವಾರಣ— *servi* ಬಿಡುಗಡೆ.

Emancipator, is, *m.* ಬಿಡುಗಡೆ ಮಾಡುವವ, ಬಿಡಿಸುವವ.

Emancipat us, a, um, *part.* ಬಿಡುಗಡೆಯಾದ, ತಂನಿಷ್ಟವಾದ — *adoptione* ಪುತ್ರಸ್ವೀಕರದಿಂದ ಕೀಳ್ಪಟ್ಟ—*subjec-*

tus ಗುಲಾಮನಾದ, ಕೀಳ್ಪಟ್ಟ, ಆಳಾದ.

Emancip o..are. *v.a.* ಬಿಡುಗಡೆಮಾಡ, ಸ್ವಾಧೀನಕೊಡ--*filium in adoptionem* ತನ್ನಮಗನಮೇಲಧಿಕಾರ ಬಿಟ್ಟು ಇಂನೊಬ್ಬನಿಗೆ ಕೊಡ-- *subjicere* ಕೀಳ್ಪಡಿಸ, ದಾನಮಾಡ--*agrum alicui* ಒಬ್ಬನಿಗೆ ತನ ನೆಲವಕೊಟ್ಟು ಬಿಡ--*se alicui* ಇನ್ನೊಬ್ಬನಿಗೆ ಆಳಾಗ, ಪರಾಧೀನವಾಗ.

Emanc o..are, *v. a.* ಅಂಗಡಿಸಿನ ಮಾಡ, ಕೈಸೋತ್ತಮಾಡ.

Eman eo, es, si, sum, ere. *v. n.* ಹೊರಗೆ..ಚೆಲ್ಲಿನಲ್ಲಿ... ನಿಲ್ಲ--*è castris* ಅಪ್ಪಣೆಯಿಲ್ಲದೆ...ದಂಡನ್ನು--ಪಾಳೆಯವನ್ನು--ಠಾಣವನ್ನು... ಬಿಟ್ಟು ಹೋಗ.

Eman o...are. *v. n.* V. Dimano--Mano, ಒಂದರಿಂದ...ಒಳಗಿಂದ..ಸುರಿದುಬರ.

Emansio, nis, *f.* ಅಪ್ಪಣೆಯಿಲ್ಲದೆ ಪಾಳೆಯಕ್ಕೆ ಹೊರಗೆ ನಿಲ್ಲುವಿಕೆ.

Emarc esco, escis, ui, escere, *v. n.* ನಲುಗಿಹೋಗ, ಉಡಗ, ಒಣಗ, ಕಂಗೆಡ V. Marcesco. *splendor* ಮಿಂಚಿಲ್ಲಿಯು.

Emargin o..are. ಅಂಚು..ಓರ...ಸುತ್ತುಕತ್ತರಿಸ--ತೆಗೆಯ.

Emascul o...are, *v. a.* V. Effemino, ಖಸಿಮಾಡ, ಹೋಜಾಮಾಡ.

Ematur esco, escis, ui, escere, *v. n.* ಪಕ್ವ...ಹಂಣು...ಆಗ--*sedari* ಅಮರಿಹೋಗ.

Ematur o... are, *v. a.* ಪಕ್ವಮಾಡ, ಫಲಫಲಿಸ.

Ema x, cis, *o, g.* ಸಕಲವನ್ನುಕೊಂಡುಕೊಳ್ಳುವ ಇಷ್ಟವುಳ್ಳವ.

Emblema, tis, *n.* ಲಾಂಛನೆ, ಗುರುತು, ಜ್ಞಾನಾರ್ಥವುಳ್ಳ..ಚಿತ್ರ--ವಸ್ತು--*vasis* ಪಾತ್ರೆಗಳಿಗೆ ಹೊಂದಿಸುವ ಅಲಂಕಾರಗಳು.

Embol a, æ, *f.* ಹಡುಗುಗಳ ಮೇಲೆ ಸರಕುಗಳನ್ನು ಹೇರಿಸಲು.

Emboli um, i, *n.* ಪ್ರಕರಣ--*dramatis* ನಾಟಕದಲ್ಲಿ ಭಾಗದಮಧ್ಯ.

Embol um, i, *n.* ಜಾಜಿನಮುಖ--us, i, *m.* ಕೊಳವಿಯಲ್ಲಿ ಸಲಾಕಿ--ಸೂತ್ರ.

Embryo, nis, *m.* ಗರ್ಭ, ಉಲ್ಬ, ಭ್ರೂಣ, ಪಿಂಡ--*vaccæ* ಸೂಲು-- embryon, i, *m.* id. Embryologi a, æ, *f.* ಅದಕ್ಕೆ ಸಂಬಂಧ ಗ್ರಂಥ ಶಾಸ್ತ್ರ.

Emeat us, ûs, *m.* ನದೀಮುಖ.

Emedull o...are. V. Medullo--*explanare* ವಾಕ್ಯವಾಕ್ಯಕ್ಕೆ ಟೀಕಿಸ.

Emembr o ..are, *v. a.* V. Castro--ಅಂಗಗಳ ಕೀಳ--ವಿಭಾಗಿಸ.

Emendabil is, *m. f.* e, *n.* ಪರಿಹಾರಕ್ಕೆ ತಕ್ಕ, ಪರಿಹರಿಸ...ತಿದ್ದ...ತಕ್ಕ--ಬರುದಾದ.

Emendat è--iùs, *adv.* ತಿದ್ದುಪಾಟಾಗಿ, ತಪ್ಪಿಲ್ಲದೆ, ಗುಣವಾಗಿ.

Emendatio, nis, *f.* ತಿದ್ದುಪಾಟು, ತಿದ್ದಪಡಿ, ಗುಣ, ಪರಿಹರಣೆ, ನೆಟ್ಟಗೆ ... ಅಚ್ಚುಕಟ್ಟು..ಆಗೋಣ--*correctio* ಶಿಕ್ಷೆ, ಖಂಡಿಸುವಿಕೆ.

Emendator, is, *m.* tri x, cis, *f.* ತಿದ್ದುವವ. *f.* ವಳು, ಗುಣ...ಅಚ್ಚುಕಟ್ಟು..ಮಾಡುವವ.

Emendat us, a, um, ತಿದ್ದಿದ, ಗುಣ...ವಾಗಿ...ಆದ, ತಪ್ಪಿಲ್ಲದ, ಅಬಂದರ.

Emendic o...are, *v.a.* ತಿರಿಪಾಕೇಳ, ಯಾಚಕಾಮಾಡ, ಎರಿಯು -- *orizam ad januas* ಉಂಛವೃತ್ತಿಮಾಡ, ಹರತಿನ್ನು *orizam crudam* ಉಪಾದಾನ...ಮೊಗ್ಗೇಡ--*sonando cornu* ಹರಕೇಳಾಕ.

Emend o···are, *v. a.* ತಿದ್ದು, ತಪ್ಪುತೀರಿಸು—*perficere* ದರದೂರುಮಾಡು—*errata ductu calami* ತಿದ್ದುಪುಮಾಡು —*mores* ಗುಣಪಡಿಸು, ಶಿಕ್ಷೆಮಾಡು, ದಂಡಿಸು— vitia virtutibus ತನ ದುರ್ಗುಣಗಳನ್ನು ಪುಣ್ಯಗಳಿಂದ ಪರಿಹರಿಸು—*pass—moribus·* ಗುಣ··ಪಡು—ಆಗು.

Emens us, a, um-*part· ex* Emetior· ಅಳೆದ, ಅಳೆಯಲ್ಪಟ್ಟ—*iter* ಸಂಚರಿಸಿದ.

Ement ior, iris, itus sum, iri, *v.d. acc.* ಠಕ್ಕು ಮಾಡು V . Mentior —genus, stirpem ತಾನು ದೊಡ್ಡವಂಶದವನೆಂತ ಠಕ್ಕು ಮಾಡು.

Ementit us, a, um, *part.* ಸುಳ್ಳಾದ, ಡಂಬವಾದ— è, *adv.* ಸುಳ್ಳಾಗಿ, ಕಳ್ಳತನವಾಗಿ.

Emerc or· ·ari, *v. d . acc .* ಬೆಲೆಗೆ ಕೊಳ್ಳು—*pass*—ಕೊಂಡುಕೊಳ್ಳಲ್ಪಡು.

Emer eo, es, ui, itum , ere , *v . a.* ಉಪಕಾರಗಳಿಂದ ದಯವನ್ನು ಸಂಪಾದಿಸಿಕೊಳ್ಳು V. Emereor.

Emer eor, eris, itus sum, eri, *v.d-acc.* ಪಾತ್ರತೆ··ಯೋಗ್ಯತೆ···ಸಂಪಾದಿಸು, ಪಾತ್ರನು··· ಆಪ್ತನು.. ಆಗು—ಆಗಿರು— *pecuniam* ಆದಾಯ ಮಾಡು—ಹೊಂದು—*servitium* ಶೇವೆಯ··ಚಾಕರೀ···ಕಾಲವ ಮುಗಿಯು.

Emer go, gis, si, sum, gere, *v. n.* ಹೊರಡು, ತಲೆತೋರಿಸು, ಏಳು, ಉದಯವಾಗು, ಏರು, ಹುಟ್ಟು—*evadere* ತಪ್ಪಿಸು —*vix è periculo* ಕಡಚು, ಕಡಚಿಬರು — *è necessitate* ಅಕ್ಕರೆ..ತೀಟೆ..ತೀರಿಸು, ಅಗಚಾಟ್ಲು,ಪಡಬಾಟ್ಲು, ತಪ್ಪಿಸು—*pervenire ad* ಶೇರು —-ad summas opes ದ್ರವ್ಯಸಂಪನ್ನನಾಗು — *ostendere* ತೋರಿಸು , ಕಾಣಮಾಡು.

Emerit um, i, *n* . ಶೇವೆತೀರಿದವನ ಜಿರಾಯತಿ—ವರ್ಷಾಶನ.

Emerit us, a, um, *part· ex* Emereor—miles ಹಳೆಶಿಪಾಯಿ, ಚಾಕರಿಯ ತಕ್ಕ ಕಾಲವ ಯಾಡೇರಿಸಿದ—*rogus* ಆರಿದ ಚಿತೆ—*vetustus* ಹಳೇದಾದ, ವೃದ್ಧ, ಇನ್ನು ಕೆಲಸಕ್ಕೆಬಾರದ—palmes ಕಾಯದ ದ್ರಾಕ್ಷೀಗಿಡ— boves ಮುದಿಬಿದ್ದ ··· ಕೆಲಸಕ್ಕೆ ಬಾರದ ಮುದಿ ಯೆತ್ತುಗಳು—*benè meritus* ಘಟ್ಟ,ಒದಗಿದ, ಪ್ರಯೋಜಕವಾದ—*doctor* ವಿದ್ಯಕಲಿಸುವಕಾಲ ನೆರವೇರಿಸಿದನಂತರ ಸಂಬಳ..ಜಿರಾಯತಿಹೊಂದು ವಿದ್ಯಾಪಾರಗನು.

Emersi, *præt.* Emergo.

Emers us , ûs , *m* . ಹೊರಡುವಿಕೆ, ಹೊರಗೆಕಾಣಿಸುವಿಕೆ—*sideris* ಉದಯ —*eclipsis* ನೆರಳಿನೊಳಗಿಂದ ಗ್ರಹಹೊರಡೋಣ—us, a, um, *part.* ಹೊರಟ *astra* ಉದಯವಾದ — *ab admiratione* ವಿಸ್ಮಯತಿಳಿದ.

Emessui—*præt.* Emeto.

Eme tior, tiris, nsus sum, tiri , *v. d. acc.* V. Metior— ಧಾರಾಳವಾಗಿ ಇಡು —*peragrare* ಸುತ್ತಿತಿರುಗಾಡು, ಸಂಚರಿಸು —*perficere* ಸಮಾಪ್ತಿಸು, ಮುಗಿಸು— labores ಬಹು ಶ್ರಮೆಗಳನ್ನು ಅನುಭವಿಸು.

Eme to, tis, ssui, ssum, tere. *v. a.* ಬೆಳೆಕೊಯ್ಯು.

Emican s, tis, *o, g* . ತಳಕು, ಶಿಡಿಬಿಡುವ, ಹಾರುವ; ಶಿಡಿಯುವ, ಬೀಸ···ಎಸೆಯಲ್ಪಟ್ಟ.

Emic o, as, ui, are,*v. n.* ಮಿಣುಕ್ಕನ್ನು V. Fulgeo—emicat dies ಅರುಣೋದಯವಾಯಿತು—*excellere* ಮೇಲ್ಕೊಳ್ಳು, ಅಧಿಕರಿಸು—*exsilire* ಹಾರು, ಎಗರು—in curru ಬಂಡೀಮೇಲೆ ನೆಗ್ಗಿ ಯೇರು—*sallire* ತು

ಳ--emicat cor ಗುಂಡಿಗೆ ಹಾಯಿ ಬಡಿಯುತ್ತೆ, ಮಿಡಿಕಡಕಡವನ್ನುತ್ತೆ—*exire* ಹೊರಡ—sanguis ನೆತ್ತರು ಪ್ರೊಸರ *apparere* ಜಟ್ಟನೆಹೊರಡ, ಹೊರಗೆ ಬರ--*ascendere* ಏರ, ಏಳ.

Emigratio,nis, *f.*—*populi in globo præ fame etc.* ವಲಸೆ, ಗೂಳೆ, ಧಾಳಿ.

Emigr o··are, *v. n.* ಒಳ ಮೆತ್ತಿ ಪ್ರದೇಶಕ್ಕೆ ಹೋಗ—*in globo* ಗೂಳೆತೆಗೆಯು, ಬಲಸೆಹೋಗ, ಉಚ್ಚಾಟನೆ ಆಗ—*utensilis consarcinatis* ಹೆಳಿಗೆ ಕಟ್ಟಿಬಿಡ—ನಿರ್ಗಮಮಾಡ — *è vitâ* ಸಾಯ — *transgredi* ಮೀರ,ತಪ್ಪ,ಉಲ್ಲಂಘಿಸ— scripturas ವೇದೋಕ್ತಿಗಳನ್ನು ಅನುಸರಿಸದೆ ಹೋಗ.

Eminen s, tis, *o. g. dignitate* ಮಹಾ, ಶಾರ್ದೂಲ, ಮುಖ್ಯ, ಉಚಿತ, ಸದಮುಲ, ಮಹೋತ್ತಮ, ಶ್ರೇಷ್ಠ—*altus* ಮೆತ್ತರ, ಊಚ—*prominens* ಉಬ್ಬಿದ, ಮಿಟ್ಟೆಮಾಡ, ಉಂನತ—*eminentissimus* ಮಹೋಂನತವಾದ—*titulus honoroficus doctoribus* ಭಟ್ಟ—*bellatoribus* ಶೂರರು, V. Eximius.

Eminenter, *adv.* ಉನ್ನತ.. ಉಚಿತ.. ಉತ್ತಮ...ತರವಾಗಿ.

Eminenti a, æ, *f. dignitatis* ಶ್ರೇಷ್ಠ, ಹೆಚ್ಚಳ, ಮಹತ್ವ, ಮಹತ್ತು ಶ್ರೇಯಸ್ಸು—*altitudo* ಉಂನತತ್ವ, ಎತ್ತರ—*humi* ಮಿಟ್ಟೆ, ದಿಂನೆ, ಗುಟ್ಟ, ಉಬ್ಬು.

Emin eo, es, ui, ere, *v. n. superare* ಹೆಚ್ಚಳವಾಗಿರ, ದೊಡ್ಡವಾಗ, ಅಧಿಕರಿಸ, ಮೇಲ್ಪಡ—*ascendere* ಏರ, ಏರಿಬರ, ಉದ್ಧ...ಉಂನತ..ಊಚ..ವಾಗ, ಮೇಲೆಕಾಣ—*projiciens* ಉಬ್ಬಿಗ, ಮುಂದು ಬರ, ಬುಗುಚೆಯಾಗಿರ--*videri* ಕಾಣಿಸ, ತೋರ—eminet ex ore crudelitas ತನ ಮುಖದಲ್ಲಿ ಕ್ರೂರತ್ವಕಾಣುತ್ತೆ.

Eminit or, ari;—emin or, ari,*v.d.* V. Minor.

Eminùs, *adv. a longè* ದೂರದಿಂದ—*longè ab* ದೂರದಲ್ಲಿ, ದೂರವಾಗಿ.

Emir or, ari, *v. d.* V. Miror.

Emisc eo, es, ere, *v. a.* ಬೆರಕೆ ಮಾಡ, V. Misceo.

Emissari um, i, *n.* ಕಾಲುವೆ, ನೀರು ದೋಣಿ—*stagni* ತೂಬು, ಮರಿಗೊಂಬು—*ad extremum stagnum* ಕೋಡಿ,ಮದಗು, ಮೋರಿ.

Emissari us, i, *m.* ಬೇಹುಗಾರ, ಚಾರನು, ಸಂಧಿ--*cursor* ಅಂಚೆಯವ--equus ಬೀಜದ ಕುದುರೆ--palmes ಅಂಟಿಕ್ಕುವದಕ್ಕೆ ಬಿದ್ದ ಬಳ್ಳಿ--*caper* ಪಾಪ ನಿವಾರಣೆಗೋಸ್ಕರ ಬಿಡುಗಡೆಯಾಗಿ ಬಿಟ್ಟ ಹೋತ.

Emissio, nis, *f. sagittæ* ಎಸಿಗೆ,ಅಂಬಿನ ಪ್ರಯೋಗ,ಅಸಿಗೆ--*recta jaculi*, ಬಡ್ಡಿಕೆ-*liquoris* ಕರಪ್ರೋಣ---*missio* ಕಳುಹಿಕೆ, ಹೋಗಲುತ್ತರವು--*liberatio* ಬಿಡುಗಡೆ, ರಕ್ಷಣೆ.

Emissiti æ, arum, *pl. f.* ಮನೆಗಳ ಕನ--ಕಿಟಕಿ, ಕಿಡಿಸಪಟಿ—*ruinæ* ಹಾಳು, ಮಂಣುಕಲ್ಲು—*verba inutilia* ವ್ಯರ್ಥ, ...ಬುದ್ಧಿಯಿಲ್ಲದ..ಮಾತುಗಳು.

Emissiti us, a, um, ಎಸಿಯಲ್ಪಡುವ — *oculi* ಬೇಹುಗಾರನ ಕಂಣುಗಳು, ಕಂಣಾತುರನು.

Emiss us, a, um, *jactatus* ಯೆಸ್ತ, ನಿರಸ್ತ — *dimissus* ಬಿಡುಗಡೆಯಾದ — *evasus* ತಪ್ಪಿಸಿಕೊಂಡ— *missus* ಕಳುಹಿಸಲ್ಪಟ್ಟ—*vox emissa cœlo* ಆಕಾಶವಾಣಿ, ಪರಮಂಡಲದಿಂದ ಬಂದಶಬ್ದ.

Emi tto, ttis, si, ssum, ttere, *v. a.* ಕಳುಹಿಸಿಬಿಡ, ಸಾಗಿಸ, ಹೊರಡಿಸ—

retentum ಅಂಕೆಬಿಡ, ಬಿಟ್ಟುಬಿಡ—*è manu ad terram* ಕೆಳಗೆಬಿಡ, ಕೆಡಗ — *sagittam* ಹೊಡೆಯು, ಅ...ಎ..ಸಿಯು, ಕಳದಿ ಕೊಳ್ಳ— *digito, fundibulâ* ಮಿಡಿಯು — venis sanguinem ರಕ್ತತೆಗೆಯು — manu ಕೈಬಿಡ, ಸ್ವಾಧೀನಬಿಡ— folia ಕಳಿರ— emitti in ramos, ವಿಶಾಲವಾಗಿ ಗುಬುರು ಕಟ್ಟ.

Emmanuel, *ind, vel*,is,*m.* ನಮ್ಮೊಂದಿಗೆ ಸರ್ವೇಶ್ವರನು.

Em o, is, i, ptum, ere, *v. a.* ಕ್ರಯಕ್ಕೆ...ಕೊಳ್ಳೆಗೆ...ತೆಗೆಯು—ಕೊಳ್ಳ—ಕೊಂಡುಕೊಳ್ಳ—ಕೊಂಡುಬರ — *minuta* ಚಿಲ್ಲಾಕೊಳ್ಳ— *merces* ವ್ಯಾಪಾರ ತೆಗೆಯು, —*pretio non soluto* ಉದ್ದರಿಯಾಗಿ ಕೊಂಡುಕೊಳ್ಳ—*soluto pretio* ನಗದು..ಕೊಟ್ಟು..ಕೊಟ್ಟುಕೊಳ್ಳ—*statuto pretio* ಖರೀದಿಗೆ ತೆಗದುಕೊಳ್ಳ—*aversione* ಒಟ್ಟಿಗೆ ತೆಗದುಕೊಳ್ಳ—benè ಜಾರಿಯಾಗಿ ...malè ನಷ್ಟವಾಗಿ, ಹೆಚ್ಚು ಬೆಲೆಯಾಗಿ ... carè, magno ಗಿರಾಕಿಯಾಗಿ, ತಗ್ಗಾಗಿ — *in publicum* ಎಲ್ಲರ ಪ್ರಯೋಜನಕ್ಕಾಗಿ ತೆಗದುಕೊಳ್ಳ-- argento inimicum ಹಣ ಕೊಟ್ಟದ್ದರಿಂದ ತನಗೆ ವೈರಿಹುಟ್ಟಿಸಿ ಕೊಳ್ಳ.

Emodul or..ari, *v. d.* V. Modulor.

Emod us, i, *m.* Emodi montes, *m. pl.* ಹಿಮಾಲಯ ಪರ್ವತಗಳು.

Emoliment um, i, *n.* ಕಟ್ಟುಕೆಲಸ.

Emol ior, iris, itus sum, iri, *v. d. acc.* ನಿರವೇರಿಸ, ಸಿದ್ಧಿಸ, ತೀರಿಸ— *expellere* ತಳ್ಳಿಬಿಡ— *agitare* ಅಲ್ಲಾಡಿಸ, *expuere* ಉಗುಳ.

Emoll io, is, ivi, itum, ire, *v. a. pressione* ಅದುಗಿಸ—*fricando* ತಿಕ್ಕ, ಸವರ—*percussione pannos* ಗಟ್ಟನೆ ಮಾಡ—*cor* ಮರುಗಿಸ, ಮೆತ್ತಗಿಸ—*solum* ಕಲ್ಲಿಗಿಸ—*conculcando* ಪುಸಿಪುಸಿ ತುಳಿಯು—*stamen amylo imbutum* ತಾಟಿಯೊಳೆಯು —colores ಬಂಣತಗ್ಗಿಸ—auctoritatem ಅಧಿಕಾರವ ತಗ್ಗಿಸ.

Emol o, as, ui, itum, are. V. Molo.

Emolument um, i, *n.* ಲಾಭ, ಲಬ್ಧಿ, ಪ್ರಯೋಜನ, ಸಂಬಳ, ಉಪಯೋಗ, ಆದಾಯ.

Emoneo, V. Moneo.

Emor ior, eris, tuus sum, i, *v. d.* ಸತ್ತುಹೋಗ--*sensum amittere* ಸತ್ವತ್ತೆ ತಪ್ಪ, ಮೂರ್ಛೆಬೀಳ—emoriens terra ಸಾರವಿಲ್ಲದ ನೆಲ.

Emors us, ûs, *m.* ಮನನೋವು V. Remorsus-

Emortu us, a, um, *part.* ಸತ್ತ — *vanus* ವ್ಯರ್ಥ, ನಿಷ್ಪ್ರಯೋಜಕ.

Emotio, nis, *f. cordis* ಮನಮರುಕ, ಮನೋಚಂಚಲತೆ, ಹೃದಯಂಗಮ, ಮನೋಕಲಕ.

Emo veo, ves, vi, tum, vere, *v.a.* ಅಲ್ಲಾಡಿಸ, ಕದಲಿಸ, ಮೆದಲಿಸ, ಚಲಿಸ, ಜರಗಿಸ--*è loco*, V. Di...Re ...moveo. *cor* ಮರುಗಿಸ, ಕಲ್ಲು..ಮನಸ್ಸು..ಕರಗಿಸ, ಪ್ರೀತಿಪಿಸ, ದುಃಖ...ದಯ...ರೋಷ... ಎಬ್ಬಿಸ.

Emphas is, is, ವಾಗ್ಘೋರಣೆ, ಅವಧಾರಣೆ, ವಾಕ್ಪ್ರಚಿತ— emphatic us, a, um, ಘನ..ಉಚಿತ..ವಾಕ್ಯಪುಳ್ಳ— ದೊಡ್ಡಮಾತುಗಳಾಗಿ.

Emphyteuma, tis, *n.* ನೆಲಕ್ಕೆ..ಸ್ಥಾಸ್ಥಿಗೆ..ಮೇಲುಮಾಡಲಿಕೆ.

Emphyteus is,is *f.* ಸಸಿಮರ ನೆಡುಗೆ—*locatio* ಕಾಯಂಗುತ್ತಿಗೆ--emphyteuta,æ,—icari us,i,*m.* ಇಂಥ ಗುತ್ತಿಗೆದಾರ.

Empiric e, es, *f.* ವಿದ್ಯಾಕಲಿಕೆಯಿಲ್ಲದೆ ಅನುಭವದಿಂದ ಮಾಡುವ ವೈದ್ಯ,—us, i, *m.* ಕರವೈದ್ಯಗಾರ, ಅನುಭವದಿಂದ ಮದ್ದು ಕೊಡುವವ, ಛೇಷಜಗಾರ.

Emplastratio, nis, *f.* ಸುರಾನೆ ರೂಪವಾಗಿ ಅಂಟಿಕ್ಕುವಿಕೆ—emplastr o..are, *v. a.* ಸದರಿ ಮಾಡ್ರಿಯಾಗಿ ಅಂಟಿಕ್ಕ—um, i, *m.* ಸದರಿ ಅಂಟುಸಸಿ, ಸುತ್ತಲೂ ಕಟ್ಟುವ ಮಣ್ಣು.ಮೇಣ ಯಾ ಮುಂತಾದ್ದು—*pro vulnere* ಮುಲಾಮು, ಪಟ್ಟು.

Empori um, i, *n.* ಬಾಜಾರು, ಅಂಗಡಿ, ಸಂತೆ, V. Taberna,—emporetic us, a, um, ಅಂಗಡಿಯ, ವ್ಯಾಪಾರಿ—*charta* ಸರಕು ಕಟ್ಟುವ ಮೋಟುಕಾಗದ.

Empor us,--os, i, *m.* V. Mercator.

Emptio, nis, *f.* ಕೊಳ್ಳುವದು--*pro se* ಕೊಂಡುಕೊಂಬೋಣ—abire ab emptione ತೆಗದುಕೊಳ್ಳುವದರಿಂದ ಬಲಿಕ ಬಿಟ್ಟುಹೋಗ--*emptio, aut, venditio mercivm pecuniâ non numeratâ* (*á credit*) ಉಸ್ತಾಪತಿ.

Emptiti us, a, um, ಕ್ರಯಕ್ಕೆ ತೆಗದುಕೊಳ್ಳ..ತಕ್ಕ... ಆಗುವ, ಬೆಲೆಗೆ ತೆಗದುಕೊಂಡ.

Emptiv us, a, um, V. Emptitius, *miles* ಹಣಕೆ ಸೇವಿಸುವ ಶಿಪಾಯಿ.

Emptor, is, *m*—tri x, cis, *f.* ಕೊಂಡುಕೊಳ್ಳುವವ—*solers* ಜಾರಿಸು— pretiosus, ಮಾವ ಬೆಲೆಗೆ ಕೊಳ್ಳುವವ--bonorum, ಸಾಲಿಗೆ ಶಿಲ್ಪೇ ಪಟ್ಟವರ ಜಿಂಸಿಗಳನ್ನು ಕೊಂಡುಕೊಳ್ಳುವವ.

Emptur io, is, ire, *v. a.* ವ್ಯಾಪಾರ ತೆಗದುಕೊಳ್ಳಲಾಶಿಸ.

Empyre us, a, um-*cœlum* ಮಹಾಕಾಶ-*ignitus* ಅಗ್ನಿಮಯವಾದ.

Emucid us, a, um, V. Mucidus,

Emug io, is, ivi...ii, itum, ire, *v. n.* V. Mugio.

Emul geo, ges, si, sum, gere, *v. a. actio emulgendi* ಕರೆಯೋಣ, ಕರೆಯು, ಬಿಡುಗ...V. Mulgeo.

Emuls us, a, um, *part. lac* ಕರೆದ—*exhaustus* ವೆಜ್ಜಾಗಿ ಹಾಲು ಕರೆಯೋಣದಿಂದ ಕ್ಷಿಣಿಸೋದ.

Emunctio, nis, *f. narium* ಗೊಣ್ಣೆ ತೇದುವಿಕೆ.

Emunctori um, i, *n. lampadis* ಕುಡೀ ಕತ್ತರಿ—*corporis* ದೇಹದ ವೆಜ್ಜಾದ ಧಾತುಗಳ ಹೊರಡಿಸುವ ದ್ವಾರ.

Emundatio, nis, *f.* ಶುದ್ಧಿಕರ, V. Mundatio.

Emund o..are, *v. a.* ಶುದ್ಧಿಕರಿಸ, ತೊಳೆಯು, V. mundo.

Emun go, gis, xi, ctum, gere, *v. a. nares* ಚಿರಗುಟ್ಟ, ಗೊಂಣೇ ತೇದ—*lampas* ಕುಡಿಚಿವುಟ, ಕತ್ತರಿಸ—*se cubito* ನೀಚ ವುದ್ಯೋಗ ಮಾಡ--*argento aliquem* ಪಿತ್ತಲಾಟವಾಗಿ ಹಣಾರಿಸಿಕೊಳ್ಳ,—alicui oculos ಒಬ್ಬನಿಗೆಮಾಯದಕ್ಕಿಸ.

Emun io, is, ivi, itum, ire, *v. a.* V. Munio, ಸಿದ್ಧಮಾಡ.

EN

En, *adv. nom, acc.* ಇ...ಅ...ದೋ, ಅಗೋ, ನೋಡು, ನೋಡಿರಿ—*aspice* ಇಗೋನೋಡು, ಆದ್ದರಿಂದ, ಏನು.

Enarrabil is, *m. f.* e. *n.* ವಾಚ್ಯ, ಹೇಳಲು...ವಿವರಿಸಲು.. ಆಗುವಂಥಾ.

Enarratè, *adv.* ತಿಳಿವಾಗಿ, ವಿವರವಾಗಿ.

Enarratio, nis, *f.* —t us, ûs, *m.* ವಿವರ, ವರ್ಣನೆ, ಹೇಳುವಿಕೆ, ಚರಿತ್ರ, V. Explanatio.

Enarrator, is, *m.* V. Explanator,

Enarr o…are, *v. a.* ವಿವರಿಸ, ವಿವರಿಸಿ..ಬಿಚ್ಚಿ…ಹೇಳ, ತಿಳುಹಿಸ, ಟೀಕಿಸ.

Ena scor, sceris, tus sum, sci, *v.d.* ಹುಟ್ಟ, ಉಂಟಾಗ V. Nascor.

Enat o…are, *n.* ಈಜಿಕೊಂಡುತಪ್ಪಿಸ, ತೊಲಗ.

Enavig o…are. *v.a.* ಸಮುದ್ರಯಾತ್ರೆಮಾಡ, ದಾಟಿಹೋಗ—*ad littus* ಕಡೆಹಿಡಿಸು, ಸೇರ—*evadere* ತಪ್ಪಿಸಿಕೊಳ್ಳ.

Enav o ..are, *v. a. et, n.* V. Obnitor — *operam* ಗವನದೊಂದಿಗೆ ಕೆಲಸ ಮಾಡ.

Encœni a, orum, *n. pl.* ಪ್ರತಿಷ್ಠೆ, ಅದರ ವರ್ಷಾಂತರ ಹಬ್ಬ—*paganorum intrando vicum desertum* ಉಗ್ಗಿ.

Encaust um, i, *n.* ಮಿಂಚುಯೆಂಣೆ, ರೋಗನ— *opus in encausto* ನರಪಿ…ಷ್ಟಿ..ನಖಾನು..ಕೆಲಸ—*illinire* ರಂಗಾಯಿಸ—*atramentum* ಲಾಖಿಮಸಿ — *opus* ಸ್ವಟಿಕದವಸ್ತು, ಬಣ್ಣಬಣ್ಣ ಚಿತ್ರ—encaustes, æ, *m.* ಬಣ್ಣಬಣ್ಣವಾದ ಕೆಲಸಕಾರ, ಚಿತ್ರವಿಚಿತ್ರಗಾರ—ic a, æ—e, es, *f.* ಇಂಥ ಕೆಲಸದ ವಿದ್ಯೆ.

Enchiridi um—on, i, *n.* ಕಿರಿ…ಕೈ..ಪುಸ್ತಕ—*remi* ಹುಟ್ಟಿನ ಹಿಡಿ—*scapellum* ಶಸ್ತ್ರ.

Enclima, tis, *n.* ಬಾಗು—*clima* ದೇಶಗುಣ.

Enclitic us, a, um, ಮುಂದಿನವಾಚಕದಮೇಲೂರಿಕೊಂಡಿರುವ.

Encomi um, i, *n.* ಸ್ತುತಿ, ವರ್ಣನೆ, ವಿನುತಿ, ಕೀರ್ತನೆ, ಬಂಣಿಕೆ, ಮೆಚ್ಚುವಣಿಗೆ, ಸಂಸ್ತುತಿ, ಸ್ತವ, ಕೈವಾರ—*mendax, vel, ironicum* ವ್ಯಾಜಸ್ತುತಿ—*regis, vel, divinitatis in exordio dramatis, vel, religiosæ ceremoniæ* ನಾಂದಿ—encomiastes, æ, *m.* V. Panegyrista.

Encyclic us, a, um, ಸಾಧಾರಣ, ಸುತ್ತಿಬರುವ.

Encycli os, i, *m.*—doctrinarum, *vel,*
Encyclopædi a, æ, *f.* ಕಲೆಜ್ಞಾನಾಕರರಾಶಿ, ಸಕಲವಿದ್ಯಾಶಾಸ್ತ್ರಸಂಗ್ರಹ.

Enec o…avi…ui, atum..tum, are, *v. a.* ಕೊಲ್ಲ, ಬಾಧಿಸ, ಮೂರ್ಛೆಪಡಿಸ, ಪೀಡಿಸ — *pediculos* ಹುಕ್ಕ, ಕೀಡ.

Enect us, a, um, *part.* ನಲಿದುಬಿದ್ದ, ಅಚೇತನ್ಯವಾದ—fame ಹಸ್ತುಸಾಯುವ.

Enema, tis, *m.* V. Clysmus.

Energi a, æ, *f.* ಶಕ್ತಿ, ಕಷ್ಟ, ತೇಜಸ್ಸು.

Energumen us, i, *m.* ದೆವ್ವ…ಪಿಶಾಚ…ಹಿಡಿದವ, ಗಾಳಿ..ಭೂತ…ಸೋಕಿದವ, ಆವಿಷ್ಟನು, *f.* ಷ್ಟೆ, ಪಿಶಾಚಾವೇಶವಾದವ.

Enervatio, nis, *f.* ಬಲಹೀನಪಡಿಸುವಿಕೆ, ದೌರ್ಬಲ್ಯ.

Enerv is, *m. f.* e, *n* —us, a, um, ನರವಿಲ್ಲದ, ಶಕ್ತಿ…ತ್ರಾಣ..ಹೀನನು.

Enerv o…are, *v. a.* ದೌರ್ಬಲ..ಬಲಹೀನ..ಮಾಡ—ಪಡಿಸ—*nervis* ನರಗಳ ಕೆಗದು…ಕೊಯಿದು..ಹಾಕ—*cor* ಧೈರ್ಯಕೆಡಿಸ.

Enharmonic us, a, um, V. Harmonicus.

Enim, *conj* ಏನಂದರೆ, ಅದೇನಂದರೆ, ಯಾಕಂದರೆ, ಅದುಹ್ಯಾಗಂದರೆ — et enim, verùm—certè— sed enim, enim verò ನಿಶ್ಚಯವಾಗಿಯೇ, ಸಂದೇಹವಿಲ್ಲದೆ —*sed* ಆದರೆ.

Enisus, *part.* Enitor.

Enit eo, es, ui, ere—esc o, is, ui, scere. *v. n.* ಪ್ರಕಾಶಿಸ—V. Niteo.

Eni tor, teris, sus..xus sum, ti, *v. d.* ಉಜ್ಜಾಗಿಸ, ಪ್ರಯಾಸಪಡ— V. Co-

nor–obnitor.—*ægrè egredi* ಪ್ರಯಾಸದೊಂದಿಗೆ..ತಪ್ಪಿಸ—ಹೊರಡ—*ascendere* ಕಷ್ಟಪಟ್ಟು ಏರ — *pario* ಹೆರ, ಮರಿಯಿಕ್ಕ.

Enix a, æ, *f.* ಹೊಸು ಹೆತ್ತವಳು, ಪ್ರಸವ ಆದವಳು.

Enix è, iùs, issimè—im *adv.* ಪ್ರಯಾಸದೊಂದಿಗೆ, ಕಷ್ಟವಾಗಿ, ಪ್ರಯಾಸ ತೆಗೆದುಕೊಂಡು, ಬಲಕೊಟ್ಟು.

Enix us, ùs, *m.* ಉಜ್ಜುಗ, ಘಟ್ಟಿ ಗುಂಡಿಗೆ, ಉದ್ಯಮ V. Conatus.

Enix us, a, um, *part. mulier* ಬಾಣಂತಿ, ಪ್ರಸವಿಸಿದ– *bestia* ಈದ, ಮರಿಯಿಕ್ಕಿದ—*enixura* ಈಲಾಗಿರುವ -- enixior cura ಅತಿ ..ಹೆಚ್ಚಾದ...ವಿಚಾರಣೆ—opera ಕಡುಕಷ್ಟವಾದ ಕೆಲಸ.

En o..are, V. Enato--Enavigo–in aeris auras ಆಕಾಶದಲ್ಲಿ ಹಾರಿ ಹೋದಿ ಹೋಗ.

Enodatè, *adv.* V. Enarratè.

Enodatio, nis, *f.* ವಿವರ, ಟೀಕಿಸುವಿಕೆ—nominum ವಾಚಕಗಳೋತ್ಪತ್ತಿ — *finis* ಅಂತ್ಯರಡೆ--- *responsum* ಪ್ರತ್ಯುತ್ತರ.

Enodator, is, *m.* V. Explicator.

Enod is, *m, f.* e, *n.* ಗಂಟು... ಕಣ್ಣು...ಇಲ್ಲದ—*facilis* ಸುಲಭ—*clarus* ತಿಳಿವಾದ — *mollis* ಬಲ..ಹೀನ, ಗುಂಡಿಗೆಯಿಲ್ಲದ.

Enod o..are. *v. a.* ಗಂಟುಕಡಿಯು, ಮುಡಿಬಿಚ್ಚ— *explanare* ಟೀಕು ಕೊಡ— *nomina* ಶಬ್ದಗಳುತ್ಪತ್ತಿ ತೋರಿಸ.

Enorm is, *m. f.* e, *n.* ಬ್ರಹ್ಮಾಂಡವಾದ V. Ingens.

Enormita s, tis, ಪ್ರಮಾಣಮೀರಿದ ಘನತೆ, ಬ್ರಹ್ಮಾಂಡದ ಘನತೆ—*malum* ಕವಾರತ್ವ, ಘಾತಕ.

Enormiter, *adv.* ಬಹುಶಾ, ಬ್ರಹ್ಮಾಂಡವಾಗಿ, ಮಿತಿತಪ್ಪಿ–*irregulariter* ಅಕ್ರಮವಾಗಿ.

Enoto..are, *v. a.* ಗುರಿಸ, ಗುರುತು ಬರೆಯು.

Enovat us, a, um, *part.* ತುಪ್ಪಟ ಪುದರಿದ, ತೊಗಲುಚ್ಚಿದ—Enovo. V. Renovo.

En s, tis, *n.* ಜೀ, ಜೀವ, ವಸ್ತು, ಪದಾರ್ಥ, ಸ್ವರೂಪ, ಮೂರ್ತಿ — *animatum* ಪ್ರಾಣಿ—*in foraminibus vivens* ಬಿಲೇಶಯ — *supremum, necessarium* ವಿರಾಟ್ಟು, ವಿರಾಟ್ಪುರುಷ, ಈಶ್ವರ, ಜಗವಂತ, ತ್ರಿಕಳಾಮೂರ್ತಿ, ಪರಬ್ರಹ್ಮ, ಪರಬೊಂಮ--*quod est* ಸೋಽಹಂ—*ego sum, ens è se* ಸ್ವಯಂಭೂ — *habens in se suam causam* ಹೇತುಗರ್ಭ—*ab altero effectus* ಕಾರ್ಯವಸ್ತು, ಹೇತು ಮತ್ತು—*naturalis status* ಭಾವ.

Ensi fer — ger, a, um, ಕತ್ತಿಗಾರ, ಕತ್ತಿ ಬೊಂಮ, ಕತ್ತಿಧಾರ, ಅಸಿಧರ.

Ens is, is, *m.* ಅಸಿ, ಕತ್ತಿ V. Gladius, *prælium* ಯುದ್ಧ--*potestas* ಅಧಿಕಾರ —orio ಒಂದು ಗ್ರಹ.

Enterocel e, es, *f.* ಅಂತ್ರವೃದ್ಧಿ — ic us, a, um, ಇಂಥಾ ರೋಗ ಉಳ್ಳ — V. Hernia.

Entheath us, — enthe us, a, um, ದೇವರು ತುಂಬಿದ, ದೇವರಿಂದ ಪ್ರೇರೇಪಿಸಲ್ಪಟ್ಟ, ಭೂತ...ಆವೇಶ..ಪಟ್ಟ.

Enthusiasm us, i, *m.* ಅತ್ಯಾಸೆ, ಅಭಿನಿವೇಶ, ಔತ್ಸುಕ್ಯ--*sectæ* ಮತಾಭಿಮಾನ--Enthusiast a, æ, *m.* ಅತಿ ಚಗುಚುರುಕುಳ್ಳವ, ಭ್ರಮಣೆ..ಮರುಳು...ಬಿದ್ದವ--ic us, a, um, ಇಂಥ ಗುಣದ ಸಂಬಂ

ಧನಾದ.

Enu bo, bis, psi, ptum, bere, *v.n. dat.* ಹೀನವಂತನನ್ನು ಪುರುಷಂನ ಮದಿವೆ ಮಾಡಿಕೊಳ್ಳ.

Enucleatè, *adv.* ತಿಳಿವಾಗಿ, ಸ್ಪಷ್ಟವಾಗಿ, ವಿಶೇಷಿಸಿ.

Enucle o...are, *v. a. dubium* ವಿವರಿಸ, ಬಿಳುಹಿಸ, ಸಂಶಯ ತೀರಿಸ —*quæstionem* ತೀರುಮಾನಿಸ—*semen* ಬೀಜವಂ ತೆಗೆಯ—ಕುರುವ.

Enud o..are, *v. a.* ಬೆತ್ತಲೆ ಮಾಡ, ಬಟ್ಟೆ ಕಿತ್ತುಹಾಕ—*aperire* ಬೈಲು ಮಾಡ, ಗುಪ್ತ ಬಿಚ್ಚ.

Enumeratio, nis, *f.* ಯೆಣಿಸುವಿಕೆ, ಎಣಿಗೆ, ಲೆಖ್ಖ, ವಿವರ.

Enumer o..are, *v. a.* ಲೆಖ್ಖ ಮಾಡ, ಒಂದೊಂದಾಗಿ ಹೇಳ, ಬಿಚ್ಚಿ ಹೇಳ V. Dinumero.

Enuntiatio, nis, *f.* ಹೆಸರು, ವಿವರಿಸುವಿಕೆ, ಹೇಳುಕೆ, ನುಡಿ.

Enuntiativ us, a, um, ತಿಳಿವಾಗಿ.. ತೋರಿಸುವ—ಉಚ್ಚರಿಸುವ.

Enuntiator, is, *m.* — tri x, cis, *f.* ಹೇಳುವ..ನುಡಿಯುವ... ಉಚ್ಚರಿಸುವ... ವಿವರಿಸುವ..ವನು—ವಳು.

Enuntiat um, i, *n.* V. Axioma.

Enunti o..are, *v. a.* ಹೇಳ, ನುಡಿಯ, ವಿವರಿಸಿ ಹೇಳ—*admonere* ಅರಿಕೆ ತೊಡ, ಎಚ್ಚರಿಸ.

Enuptio, nis, *f.* ಹೆಂಗಸ ಹೀನವಾದ ಮದಿವೆ, ಗುಲಾಮರ ಮದಿವೆ.

Enutr io, is, ivi, itum, ire, *v. a.* ಸಾಕ, ಸಲುಹ, ಸಂರಕ್ಷಿಸ, ಪರವಶ ಮಾಡ, ಸಂರಕ್ಷಿಸ—*alteri tradere ad enutriendum* ಉಡಿಕಟ್ಟ.

Enutrit us, a, um, *part.* ಸಂರಕ್ಷಿತ

--*in deliciis* ತೋಳಿಗೆ.

EO

Eò, *adv.* ಅಲ್ಲಿ, ಆ ಸ್ಥಳಕ್ಕೆ— èo loci res est ಕಾರ್ಯವು ಹಾಗೆ ಯಿದೆ —accessit èo ut ಅದು ಸಿವಾಯಿ, ಮತ್ತು—èo insolescit ut percusserit ಹೊಡೆಯುವರಕ್ಕೆ ಹೊದಲಾಗಿ ಕೆಟ್ಟಮಾರಿಯಾದನು || *èo usque--usque dum-usquè ut--èo ad dùm* ವರೆಗೆ, ಅಷ್ಟು, ಮಟ್ಟಿಗೆ, ಹಾಗೆ — èo hoc valebat ut obtineret ಅವನು ಪಡೆಯುವ ಹಾಗೆ ಶಕ್ತನಾಗಿದ್ದನು || *attamen*--non èo dico ಆದಾಗ್ಯೂ ನಾನು ಹೇಳೇನು || *propter quod*--èo vereor ಇದರ ನಿಮಿತ್ತ ಅಂಜುತ್ತೇನೆ || *èo que* ಇದರಿಂದಲೇ || *èo magis quò* ಎಷ್ಟು ಅಷ್ಟು, ಎಷ್ಟೋ ಅಷ್ಟು— èo humilior fit quò doctior ಎಷ್ಟೋ ಶಾಸ್ತ್ರಿ ಆಗುತ್ತಾನೋ ಅಷ್ಟು ಮನೋದೈನ್ಯವುಳ್ಳವನಾಗುತ್ತಾನೆ || *èo magis* ವಿಶೇಷವಾಗಿ.

Eo, is, ivi, itum, ire, *v. n.* in, ad. *acc. dat.* ಹೋಗ, ನಡೆಯ, ಗಮಿಸ—*magnates* ದಯಮಾಡ, ವಿಜಯಮಾಡ, ವಿಜಯಂಗೈಯ—pedibus, tenebris, puppibus ಕಾಲ್ನಡೆಯಾಗಿ, ರಾತ್ರಿಯಲ್ಲಿ, ಹಡಗಿನ ಮೇಲೆ ಹೋಗ —subsidio ಒತ್ತಾಸೆಗೋಡಿಬರ—in possessionem ಕೈವಶ ಮಾಡಿಕೊಳ್ಳ— in matrimonium ಮದಿವೆ ಮಾಡಿಕೊಳ್ಳ-- cur te is perditum ಯಾಕೆ ಕೆಟ್ಟು ಹೋಗುತ್ತೀ--itur ಹೋಗುತ್ತಾರೆ--per ಹಾದುಹೋಗ—in aliquem ಮೇಲೆ ಬೀಳ—*ire in aurâ alicujus* ಒಬ್ಬನ ವಾಸನೆಗೆ ತೋಡಿ ಸೋಗ — it rumor ಅವಾಜುನಡೆಯುತ್ತೆ—in auras ಗಾಳಿಯಾಗಿ ಹಾರ—ire in corpus ಶರೀರವಾಗ—in semen ಬಲ್ಲುಬೀಜವಾಗ — in secula ನಿತ್ಯರೀತಿಯ ಹೊಂದ— in ingenium suum ತನ್ನ ಇಷ್ಟ ತೀರಿಸ— *sæpè* ಎದು

ತಾಕ—*in unam partem* ಪಾಶಿಗೊಳ್ಳ--*secùs viam* ಹಾದಿ ನಡೆಯು.

Eòdem, *adv.* ಅಲ್ಲಿಯೇ, ಅದಕ್ಕೆ ಸರಿ —*eòdem loci* ಅದೇ ಸ್ಥಳ—*eòden* ಒಂದೇ ತಲೆಯಲ್ಲಿ.

E os, ois..., ûs, *f.* V. Aurora ಮೂಡ್ಣ ದಿಕ್ಕು.

Eo us, a, um, ಮೂಡಣದ್ದು V. Orientalis--Eo us, i, *m.* ಬೆಳಗಿನ ಚುಕ್ಕಿ, ಮೂಡ್ಣ ದಿಕ್ಕು.

Eòusque, *adv.* ಇ...ಅಷ್ಟರ ವರೆಗೆ—ಇ.. ಅಷ್ಟಕ್ಕೆ.

EP

Epact æ, arum, *f. pl.* ಸೌರ ಸಂವತ್ಸರಕ್ಕೆ ಸಮವಾಗುವಂತೆ ಚಂದ್ರ ಸಂವತ್ಸರಕ್ಕೆ ಕೂಡಿಸುವ ದಿವಸಗಳ ಲೆಕ್ಕ.

Ephebi a, æ, *f.* ಪಕ್ವಪ್ರಾಯ, V. Pubertas.

Epheb us, i, *m.* ಪಕ್ವಪ್ರಾಯಕ್ಕೆ ಸೇರುವವ, V. Puber.

Ephemerid es, um, *f. pl.* ಪಂಚಾಂಗವು.

Ephemer us, a, um. *gloria* ಕಂಚಾದ ಮಿಂಚು, ಅತಂತ್ರ, ನೆಲೆಯಿಲ್ಲದ, ಏಕ ದಿನದ್ದು, ಮಾಯವಾಗಿ ಹೋಗುವ.

Ephippi um, i, *n. Indicum* ದ..ಥ..ಡಿ, ಕೋಗೀರು, ಪಲ್ಯಾಣ, ಹಲ್ಲಣ, ಸಬರ —*europeum* ಜೀನು—*pars anterior et posterior* ಕಂಠಿಚಕುಪಟ್ಟ—*postilena* ದುಂಮುಚಿ--*cingulum* ಜೀಗುಬಂದು...ದಿ, ಟಂಗುಪಟ್ಟಿ—*pannus quo operitur* ಉಲ್ಲಾರ, ನಮದಾ ಅಸ್ತ್ರು, ಜೀನು ಪೋಷು, ಜೂಲು—*alligare* ಜೀನು ಕಟ್ಟು, ಸಬರ ಹಾಕ, ಹಲ್ಲಣಿಸ-ephippiat us, a, um ಜೀನು ಈ ಮುಂತಾದ ಪ್ರಯೋಗಿಸುವ, ಜೀನು ಧರಿಸುವ--*confector* ಮುಚ್ಚಿಗ, ಚಂಮಾರ.

Ephod, *ind.* ಯಾದ ಗುರುಗಳ ನಿಲುವಂಗಿ.

Epicure us, a, um, ಅಂಗಸಕ್ತಿ, ಹೊಟ್ಟೆ ಬಾಕನು, ಲೌಕೀಕನು.

Epic us, a, um, ಮಹಾ ಕವ್ಯದ—*poema* ಮಹಾಕವ್ಯ.

Epidem us, i, *m.* ಮಾರಿ..ಹೋಕು... ರೋಗ —*in pecoribus* ಪಶುರೋಗ.

Epidermi s, dis, *f.* ಮೇಗಳ ತೊಗಲು.

Epigastri um, *n.* ಅದಿಹೊಟ್ಟೇ ಮೇಲ್ಭಾಗ.

Epiglossi s, — otti s, dis, *f.* ಗೋನಾಲಿ ಮುಚ್ಚುವ ಮೂಶೆಲುಬು.

Epigramma, tis, *n.* V. Inscriptio. ಯುಕ್ತಿ...ಹಾಸ್ಯ... ಉಳ್ಳ ಸಂಣ ಕವ್ಯ—tic us, a, um, ಇಂಥ ಬಗೇಕವ್ಯ.

Epikei a–epiici a, æ, *f.* ಕಟ್ಟಳೆಗಳ ದಯವುಳ್ಳ ಟೀಕು.

Epilepsi a, æ, *f.* ಕಾಶಿಹೊಂಯು..ಮೊಲ..ಮೊಲನಾಗರು...ರೋಗ, ಮೊಲ್ಲಾಗರು, ಮಂದಸಂನಿ, ಪ್ರಲಾಪಸಂನಿ, ಬಗುಳುಸನ್ನಿ, ಅಪಸ್ಮಾರ.

Epileptic us, a, um, ಸದರಿ ರೋಗ ...ಮೂರ್ಛೆ...ವುಳ್ಳ.

Epilog us, i, *m.* ಪ್ರಸಂಗದ..ಕವ್ಯದ ..ಕಡೆ.

Epiphani a, æ, *f.*--orum, *pl. n.* ಮೂರು ರಾಯರಿಗೆ ರಕ್ಷಕರು ತಂಮನ್ನು ತಿಳಿಯಪಡಿಸಿದ ಹಬ್ಬ.

Epiphor a, æ, *f.* ಕಂಣುರಿ, ಕಣ್ಣೀರು ಸುರಿಕೆ—*inflatio* ನಾತ.

Episcopat us, ûs, *m.* ಮೇತ್ರಾಣಿ.. ಪಟ್ಟ-ಉದ್ಯೋಗ--ವಿಚಾರಣೆ— episcopal is, *m. f.* e. *n.* ಅಂಥವರ..ವುದ್ಯೋಗದ..ಸಂಬಂಧ.

Episcopi um, i, *n.* ಮೇತ್ರಾಣೀ... ಸ್ಥಾನ—ಆಸನ—ಅರಮನೆ.

Episcopi us, a, um, ಕಾವಲಿನ, ಮೇಲ್ವಿಚಾರಣೆಯ.

Episcop o..are, *v. a.* ವಿಚಾರಿಸ, ಕಾಯ, ಕಾವಲಾಗಿರ — or, ari, *v. p.* ಮೇತ್ರಾಣಿಯಾಗ, ಸ್ಥಾಪಿಸಲ್ಪಡ.

Episcop us, i, *m.* ಮೇತ್ರಾಣಿ, ಪ್ರಧಾನ ಗುರು —*inspector.* ಮೇಲ್ವಿಚಾರಣೇಕರ್ತ.

Epistat es, æ, *f.* V. Præpositus.

Epistol a, æ, *f.* ಕಾಗದ, ಪತ್ರಿಕೆ, ಜಾಬು, ಜಾಪಿತೆ—*superioris* ನಿರೂಪ—*à patre, sacerdote* ಶ್ರೀಮುಖ—homo ab epistolis ರಾಯಸದವ—*sigillare* ಅಚ್ಚೊತ್ತು ಮಾಡ—*mittere* ಮುಟ್ಟಿಸ, ಕಳ್ಸಿಸ—*recipi* ಮುಟ್ಟ, ತಲುಪ—*aperire* ಒಡೆಯ—*aliam includere* ಮಲಫೂಫುಮಾಡ—*argumentum epistolæ* ಅಭಿಪ್ರಾಯ, ಮತಲಬು, —*indicium, caput* ಒಕ್ಕಣೆ—*postscriptum* ಆಜಾಖಲಂ—*cursor, vel, distributor epitolarum* ಟಪಾಲುಗಾರ—*missa per cursorem* ಅಂಚೇಕಾಗದ—*mittere per illum* ಅಂಚೇಮೇಲೆಕಳುಹಿಸ—*superscriptio* ಮೇಲ್ವಿಲಾಸ.

Epistolar is, *m. f.* e, *n.*—lic us, a, um ಕಾಗದದ, ಜಾಬಿನ—Epistolarés ರಾಯಸದವರು—epistoli um, i, *n*, ಚೀಟು.

Epistyli um, i, *n.* ಬೋದಿಗೆ, ಗಡಿಗೆ ಬೋದಿಗೆ, ಕಂಕಣ ಬೋದಿಗೆ—*duplex* ದೊಂತಿಬೋದಿಗೆ.

Epitaphi um, i, *n.* ಸ್ಮಶಾನದಲಿಖಿತ—*oratio* ಅಡಕದ.. ಮೃತವಾದವನ್ನು ರಿತು ಪ್ರಸಂಗ.

Epithalami um, i, *n.* ಮಂಗಳ, V. Cantilena nuptiarum.

Epithet um—on, i, *n.* ಗುಣ ತೋರಿಸುವ ವಾಕ್ಯ.

Epitom a, æ,—e, es, *f.* ಸಂಕ್ಷೇಪ, ಸಂಗ್ರಹ, ಸ್ಥೂಪ.

Epoch a, æ, *f.* ಕಾಲ, ಯುಗ, ಶಕ.

Epot o..are. *v. a.* ಎಲ್ಲಾ...ಕುಡಿಮುಟ್ಟು—ಕುಡಿದುಬಿಡ—ತೀರಿಸೋಗ.

Epul æ, arum, *f. pl.* ಮೇಜೋಗರ ಗಳು, ಊಟ, ಪಂಕ್ತಿ V. Cibus.—*pueri ad ludum* ಗುಜ್ಜನಗೂಡು—*Brachmanis novilunii die* ದರುಶಮಾಡ—*desponsatæ ab amicis sponsi antè nuptias* ಮಶಿ ಫೂಟ V. Convivium.

Epular is, *m. f.* e, *n.* ಊಟದ, ಪಂಕ್ತಿಯ—*conviva sacris* ತಿರು ಊಟಕ್ಕೆ ಕರೆಯಲ್ಪಟ್ಟ—i um, i, *n.* ವಿಂದಿನಶಾಲೆ.

Epulatio, nis, *f.* V. Manducatio—epulæ — tori us, a, um, ತಿಂಬುವ ಪದಾರ್ಥ.

Epulo, nis, *m.* ವಿಂದು..ಕೊಡುವವ—ನಡಿಸುವವ— *conviva* ಪಂಕ್ತಿಯವ V. Gluto. ಹಾತ್ರಿಸಮಿಥ.

Epul or...ari, *v. d.* ಒಳಿತು ಮುಟ್ಟ, ಸುಖವಾಗಿ ತೋಜಿಸ—ಭಕ್ಷಿಸ, ವಿಂದುಮಾಡ, ಊಟಕ್ಕೆ ಕರೆಯಲ್ಪಡ.

Epul um, i, *n.* ಸಾಧಾರಣ...ಜಾತಿ ..ಸಕ್ತೀ...ಊಟಣ.

EQ

Equ a, æ, *f.* ಹೆಂಗುದುರೆ, ಗೋಳಿಗೆ ಕುದುರೆ, ತುರಂಗಿ, ಬಡವೆ, ಬಾಡಬ, ಘೋಟಿ, ವಾಮಿ, ಗೋಡಿಗ, ಮಾವು—*parva et vilis* ತಟ್ಟಾಣಿ.

Equari a, æ, *f.* ಬೀಜಕುದುರೇ ಕೂಟ, ತುಂಬಿಸುವ ಕುದುರೆಗಳನ್ನು ಸಾಕುವ ಸ್ಥಳ—us, i, *m.* ಇಂಥ ಕುದುರೆಗಳನ್ನು ವಿಚಾರಿಸುವವ, ಅಶ್ವಶಾಲ್ದ ಕುದುರೆಕಾರ

us, a, um, ಕುದುರೆಯ.

Equ es, itis, *m.—miles* ಕುದುರೆಸವಾರ, ರಾಹುತ, ಸ್ವಾರ, ಜೋಡೀರ, ಕುಮಾರೋಕ — ರೋಮಾಪುರಿಯರಲ್ಲಿ ಮುಖ್ಯವಾದ ಅಂತಸ್ತು — *agmen* ರಿಸಾಲ್ — *dux* ರಿಸಾಲುದಾರ—*curia* ಬಾರಿಗಾಟು, ಬಾರಗೀರಕಚೇರಿ.

Equestr is, *m. f.* e,*n.* equester—id. ಸವಾರನ, ರಿಸಾಲಿನ—pes ಕುದುರೇಪಾದ—æs, ಸವಾರನಸಂಬಳ — ordo ರೋಮಾಪುರಿ ಎನೇ ಪಣ—*statua* ರಾಹುತನಪ್ರತಿಮೆ — equestria ರೋಮಾಪುರೀ ಆಟವರಂಗದಲ್ಲಿ ಸವಾರರಿಗೆ ನೇಮಿಸಿ ಯಿದ್ದ ೧೪ ಪಙಕಟ್ಟುಗಳು.

Equidem, *conj.* ಸಹ, ಸದಾ, ಮೊದಲಾಗಿ, ಖರೇ, ನಿಶ್ಚಯವಾಗಿ.

Equil e, is,*n.* ಕುದುರೇಲಾಯ, ವಾಜಿಸಾಲೆ V. Stabulum.

Equin us, a , um, ಕುದುರೆಯ— *equæ* ಗೋಳಿಗೆ ಕುದುರೆಯ.

Equ io, is, ivi, itum,ire,*v. n.* ಗೋಳಿಗ..ಬೆಚೆ—ಮದ ..ಏರ.

Equiri a, orum, *pl. n.* ಕುದುರೇಪಂದ್ಯ—ಓಟಗಳು.

Equis o, nis, *m.* ಕುದುರೇಕಾರ , ಕುದುರೆ ತಿದ್ದುಕಾರ.

Equitabil is, *m. f.* e,*n.* ಕುದುರೇ.. ಸವಾರಿ—ಕಬಾಕು...ಮಾಡಲಾಗುವ.

Equitatio, nis, *f.* ಕುದುರೇಸವಾರಿ, ಒಯ್ಯಾಳಿ, ಕುದುರೇಯಮೇಲೆಹೋಗೋಣ...ಮೇಲೆಸೋಗೋಣ.

Equitat us, ûs, *m.* V. Equitatio — ಕುದುರೆಯಮೇಲೇರೋವಿದ್ಯ—ಅಶ್ವಾಸ—*agmen* ರಿಸಾಲ್, ದಂಡಿನಕುದುರೆಗಳು—*ordo* ಸವಾರರಪಣ — us, a, um, ಕುದುರೆಗಳಿಂದ...ಕೂಡಿದ್ದ ಶಾಮು..ಲ್ಪಟ್ಟ—cohors ಸವಾರರ ಕಲಕತುಕ್ಕಡಿ.

Equiti um, i, *n.* V . Equaria—arius, i, *m.* ಇಂಥ ಗುಂಪಿನ ಮೇಲ್ವಿಚಾರಣೆಕರ್ತ.

Equit o...are. *v. n. et, a.* ಕುದುರೇಮೇಲೇರಿ ..ನಡೆಯ —ಪ್ರಯಾಣಮಾಡ, ಹಯಾರೂಢವಾಗ — ಸವಾರಿಹೋಗ— *militare* ಸವಾರನಾಗ , ರಾಹುತನಾಗಿರ — *pass*...or...ari — ಏರಲ್ಪಡ , ವಾಹನವಾಗಿರ — equitatur flumen ... per flumen ಸವಾರರಿಂದ ನದಿದಾಟಿ ಹೋಗುತ್ತೆ.

Equul a, æ, *f.* ಮರಿಹೆಂಣುಕುದುರೆ, ಹಯಿ—*debilis Indica* ತಟ್ಟಾಣಿ.

Equule us, i, *m.* ಅಡ್ಡಿಣಿಗೆ , ಅಡ್ಡನಿಗೆ, ಮಟ್ಟ..ಸಂಣಕುದುರೆ—*ligneum* ಮರಮಯವಾದ ಕುದುರೇ, ಆಜ್ಞೆಮಕ್ಕ.

Equul us, i, *m.* ಮರಿಗಂಡು ಕುದುರೆ

Equ us, i, *m.* ಕುದುರೆ , ಘೋಟಕ, ಅಶ್ವ , ತಿಂಕರ, ಸಪ್ತಿ, ತುರಂಗ , ಹಯ, ವೇಷಿ, ಅವರ, ಸ್ಯೆಂಧವ, ಧಾರಾಟ, ಪೀತಿ —*peguvensis, tolutarius* ಟಾಕಣಾ... *variegatus* ಬಟ್ಟಕುದುರೆ—*albus* ಕರರಿ... *subfuscus* ಜರದಾ... *ominosis notis insignitus* ಗೋಮಾಡ ... *facie , caudâ, pectore et ungulis albis* ಅಷ್ಟಮಂಗಳ ಕುದುರೆ—*exiguus* ತಟ್ಟು—*longus* ಚಾಪು ಕುದುರೆ—*onerarius* ಹೇರಲಾರ —ತಟ್ಟು.. ಕುದುರೆ—(*Achen*) ಅಜ್ಜಮಟ್ಟ—*velox* ಹಂಸಗತಿಕುದುರೆ — *generosus* ಅಜಾನೆಯ... ಕೇಚೇಂದ್ರಿಯ..ಕಲ್ಕಿಯ...*gressus* ನಡೆ, ರೇಚಿತ, ಚಾಲು, ಆಸ್ಕಂದಿತ — *tolutarius* (amble.) ಟಾಕಣ—(*trot*) ಧಾರೆ—*citatissimus* ಫಾಳು, ತುರಂಗಧಾಟಿ— *frontalibus ornatus* ತುರಾಯಿ.. *cum cincinno in pectore* ಶ್ರೀವತ್ಸರಿ ... *regius* ಪ

ಟ್ಟವ ಕುದಿರೆ, ಪಂಚಪಲ್ಲವಾಜಿ—*deprædatoris* ಬಯಲು... ಬಯಿದಲು ... ಕುದುರೆ—*emissarius* ಬೀಜ.. ಕೂಟದ.. ಕುದುರೆ—*equum informare*—ನಡಿಸ — *pictura 5 feminas simulans* ಪಂಚನಾರೀತುರಂಗ —ligneus ಕಡಕು— fluviatilis ನೀರ್ಕುದುರೆ—fingere ಸೊಗಮಾಡ—admittere ಹೊಡೆಯ—equo mereri ಸವಾರರಲ್ಲಿ ಸೇವಿಸ — vir equo clarus ಸವಾರರಲ್ಲಿ ಹೆಸಗೊಂಡವ.

ER

Eradicatio, nis, *f.* ಅಳಿವು, ನಿರ್ಮೂಲ, ಬುಡಮುಂತಾಗಿ ಕಿತ್ತು ಹಾಕುವಿಕೆ.

Eradicat us, a, um, ಗೊಡಗೂಲಿ.

Eradicitùs, *adv.* ಬೇರುಮುಟ್ಟಾಗಿ V. Radicitùs.

Eradic o..are. *v. a.* ಕಿತ್ತಿಹಾಕ, ಕಿತ್ತಿಡ, ಬುಡಮುಟ್ಟ ಕೀಳ, ಬುಡಮುಂತಾಗಿ ಕಿತ್ತುಹಾಕ, ಅಂಡೀಕಿತ್ತ, ಅಡಿಮುಟ್ಟ ಕಿತ್ತುಹಾಕ, ಅಳಚ—*perdere* ನಿರ್ಮೂಲಮಾಡ—*gramen* ಕಿತ್ತ, ಹೋಕ—*pass*,ri—*arbor* ಗೊಡಗೂಲಿಹೋಗ.

Era do, dis, si, sum, dere. *v. a.* ಕೆರಿಕೆ...ಬುಜೆ..ಹಾಕ — *calamo* ಗೀಚಿಡ, ಕೊಡುವು..ಚಿತ್ತು...ಮಾಡ, ಸಮಸಿಸ, ಅಣಸ, ಅಣೆಯಿಸ, ಅಳಚ—*solum ab herbis etc.* ಕೆರೆಯ--*pass.* ಅಣೆದುಹೋಗ.

Eran us,i,*m*—Erani a,æ, *pecunia f.* ವರಿ, ಬಂಟು, ಸಕ್ಷೆಮಸ್ತರ ಖಚಿನ ಪಾಲು --Eranist a, æ-eranarch es,æ,*m.* ಅದನ್ನು ನೋಡುವವ.

Eras us, a, um, *part.* erado. ಕೊಡುಪುಬಿದ್ದ, ಗೀಚಿಡಲ್ಪಟ್ಟ, ನಿರ್ಮೂಲವಾದ.

Ercisc o, is, ere, *v. a.*—or, eris,i, *v. d.* ಅಗಲಿಸ, ಭಾಗಭಾಗಿಸ.

Erebe us, a, um, ನರಕದ.

Ereb us, i, *m.* ಅಂಧಕಾರ, ಕಾರ್ಗತ್ತಲು—*inferorum* ನರಕಪಾತಾಳ.

Erectè, *adv.* ನಿಷ್ಕಪಟವಾಗಿ, ಯಥಾರ್ಥವಾಗಿ— *fortiter* ಧೈರ್ಯದೊಂದಿಗೆ —*liberè* ಇಷ್ಟದಿಂದ, ತಾನಾಗಿ— *spe* ನಂಬಿಕೊಂಡು.

Erectio, nis, *f.* ಸ್ಥಾಪನೆ—*in altum* ಎತ್ತುವಿಕೆ.

Erector, is, *m.* ಯೆತ್ತುವವ, ನಿಟ್ಟುಹಾಕುವವ.

Erect us, a, um, *part.*— erigo, ನಿಟ್ಟ, ಪೂರ್ಧ್ವ, ನೆಟ್ಟನಾದ, ನಿಟ್ಟುನಿಲುವಾಗಿ — *in digitis pedum* ನಿಕ್ಕಿ --- *capite gradiens* ತಲೆಯೆತ್ತಿ---*audax* ನಿರ್ಭೀತಿ.. ಧೈರ್ಯ...ಉಳ್ಳ—*alacer* ಚುರುಕು...ವೇಗ..ಜಾಗ್ರತೆ..ಉಳ್ಳ.

Eremig o..are, *v. a.* ಹುಟ್ಟು ಹೊಡೆಯ, ಹುಟ್ಟುಗಳಿಂದ ಕೃಣ ಮಾಡ, ದಾಟಿಹೋಗ.

Eremicol a,—mipet a—mi a , æ, *m.* ವನ...ಆಶ್ರಮ...ವಾಸಿ, ವನಪ್ರಸ್ಥ, ಯತಿ, ಕರಂದರುಷಿ, ಮುನಿ—*sectator vichnou* ವೈಷ್ಣವನ--*Brahmana* ಜಟಾಧಾರಿ ---*mulier, vel, uxor eremitæ* ಜೋಗಿನಿ, *vas ad illius usum* ಕಮಂಡಲ, ಕುಂಡಿಕೆ.

Erem us, i, *m.* ವನ, ವನಾಂತ್ರ, ಅರಣ್ಯ, ಮುನಿವಾಸ, ಆಶ್ರಮ, ಉಟಜ, ---itic us, a, um,--iti s, dis, *f.* ವನವಾಸಿಯ.

Erep o, is, si, tum, ere, *v. a.* ಹರಿದಾಡಿ..ಹೊರಡ—ದಾಟ—*ascendere* ದೊಗ್ಗಾಡಿ ಯೇರ.

Ereptio,nis, *f.* ಪರಿಗ್ರಹ, ಕಿತ್ತುಕೊಳ್ಳೋಣ.

Erept o..are, *v. n.* ತೊಲಗಿ...ತಪ್ಪಿಸಿ...ಹೋಗ.

Ereptor, is, m. ಹರಿ, ಕಿತ್ತುಕೊಳ್ಳುವವ, ಸುಲುಕೊಳ್ಳುವವ.

Erept us, a, um, *part. ex,* Eripio. fato ಕಾಲವಾದ -- rebus humanis, ಲೋಕದೊಳಗಿಂದ ತೆಗೆಯಲ್ಪಟ್ಟ— littus ಶತ್ರುಗಳ ವಶಕ್ಕೆ ಬಿದ್ದಕಳೆ--*pellis* ಸುಲಿದ ತೊಗಲು.

Er es, is, *m.* ಮುಳ್ಳುಹಂದಿ, ಪೇಹಂದಿ.

Erexi, *præt.* Erigo.

Ergà; *præp, acc.* ವಿಷಯವಾಗಿ, ಕುರಿತು, ಆಗಿ, ಓಸ್ಕರ, ಮೇಲೆ— *contrà* ಮುಂದು, ಎದುರಿಗೆ—*propè* ಸಮೀಪ.

Ergasteri um, i, *n.* V. Opificina-- Ergast es, æ, *m.*--ic us, i, *m.* V. Opifex.

Ergastul um, i, *n.* ಅಡಿಮೆಯರ ಶೆರೆಸಾಲೆ—ergastular is, *m. f.* e, *n.*—i us, a, um, ಇಂಥ ಬಂಧಕದ, ಶೆರೆಸಾಲೆಯ —ergastul us, i, *m.* ಶೆರೆಸಾಲೆ ಕಾವಲಿ, ಇಂಥ ಅಡಿಮೆಯಾದವ.

Ergò, *conj.* ಆದ್ದರಿಂದ, ಹಾಗಿರುವ ಕಾರಣ, ಹೀಗಿರುವಲ್ಲಿ, ಆದ ಪ್ರಯುಕ್ತ— *inquam* ಹೇಳಿದೆನು-- *sed* ಆದರೆ—*posteà* ಆ ಬಳಿಕ--*adv. gen.* ಓಸ್ಕರ, ನಿಮಿತ್ತವಾಗಿ, ಆಗಿ.

Eric e, es, *f.* ಒಂದು ಬಗೆ ಕಾಡ ಸಣ್ಣ ಗಿಡ—e us, a, um, ಇಂಥ ಗಿಡದ.

Er igo, igis, exi, ectum, igere, *v.a.* *rectà* ನಿಟ್ಟು ಹಾಕ, ನಿಟ್ಟಿಸ, ನಿಲಾನಿಲ್ಲಿಸ, ಪೂರ್ಧ್ವಕ್ಕೆ ಎತ್ತ-*vecte* ಹಾರೆಯಿಂದ ಮೀಟ, —*incurvatum* ನಿಗಚ--*caput* ಒತ್ತುಕೊಳ್ಳ—*stabilire* ಸ್ಥಾಪಿಸ—*sylvas* ಸಾದಿನಿಟ್ಟ, V. Attollo--Elevo—animum in spem ತಿರಿಗಿ ಧೈರ್ಯಕೊಡ, ನಂಬಿಕೆ ಹುಟ್ಟಿಸ, ಪ್ರೇರೇಪಿಸ— aures et mentem ಅನುಕೂಲ..ಗವನವಾದ..ಕಿವಿ ಕೊಡ, *pass*--*capilli* ನಿವಿರ.

Erigu o, as, are, *v. n.* ಓಡ..ಸುರಿಯ..ಬಿಡ.

Erinace us, i, *n*, V. Eres.

Erin us, i, *m.* ಕಾಡತ್ತೀಮರ.

Erip io, is, ui, (ereptum) ere, *v. a.* ಕಿತ್ತ, ಕಿತ್ತಿಬಿಡ, ಕೀಳ, ಕಿತ್ತುಕೊಳ್ಳ, ಅಪಹರಿಸ-*è manibus* ಬೀಗ--*sese* ಕಿತ್ತಿರಿ--ಕಿತ್ತಿ...ಕೊಂಡು ಹೋಗ — *trahentis* ಗುಂಜಿಕೊಂಡು ಹೋಗ— *conspectum* ಮರೆಮಾಡ— fidem alicui ಇಂದು ಮೇಲೆ ಒಬ್ಬನ್ನಾದರೂ ನಂಬದೆ ಹೋಗ --*redimere* ಬಿಡಿಸ, ರಕ್ಷಿಸ — eripi ಅಕಾಲವಾಗಿ ಸಾಯು.

Erisma, tis, *n.* ಹದಿ—*cælatum* ಬೊಗರಿ V. Anteris. *propugnaculi* ಪಡಿಕೋಟೆ.

Erodi us, i, *m.* ಕೊಕ್ಕು, ನೀರುಕೋಳಿ.

Ero do, dis, si, sum, dere. *v. a.* V. Corrodo.

Erogatio, nis, *f.* ಹಂಚುವಿಕೆ, ಕೊಡುವಿಕೆ, ದಾನ, ಧರ್ಮ — *expensa* ವೆಚ್ಚ V. Abrogatio.

Erogator, is, *m.* ಕೊಡುವವ, ದಾಯಕ— i us, a, um, ದಾನದ ಸಂಬಂಧ, ಹಂಚಿಸಲ್ಪಡುವ.

Erogat us, a, um, *part.* Erogo— ದೈನ್ಯವಾಗಿ ಬೇಡಿದ, ಬೇಡಿಕೊಳ್ಳಲ್ಪಟ್ಟ.

Erogit o...are. *v.a.* ವಿಚಾರಿಸಿ...ಕೇಳಿ...ಕೊಳ್ಳ, V. Inquiro.

Erog o..are. *v. a.* V. Distribuo — ದಾನಧರ್ಮಮಾಡ, ವೆಚ್ಚಮಾಡ—pecunias suis legibus ತನಗೆ ಇಷ್ಟಬಂದ ಹಾಗೆ ಹಣ ಖರ್ಚುಮಾಡ— *necare* ಕೊಲ್ಲ — *perdere* ಕೆಡಿಸ, ಹೋಗಲಾಡಿಸ.

Erosio, nis, *f. dente* ಕೊರೆಯುವಿಕೆ — *ærugine* ತುಕ್ಕು ಹಿಡಿಯುವಿಕೆ, ಕಿಲುಬು, —*aquâ, frictione* ಸವದುಬೀಳುವಿಕೆ.

Eros us, a, um, *part.* erodo. ತುಕ್ಕು ಬಿದ್ದ, ಸವದುಹೋದ.

Erotic us, a, um, ಕಾಮದ —*ars* ಕಾಮಶಾಸ್ತ್ರ —eroti um, i, *n.* ಕಾಮನಸಂಬಂಧಿಗೀತ.

Errabund us, a, um, ಅಲೆಯುವ, ತಿರಿಯುವ— *mulier* ಅಗ್ಗಳಿ, ಅವಾಜಳಿ— *terrore, vel, penuriâ* ಗಾಕಪ್ಪನಾಗಿ ತಿರುಗಿ, ಭ್ರಮೆ ಭ್ರಾಂತಿಗೊಂಡ.

Erran s, tis, *o. g.* V. Errabundus, ದಾರಿತಪ್ಪುವ, ತಪ್ಪಿ—*opinio* ನಿಶ್ಚಯವಿಲ್ಲದ ನೆನಪು—*sidera* ಗ್ರಹಗಳು.

Erratic us, a, um, V. Errans. ದೇಶಾಂತರಿ—*homo* ಮೂಲಿಕೆ... ಬಳ್ಳಿ ಮದ್ದುಗಳ ತೇಮೆತೇಮೆಗೆ ಮಾರುವವ — *sanguis* ದದ್ದು—*planta* ಅಲ್ಲಲ್ಲಿಹಬ್ಬಿಕೊಂಡಿರುವ—*sylvestris* ಕಾಡ, ತಾನಾಗಿ ಮೊಳೆಯುವ.

Erant i a, æ—Erratio, nis, *f.* —rat us, ûs, *m. ambitus* ಸುತ್ತು, ಸುರುಳಿ—*error* ತಪ್ಪು, ಮಾರಾಟ V. Error.

Errat um, i, *n. lapsus* ಸ್ಖಾಲಿತ್ಯ, ಸ್ಖಲನ —*notatum ductu calami* ತುಡುಪು— *in scriptura* ಕೈತಪ್ಪು, ಮರಪು —*committere* ತಪ್ಪುಬೀಳ— *emendare* ತಿದ್ದಿಕ್ಕ, ತುಡುಪುಮಾಡ—errata ತಪ್ಪುತಿದ್ದುಪಾಟು.

Err o..are. *v. n. mente* ತಪ್ಪುಗೊಳ್ಳ, ಬುದ್ಧಿತಪ್ಪು, ಭ್ರಮಿಸ, ಮಾರಾಡ, ಜಕ್ಕಿಸ, ಮಲತಿರ, ಎಚ್ಚರಿಕೆತಪ್ಪು—*vagare* ಸುಡಿಯ, ಅಂಡೋಲಿಯ, ದಾರಿಗೆ ದಾರಿಹೋಗ, ಅಲೆಯ, ತಿರುಗಾಡ — *penuriâ, timore* ಶೊಲಾಯ ಪಡ, ಗಾಕಪ್ಪನಾಗಿತಿರುಗ— pudor errat in ore ಮುಖಕ್ಕೆ ಲಜ್ಜೆ ಹುಟ್ಟುತ್ತಿ—rumoribus ಕಳ್ಳಸುದ್ದಿ ನಡಿಯುತ್ತದೆ.

Erro, nis, *f.* ಕಂಕನು, ತಿರುಗುಳಿ, ಕಬ್ಬಕ್ಕಿಗ, ದೇಶಾಂತರಿ — Erron es, um, *pl. m.* ಗ್ರಹಗಳು.

Errone us, a, um, ತಪ್ಪುಕಾರ್ಯ, ಮರಪುಳ್ಳ V. Erro.

Error, is, *m.* ಮರವು, ತಪ್ಪು, ಮರಪು—*defectu advertentiæ* ಬುದ್ಧಿಸ್ಖಾಲಿತ್ಯ, ಸ್ಖಲನ, ಅನವಧಾನ, ಮೇಲುಮರದಿ — *circà rem* ಹಾರಾಟ—*doctrina* ಅಪಧ... ಬೋಧನೆ—ವಿಶ್ವಾಸ.

Erubescend us, a, um, ನಾಚಿಕೆಗೆ ತಕ್ಕ.

Erub eo, es, ui, ere—esc o, is, ere. *v. n. et. a.* ಕೆಂಪಾಗ, ನಾಚಿಕೆಪಡ, ನಾಚು, ಖಿಂಡನಾಗ, ಲಜ್ಜಿಸ, ಮೊಗಚಿಕ್ಕ ಮಾಡಿಕೊಳ್ಳ — rei, rem, in re, re ಒಂದು ಸಂಗತಿಗೋಸ್ಕರ ನಾಚಿಕೆಪಡ— ora alicujus ಒಬ್ಬನಬಳಿಗೆ ಬರ ನಾಚಿಕೆಪಡ.

Eruc a, æ, *f.* ಶೂಕ, ಎಲೆಹುಳ — *cujus pili inflammationem cuti afferunt* ಕಂಬಳಿ ಹುಳ — *nigra hirsuta* ಕೋರಿಹುಳ—*planta* ಒಂದುಸಸಿ.

Eructatio, nis, *f.* ತೇಗು —*expulsio* ಹೊರಗೆತಳ್ಳುವಿಕೆ V. Exhalatio.

Eruct o..are. *v. a.* ತೇಗ, ತೇಗು ಹಿಡಿಸು — *expellere* ಹೊರಡಿಸ, ನೂಕಿಬಿಡ—*evomere* ಕಕ್ಕಿಬಿಡ—*exhalare* ವಾಸನೆಬೀಸ, ಆವಿಬಿಡ.

Eruct us, a, um, *part.* Erugo —*vinum* ಕೆಟ್ಟುಹೋದ..ಹಾರುವ..ದ್ರಾಕ್ಷೇರಸ.

Eruder o…are. *v.a.* ಕುಪ್ಪೆ…ತಿಪ್ಪೆ..ಕಸ…ಗುಡಿಸ V. Everro.

Erudiend us, a, um, ಕಲಿಸತಕ್ಕ, ಕಲಿಕೆಗೆಯುಕ್ತ.

Erud io, is, ivi, itum, ire *v. a.* ಓದು ಬರಾವು ಕಲಿಸ, ಕಿದ್ದ, ಬೋಧಿಸ, ಪಾಠಮಾಡಿಸ—*in artes patrias* ಕಂದೇ ಪುಣ್ಯಗಳ ಪಾಠಮಾಡಿಸ.

Eruditè, *adv.* ಯುಕ್ತವಾಗಿ, ಶಾಸ್ತ್ರಪ್ರಕಾರ.

Eruditio, nis, *f.* ಕಲಿಸುವಿಕೆ, ವಿದ್ಯಾಭ್ಯಾಸ ಮಾಡಿಸುವಿಕೆ— V. Eruditus ûs.

Eruditor, is, *m* — tri x, cis, *f.* V. Pædagogus.—*equorum* ಶಿದ್ದಾಳು.

Erudit us, a, um, *valdè* ಸಕಲವಿದ್ವಾಂಸ, ಕಿದ್ದಲ್ಪಟ್ಟ, ಪಾಠ·· ರೂಢಿ ... ಮಾಡಿಕೊಂಡ V. Doctus—*stipendiis* ಜಗಳದಲ್ಲಿ ಪಳಗಿದವ.

Erudit us, ûs, *m.* ಚೈದುಷ್ಯ, ಕಿದ್ದುಪಾಟು, ವಿದ್ವತ್ತು, ವಿದ್ಯಶಾಸ್ತ್ರಗಳಲ್ಲಿ ಪ್ರವಿನತ್ವ.

Erugatio, nis, *f.* ಸುಕ್ಕು ತೆಗದು ಹಾಕುವಿಕೆ.

Erug o..are, ಸುಕ್ಕು··· ತೆಕೆ.. ತೆಗಿಯು, ಮಡಿ··ಗುಜು... ತೆಗಿಯು—o, is, i, (eructum) ere, *v. a.* V. Eructo.

Eru mpo, mpis, pi, ptum, mpere. *v. a. vi è loco* ಬಗದುಕೊಂಡುಹೋಗ, ಹೊರಡ— *spontè ut semina igne disrumpi* ಸಿಡಿಯು, ಹಾರ-*ebulliendo liquidum* ಕುದಿಯುಕ್ಕ— *febris, dolor exteriùs* ಹೊರಹೊಂಡು—*lacrymæ, sanguis* ಉಗಿಯು—*è vulnere* ಒಸರ, ನಿಮಿರ —*apparere* ಇದ್ದುಕಿದ್ದ ಹಾಗೆ ಕಾಣಿಸ—ಹೊರಗೆಬರ — *v. a. rumpere* ಒಡಿಸ, ಒಡದುಹಾಕ.

Errunc o..are, *v. a.* ಮುಳ್ಳು···ಕಳೆ·· ಕೆರಿಯು—ಕಿತ್ತಿಹಾಕ.

Eru o, is, i, utum, ere.*v.a. humatum* ಭೂಮಿಯಲ್ಲಿ ಹೂಳಿದಲ್ಪಟ್ಟದ್ದು ತೆಗೆಯು—*foràs* ಹೊರಗೆತರ—*eradicare* ದಳ..ಬುಡ..ಮುಟ್ಟಕಿತ್ತುಹಾಕ—ಕೀಳುಕೊಳ್ಳ—*fodere* ತೋಡ, ಅಗಿಯು— *evertere* ಕೆಡಿವಿಬಿಡ, ಹಾಳುಮಾಡ.

Eruptio, nis, *f.* ಬಗದುಹೊರಡುವಿಕೆ—*vitiorum* ದುರ್ಗುಣ ಪ್ರಲಯ—*cutanea* ಗಜ್ಜಿ, ಪಾಮ—*puerorum* ಕೆಂಬರವು—*aquæ, cruoris* ಚಿಮಿಣಿ···*magno impetu* ಚಿಲ್ಲನೆ V. Incursio.

Eruptor, is, *m.* ನುಗ್ಗಿ ನುಗ್ಗುವ ಕ್ಷೇವುಗಾರ.

Erupt us, a, um, *part.* Erumpo.

Erut us, a, um, *part.* eruo—*orás.* ಬೈಲುಮಾಡಿದ್ದು.

Erysipela s,tis,*n.* ದದ್ದು, ಪಾಮ, ರಕ್ತಕುಷ್ಠ.

ES

Esc a,æ, *f.* ಭೋಜನ, ಜೇಮನ, ಗ್ರಾಸ, ಊಟ—*quidquid coctum et paratum* ಮುಸರೆ —*benè condita* ಮೃಷ್ಟಾನ್ನ —*vacua sine condimentis* ಉಪ್ಪಿಲ್ಲದೂಟ, ಬರಿಅನ್ನ—*corrupta* ಊಸಿದ —*quantitas quædam seposita ut addatur si non sufficiant cibi appositi* ಎಡೆ — *allex* ಎಡೆ.

Escal is, *m. f.* e,*n.* ಮೇಜೆಗೊರವುವ—*argentum* ಬೆಳ್ಳಿಕಜ್ಜಿ ಮುಟ್ಟು—*allicis* ಎಡೆಸಂಬಂಧ—*cibi* ಭೋಜನದ—escari us, a, um, *id.*

Escen do, dis, di, sum, dere. *v. n.* ಏರ, ಹತ್ತ—*descendere* ಇಳಿಯು— *è nave* ಹಡಗಿನಿಂದಿಳಿಯು.

Escens us, ûs, *m.* ಲಗ್ಗೆ, ಏಣೀ ಮೇಲೆ ಗೋಡೆಹತ್ತ.

Esc o..are, *v. a.* ಭೂಜಿಸ.

Esculent um, i, *n.* ತಿನಿ—*provisio*

ರೊಟ್ಟಿಬುತ್ತಿ, ರಸ್ತು.

Esculent us, a, um, ಭೋಜ್ಯ — *merx* ತಿಂನುವ ಪದಾರ್ಥವಾದ.

Esitatio, nis, *f.* ಆಗಾಗ್ಯ ಭುಜಿಸುವಿಕೆ— tator, is, *m.* ಆಗಾಗ್ಯ ತಿಂನುವವ—tat us, a, um ಸಾಧಾರಣವಾಗಿ ತಿಂನುವ ಪದಾರ್ಥ.

Esit o...are ಆಗಾಗ್ಯ.. ಎಲ್ಲರು..ತಿನ್ನು —Esor, is, *m.* ತಿಂನಾಳಿ, ಹೊಟ್ಟೆಬಾಕನು.

Essenti a, æ, ಸಾರ, ತತ್ವ, ನಿಕರ, ತನ, ಸ್ವರೂಪ, ಪ್ರಕೃತಿ, ಭಾವ, ತಲ, ಪಕ್ಷ, ಅರಬು.

Essential is, *m. f.* e. *n.* ಪ್ರಧಾನ, ಸ್ವಾಭಾವಿಕ, ಅವಸರವಾದ.

Essentialiter, *adv.* ಸ್ವಾಭಾವಿಕವಾಗಿ, ಪ್ರಧಾನವಾಗಿ, ಅವಸರವಾಗಿ.

Esto, *imp. ex.* sum. ಇರಲಿ, ಆಗಲಿ, ಸಾಕು, ಇದ್ದರೇನು.

Estor, is, *m.* V. Comestor,—*paxillus* ಭಂಡೀ ಪ್ರಧಾನ ಕಬ್ಬಿಣದ ಮೊಳೆ.

Estur, *imp.* ಉಣ್ಣುತ್ತಾರೆ.

Esurial is, *m. f.* e, *n.* ಹಸಿವಿನ.

Esurien s, tis, *o. g.* ಹಸಿದ, ಹಸ್ತು, ಅನ್ನರಸವಿಲ್ಲದ, ಕ್ಷುಧಿತ, ಅಶನಾಯಿತ, ಕರ್ಪರಿಯನು—*mendicans* ಅಶನಾರ್ಥಿ.

Esurienter, *adv.* ಹಸಿವಿನೊಂದಿಗೆ, ಹಸ್ತು.

Esuri es, ei--tio, nis,—g o, inis, *f.* ಹಸಿವೆ, ಕ್ಷುತ್ತು, ಕ್ಷುಧೆ, ರೋಚಕ, ದೀಪನ, ಬುಭುಕ್ಷೆ, ಅಶನಾಯೆ— *pœna stomachi* ಗಾದು ಗಾರನ V. Fames--*pauperies* ದರಿದ್ರ.

Esurio, nis,—itor, is, *m.* ಹಸಿಯು, ಹಸ್ತಿರ V. Esuriens.

Esur io, is, ivi, ... ii, itum, ire, *v. a. et, a.* ಹಸಿವಿಯಾಗ, ಹಸ್ತಾಗಿರ, ಹಸಿಯು, ಕರ್ಪವಣಗಟ್ಟ—*esitare* ಆಗಾಗ್ಯ ತಿನ್ನು.

Es us, ûs, *m.* ಭುಕ್ತಿ, V. Manducatio--us, a, um, *part.* edo. ಉಂಡ, ತಿಂದ—*pass.* ತಿಂನಲ್ಪಟ್ಟ.

ET

Et *conj*, ಊ, ಮತ್ತು, ಮತ್ತೆ, — *et quidem* ಮತ್ತು, ಹಾಗೆಯೇ, ಆದಾಗ್ಯೂ, —*sicut* ಹೇಶಿಗೆ— *nam* ಏ..ಯಾಕೆ.. ಅಂದರೆ—*imò* ಸಹ, ಮೊದಲಾಗಿ, ಇನ್ನು, ಶಿವಾಯಿ.

Etenim, *conj.* ಏ... ಯಾಕೆ..ಅಂದರೆ, ಯಾವದಂದರೆ.

Etesi as, æ, *f.* ಈಶಾನ್ಯ...ಮೂಲೆ—ದಿಕ್ಕೆ—*ventus* ಕೆಲವು ಶೀಮೆಯಲ್ಲಿ ವರುಷಾ ವರುಷ ಬೀಸುವ ಘಾಳಿಗಳು--ac us a, um, ಇಂಥಾ ಘಾಳಿಗಳ.

Etex o, is, ui, tum, ere, ಮುರಿ...ಕುರಿ...ಸೆಜ್ಜ—ಹೊಡೆಯು, ಶಿಕ್ಷೆಗಿಯು.

Ethic a, æ—e,es, *f.* ಧರ್ಮಶಾಸ್ತ್ರ, ದಂಡನೀತಿ, ನೀತಿ ವಿದ್ದೆ, ಸುಕೃತದ ವ್ಯಾಖ್ಯಾನ.

Ethic us, a, um, ಧರ್ಮಶಾಸ್ತ್ರದ ಸಂಬಂಧ.

Ethnarch a,—es, æ, *m.* ಪ್ರಭು, ಜನ...ಜಾತೀ...ತಲೆಯವ,

Ethnicè, *adv.* ಅಜ್ಞಾನಿಯಾಗಿ.

Ethnic us, a, um, - al is, *n. f.* e. *m.* ಲೋಕದವರ, ಅಜ್ಞಾನಿಯು, ಅಜ್ಞಾನಸ್ಥದ.

Ethologi a, æ, *f.* ಗುಣಾಗುಣಗಳ ವಿಚಿತ್ರ, ನಡವಡಿಕೆ. ಆಚಾರದ..ಬಂಣನೆ.

Eth os, i, *m.* ರೀತಿ, ನಡವಡಿಕೆ V. Mores.

Etiàm, *conj.* ಸಹ, ಕೂಡ, ಊ,

ಸಹಿತ, ಸಹ--*affirmativè* ಹೌದು—*inferior superiori* ಹೌದುಬುದ್ಧಿ — *inferiori viro* ಹೌದುಹಾಣೆ — *mulieri* ಹೌದುಹಾಗೋ—*ampliùs* ಮತ್ತೂ, ಇ...ಅ...ದಲ್ಲದೆ —*iterùm* ಪುನಃ, ತಿರಿಗಿ— *esto* ಆಗಲಿ, ಒಳ್ಳೇದು — etiam rides, ನಗುವನಕ್ಕೆ ನಿನಗೆ ಲಜ್ಜೆ ಬಾರದೋ — etiam atque etiam ಬರ ಬರ, ಮತ್ತೂ ಮತ್ತೂ, ತಿರಿಗಿ ತಿರಿಗಿ—nùm-nunc ಇದುವರೆಗೂ, ಇನ್ನು tùm ಅದುವರೆಗೆ— etiamsi,etiam ut ಇದ್ದರೆಯೂ, ಆದಾಗ್ಯೂ.

Etsi, *conj.* ಆಗ್ಯೂ,ಇ..ಅ..ದಾಗ್ಯೂ —ಹೇ...ರಾ...ಗಿದ್ದಾಗ್ಯೂ.

Etymologi a, æ, *f.* ವ್ಯುತ್ಪತ್ತಿ—Etymon, i, *n.* ಶಬ್ದಗಳ..ಮೂಲ--ಉತ್ಪತ್ತಿ--... ವಿವರ — Etymologic e, es, *f.* ವ್ಯಾಕರಣ, ಅವಯವ್ಯುತ್ಪತ್ತಿ—*adinvenire* ವ್ಯತ್ಪಾದಿಸ— us, a, um, ಶಬ್ದಗಳೋತ್ಪತ್ತೀವ್ಯಾಖ್ಯಾನದ, ವ್ಯುತ್ಪನ್ನ.

EU

Eu. ಒಳ್ಳೇದು, ಘಟ್ಟಿ ಘಟ್ಟಿ, ಭಾಂಗು, ತಲಶೆ.

Euchar is, *m. f.* e,*n.* V. Gratiosus.

Eucharistia, orum, *n. pl.* ಮೇಲರಿತಸ್ತೋತ್ರಗಳು.

Eucharisti a, æ, *f.* ಸತ್ಪ್ರಸಾದ, ದಿವ್ಯಭೋಜನ, ಇಷ್ಟಪ್ರಸಾದ, ಕರ್ತರಾಭೋಜನ.

Eucharistic us, a, um, ದೇವಪ್ರಸಾದದ—*accidentia* ಗುಣಗಳು—*gratiarum actio* ಮೇಲರಿತತನ, ಸ್ತೋತ್ರಗಳ ಸಂಬಂಧ.

Euge—Eugepæ, ಸರಿ, ಒಳ್ಳೇದು, ತಗ್ರ, ಧೈರ್ಯ, ಘಟ್ಟಿ, ಹುಂ, ವಹವ್ವಾ, ಶಾಬಾಸು, ಹಾರಾ, ಶ್ಯ, ಪೂರುಶೆ, ಬಾವು—*p ugnantium* ಕಹಕಹವುನೆ.

Eunuch us, i, *m.* ಧವನ— *naturalis* ಕ್ಲೀಬ, ನಪುಂಸಕನು — *arte* ಹೋಜನು, ಖೋಜಾರ, ಅತಿಷಂಡ, ಹೇಡಿಯುವ, ಕೋಂಜಲಿ, ಗೋಜ— *muliebriter indutus* ಗೋಜಿ. V. Impotens.

Euphorbi a, æ, *f.*— bi on, i, *n.* ಕಳ್ಳಿ—*succus* ಹಾಲು.

Euroaquilo, nis, *m.* ಈಶಾನ್ಯಭೂಲಿ--ದಿಶೆ.

Euroaust er, ri,—Euronot us, i, *m.* ಅಗ್ನಿ..ಮೂಲೆ--ದಿಶೆ--ಘಾಳಿ.

Europ a, æ, *f.* ಭೂಲೋಕದ್ದೊಂದು ಖಂಡ--ಶೀಮೆ, ಇಲಾಯಿತಿ.

Europe us, a, um—*homo* ದೂರಣ, ಇಲಾಯಿತೀಮನುಷ್ಯ, ಜಾತಿಯವ, ಶಾಂಪ್ರಮುಖದವ.

Eur us, i, *m.* ಮೂಡ್ಲ.. ಘಾಳಿ--ದಿಕ್ಕು.

EV

Evacuatio, nis, *f.* ಬರಿದುಮಾಡುವಿಕೆ—*alvi* ವಿರೇಚನ, ಹೊಟ್ಟೆಕಳೆಯುವಿಕೆ—evacuat us, a, um, *part.* ತಳ್ಳಲ್ಪಟ್ಟ, ರದ್ದಾದ.

Evacu o.. are; ಬರಿ..ಬರಿದು..ಮಾಡ, ಕಳದುಬಿಡ—*destruere* ನಿರಾಕಾರ.. ನಿರ್ಮೂಲ..ಮಾಡ.

Eva do, dis,si,sum, dere, *v. n. et. a.*—*fugere* ಓಡಿಹೋಗ,ತಪ್ಪಿಸಿಕೊಳ್ಳ, ಟಳಾಯಿಸ—*clanculò* ಸರಕಿಸಿ..ಕದದು.. ಕಣ್ಣುಮರೆಯಾಗಿ.. ಜಾಡಿಯಾಗಿ... ಹೋಗ, ಮರೆಸ—vitam ಕಾಲವಾಗ— *vitare* ತಪ್ಪಿಸ, ನೀಗಿಸ, ತೊಲಗ—*se expedire* ಕಳೆದುಕೊಳ್ಳ, ಕಡಚಿಬರ—*ex angustiâ* ಅಗಚಾಟ್ಲು..ತಂಟೆ..ತೀರಿಸ—inter virgulta ಗಿಡಗಳಲ್ಲಿ ಹೋಗ-in ardua ಬೆಟ್ಟ ಮೇರ—*fieri* — malus evasit ಕೆಟ್ಟವನಾದನು—evasit hùc sermo ಅವರ ಮೇ

ಶೆ ಪ್ರಸ್ತಾಪ ಬಂತು—ಬಿತ್ತು—in malum ಕಾರ್ಯ ಕೆಟ್ಟು ಹೋಗ—inane cœptum ಕಾರ್ಯ ಖಾಲಿಯಾಗಿ ಹೋಗ — *evenire* ಸಂಭವಿಸ.

Evagatio, nis, *f.--mentis*, ಚಾಲ್ತಾರಿಕೆ, ಪರಾಕು, ವಿಬೋಧ, ತನುಮರವೆ V. Divagatio.

Evagin o··are.-*gladium* V. Exuo. ಹಿರಿಯು, ಹಿರಿಹಿರಿದುಹಾಕ--ಇಡ.

Evag or..ari, *v. d.* ಅಲ್ಲಿಲ್ಲಿಅಲೆಯು, ಓಲಾಯಪಡ, ದಾರಿತಪ್ಪ—*mente* ಮರಗೊಳ್ಳ—ಗೊಂಡಿರ V. Vagor.

Eval eo, es, ui, ere. — esc o, is, ere. *v. n.*— *posse* ಬಲ್ಲ, ಕೈಯುಲ್ಲಾಗ — *pretio* ಬಾಳ, ಬೆಲೆಹೊಂದ V. Valeo.-- *roborari* ತೇರ, ಬಲಗೊಳ್ಳ--*in bellum* ಜಗಳಕ್ಕಾಗಿ ಬಲಗೊಳ್ಳ.

Evallef acio, acis, eci, actum, acere, *v. a.* ಹೊರಗೆತಳ್ಳ, ಹೊರಡಿಸ, ಬಸೇದು…ಬಿಡಿಸಿ…ಮಾಡಿಸ — Evall o··· are—*id.*

Evall o, is, ere. *v. a.* ಕೆರಿಯು, ಹೊಟ್ಟುತೆಗದುಹಾಕ V. Exacero.

Fusio, nis, *f. liquidi* ಹೊಯಿಕೆ, ಸುರಿಕೆ—*liquatio* ದ್ರವ, ದ್ರವಣ, ಲಯ, —*statuæ* ಎರಕ—*debitum* ಸರಿ, ತೀರಿಗೆ.

Fusor, is, *m.* V. Conflator.

Fusori um, i, *n.* ದೋಣಿ, ಕಾಲುವೆ V. Eluvies.

Fusori us, a, um, ಎರಕದವಾದ—*opere fusorio formare* ಕರಗಿಸಿ ಹೊಯ್ದು —ಎರೆಯು.

Fustigatio, nis, *f.* ಕೋಲಿನ.. ಚೆತ್ತದ ··ಪೆಟ್ಟು.

Fustig o··are, *v. a.* ಕೋಲಿನಿಂದ ··· ಚೆತ್ತದಿಂದ··ಬಡಿಯು.

Fustim, *adv.* ಕೋಲುಪೆಟ್ಟಿನಿಂದ.

Fust is, is, *m.* ದೊಂಣೆ, ದೊಣಪೆ, ಸೋಂಟೆ, ಬಡಿ, ಕೋಲು--*brevis* ಮೊಟಕಟ್ಟಿಗೆ— *ferro munitus* ಯಷ್ಟಿ, ಬಾಣಾಕೋಲು — *rotundus et duobus extremis planus* ದಿಂಡುಕಟ್ಟಿಗೆ—*annulis mobilibus instructus* ಕಟ್ಟಿನ ಗುದಿಗೆ—*loco telis* ದಂಡಿಗೆಕೋಲು, ಗದಾಯುಧ-*plumbatus* ಕಟ್ಟುಬಡಿಕೆ—*ad canes venaticos* ಕಟ್ಟುವ ಕೋಲು--*ad conterenda legumina etc.* ದುಡ್ಡು ಕೋಲು---*vir semper fuste armatus* ದೊಂಣೇಬರಮ--fustem alicui impengere ದೊಂಣೆಯಿಂದ ಬಡಿಯು--fustibus caput implere ತಲೇಮೇಲೆ ಕೋಲಿನಿಂದ ಕಪ್ಪಾರವಾಗಿ ಹೊಡೆಯು.

Fustuari um, i, *n.* ಪಟ್ಟೇಯಾಗಿ ವಾಲೇಕಾರರು ಕೋಲು ಚೆತ್ತಗಳಿಂದ ಬಡಿಯುವ ಆಜ್ಞೆ —us, i, *m.* ಇಂಥ ಶಿಕ್ಷೆ ಯಿಡುವವ.

Fusur a, æ, *f.* ಕರಗಿಸುವಿಕೆ V. fusio.

Fus us, ûs, *m.* ಸೋರಿಕೆ, ಸುರಿಯುವಿಕೆ

Fus us, i, *m.* ಕದರು, ನೂಲಿನ ಕದಿ—*pro stamine* ಉಣಿಚಿ ಕದರು--*cum filo* ಕಂಡಿಕೆಕದರು.

Fus us, a, um *part.* fundo, *venter* ಸಡ್ಲಬಿದ್ದ ಪುದರ—*recubans* ಮಲಗಿದವ —*eversus* ಬಿದ್ದ, ಹೋರತ— *diffusus* ವಿವರವಾದ, ಅಗಲಿಸಲ್ಪಟ್ಟ, ಹರವಿಯಿರುವ, ಹಬ್ಬಿಕೊಂಡ—*sermo* ದೀರ್ಘ, ವಿಸ್ತಾರ ಧಾರಾಳವಾದ — *fusi crines* ಕೆದರಿದ··· ಅಮುಕ್ತವಾದ···ಕೇಶ.

Futilè–iter, *adv.* ವ್ಯರ್ಥ..ನಿಷ್ಪ್ರಯೋಜನ ··ನಿಸ್ಸಾರಣ ··ವಾಗಿ.

Futil e, is, *n.* ಬಲೀಪಾತ್ರೆ.

Futil is, *m. f.* e, *n.* ಅಗ್ಗದ ··· ಪೊಡದು··ಹೋಗುವ, ಒಂದುವಿಡಿಯ ಕೂಡದ, ಅಲ್ಪ, ತುಸ, ಕೆಲಸಕ್ಕೆಬಾರದ, ಅಪ್ರಯೋಜಕ—*verbum* ಪೊಳ್ಳಿ ಮಾತು.

Futilita s, tis, *f.* ವ್ಯರ್ಥ, ತೃಣ, ಅಪ್ರಯೋಜನ, ನಿಷ್ಫಲ, ಅವಿವೇಕ.

Fut io, ire, *v. a.* ಹೊಯ್ಯು, ಸುರಿಯು.

Futuritio, nis, *f.* ಮುಂದು..ಬರುವ..ಜೀವ

Futur us, a, um, ಬರ ಹೋಗುವ, ಆಗಲಿರುವ, ಭವಿಷ್ಯತ್ತು, ಭವಿಷ್ಯ, ಆಗಾಮಿ, ಆಗತಿ, ಅನಾಗತ — *non eventurum* ನಿಗ್ರತಿ — *quod fieri oportet* ಭಾವ್ಯ — *tempus* ಭವಿಷ್ಯತ್ಕಾಲ, ಆಯತಿ—*in futurum* ಇನ್ನು ಮುಂದೆ, ಭವಿಷ್ಯನಾಗಿ, ಶ್ವಃ ಸ್ತ್ರ, — *modus verborum simplex* ಭವಿಷ್ಯತ್ಕಾಲ, ಪೂರ್ವಭವಿಷ್ಯ— *præteri tum* ಅನದ್ಯತನ···ಉತ್ತರ··ಭವಿಷ್ಯ.

G

Gabal us, i, *m.* ಗಲ್ಲು.

Gabath a,æ,*f.* ಜೆರುಸಲೇಂಮು ನಗರದ ನೀತಿಸ್ಥಳವು.

Gabell a, æ, *f.*—um,i, *n.* ವುಪ್ಪಿನ ಸುಂಕ, ಉಪ್ಪುಮಾರುವಮಡ—ari us, i, *m.* ಉಪ್ಪಿನಸುಂಕದವ.

Gæs um, i, *n.* ಕಬ್ಬಿಣಸಾಂಗು.

Galban um,i,*n.* ಒಂದುಬಗೆಪರಿಮಳ

Galbe æ, arum, *pl. f.* ಜಯಶಾಲಿಗಳು ಧರಿಸುವ ಭುಜಕೀರ್ತಿಗಳು, ವೀರಶೂರರಿಗೆಕೊಡುವ ಬಳೇಕಾಪೆ—um, i, *n.*—us, i, *m.* ಸ್ತ್ರೀಯಾಭರಣ, ಒಂದು ಬಗೆ ಕೈಕಟ್ಟು.

Galb us, a, um, ಎಳೇಹಸುರು.

Gale a, æ, *f.* ಶಿರೋರಕ್ಷೆ, ಟೋಪಿ, ಶೀರ್ಷಕ, ತಲೇ ಕಾವಿ — ferina ದುಷ್ಟಮೃಗದ ತೊಗಲಿನಿಂದುಂಟಾದ···ಮುಚ್ಚಲ್ಪಟ್ಟ···ಟೋಪಿ.

Galear is, *m. f.*e,*n.* ಶಿರೋರಕ್ಷೆಯ —i i, orum, *pl. m.* ಭಂಟರುಗಳಾಯುಧಗಳ ವಾಹಕರು.

Galeat us, a, um, ಶಿರೋರಕ್ಷೆ···ಉಳ್ಳ — ಧರಿಸುವ — *prologus* ನ್ಯಾಯ··ವುಕ್ತಿ···ಉದಹರಿಸುವ ಪೀಠಿಕೆ.

Gale o···are, *v. a.* ಶಿರೋರಕ್ಷೆ ಹಾಕಿಸ—ಧರಿಸಮಾಡ— or··ari, *v. d.* ಶೀರ್ಷಕ ಹಾಕಿಕೊಳ್ಳ.

Galer um, i, *n.*— us, i, *m.* ತೊಗಲಿನಿಂದುಂಟಾದ ಕುಲಾವಿ, ಕಳ್ಳ ಕೇಶ— *pileolus* ಸಣ್ಣ ಟೋಪಿ— *flores* ಹೂವಿನ ಮೊಗೆ.

Galli a, æ, *f.* ಫ್ರಾಂಸು ಶೀಮೇ ಪೂರ್ವಪೆಸರು—i, orum, *m. p.* ಸದರಿ ಶೀಮೆಯ ಪೂರ್ವಜನರು, ಫ್ರಾಂಸುಕಾರರು--ican us--icus, a, um, ಫ್ರಾಂಸು..ಶೀಮೆಯ..ಜನರ..ಗಲ್ಲಿಯರ.

Gallin a, æ, *f.* ಕೋಳಿ, ಕುಕ್ಕುಟ, ಪೆಟ್ಟೆ, ಕೊಕ್ಕಟೆ, ಕೃಕವಾಕು—*mater* ಕಾವಿಗೆ ಕುಂಡ್ರುವ ಕೋಳಿ— ಸ್ತ್ರೀಹದ ಮಾತಾಗುವದುಂಟು.

Gallina ce us—ri us, a,um, ಕೋಳಿಯ, ಪೆಣ್ಣೀಕೋಳೀಸಂಬಂಧ—*scala* ಸಣ್ಣಯೇಣಿ.

Gallinace us, i,*m.* ಕೋಳಿಕುಂಜು.

Gallinari um, i, *n.* ಕೋಳಿಗೂಡು —us, i, *m.* ಕೋಳಿವ್ಯಾಪಾರಿ.

Gallinag o, inis, *f.* ಬುಡಗೋಳಿ— (*bécasse*) ಉಳ್ಳಂಗಿ.

Galliopav us, i, *m.* — Gallopavo, nis, *m.* ನಾಂಗೋಳೀಕುಂಜು.

Callipugnari um, i, *n.* ಕೋಳಿಯ ಪಂದ್ಯ, ಸಮಾಹ್ವನು.

Gall us, i, *m.* ಕೋಳೀಕುಂಜು, ಕುಕ್ಕುಟ-*Indicus* ನಾಂಗೋಳೀಕುಂಜು— *sacerdos* ಶೀಬಿಲೆಂಬವಳ ಪೂಜಾರಿ — *populus* ಗಲ್ಲಿಯ.. ಫ್ರಾಂಸುರಾಜ್ಯದ ..ಜನ.

Gane a, æ, *f.* ದುರ್ನಡತೆ, ಸುರಾಪಾನವುಳ್ಳ ಪೂಟ— V. Ganeum—ari us, a, um, ದುರ್ನಡತೆಯ, ಮಧುಪಾನ ಕುಡ್ಯಾಟದ.

Ganeo,nis,*m.* ಪೋಕಿರಿ, ಸೂಳೇರಿಗ, ಪಾನಧಾರ, ದುಂದುಗಾರ, ದುಬಾರಿ, ಪಿದ್ಗ, ಕುಂಟಣಿಗ, ನರ್ಮಠನು.

Gane um, i, n. ಸೂರಾಯುಂಗಡಿ, ಪಾನಗೋಷ್ಠಿ, ಸೂಳೆಕೇರಿ.

Gang ili on,--- li on, i, n. ಬಾವು, ಗಂಟುನರ, V. Tumor.

Gangræn a,æ,f. ದುರ್ಮಾಂಸ, ಗೋಚು.

Gann io, is, ivi, itum, ire, v.a. ಘೂಳಿಡ, ಬಗುಳ—*caniculi* ಗುಣಿ..ಗುಯಿ... ಚೋಚು..ಗುಟ್ಟ.

Gannitio,nis,f.—t us,ûs,m. ಊಳೆ, ಬಗುಳು, ಕೊಕ್ಕನ್ನುವದು, ಕೂ ಗೂ, ಗುಯಿ ಗುಟ್ಟು, V. Lamentatio.

Gargarisma, tis, n. ಬಾಯಿಮುಕ್ಕುಳಿಸುವ...ನೀರು--ಕಷಾಯ— ti um, i, n.--rizatio, nis, f.—rizat us, ûs, m. ಬಾಯಿಮುಕ್ಕುಳೆ, ಗಂಡೂಷ.

Gargariz o··are, v. a. ಪುಕ್ಕಳಿಸ, ಮುಕ್ಕುಳಿಸ, ಗಂಡೂಷಮಾಡ, ಔಷಧ·· ಕಷಾಯದಿಂದ...ಬಾಯನ್ನು ಮುಕ್ಕುಳಿಸ.

Garr io,is ivi..ii, itum, ire--itid o, as, are, v. a. et, n. ಗೊಜಗ (ಹಕ್ಕಿ) ಕೀಚ, ಕೀಚುಗುಟ್ಟ, ಕಿಕೀಯನ್ನ —*pueri* ಚಿಮಿಚಿಮಿಸ—*jocare* ಗೇಲಿ..ಹಾಸ್ಯ... ಮಾಡ--ಆಡ—*narrare* ಹೇಳ, ಸೊಗಸಾಗಿ ಹೇಳ, V. Garrulo.

Garritud o, inis, f.— it us, ûs, m. —arulita s, tis,f. ಬಟಗುಟ್ಟಿಗೆ, ಕಟಪಿಟಿ, ಪದರಾಟ, ಹರಟೆ, ಗುಜುಗುಟ್ಟು, ಸರವಟ್ಟೆ —*avium* ಕೀಚಕನ, ಕಿಚಿಕಿಚನ, ಚುಕೆ, ವಾಕಿತ, ಬಗ್ಗುಜೆಜ್ಜೆ, ಕಿಳಿಪಿಳಿ— *ante solis ortum* ಗಿಜಗಿಜ— *gallinæ* ಕೊರಕೋಯನೆ, V. Loquacitas.

Garrul o···are v. n. ಹರಟ, ಪೊಟಗುಟ್ಟ, ಬದರ, ಗೊಜಗ, ಗುಜುಗುಟ್ಟ— *inconsideratè* ಸರವಟ್ಟೆಹೇಳ, ಹರಟೆ ಬಡಿಯ.

Garrul us, a, um, ಹರಟೆಯಾದ, ಕಟಪಿಟಿಗಾರ, ಮುಖರ, ರಗಡಿಗಾರ, ಬಾಯಿಬಡಕ, ಹರಟೇ ಮಲ್ಲ, f. ಮಲ್ಲಿ— *mulier* ಹಾರುಗಾಲಿ — *secreta servare non valens* ಬಡಕಬಾಯಿಗಾರ, f. ಗಾತಿ, — *avis* ಕೀಚಿಕೀಚುವ — garrula bella ನ್ಯಾಯಸ್ಥಾನದಕರ್ಕಶಗಳು.

Gast er, ri, m. ಉದರ — *vas,* ಉಬ್ಬಾದ ಹೊಟ್ಟೆಯುಳ್ಳ ಪಾತ್ರೆ, ಪಾತ್ರೇ ಅಂಡು.

Gastro mani a--nomi a, æ, f. ಹೊಟ್ಟೇಬಾಕತನ, ಭೋಜನ ಪ್ರಿಯ — nom us —man us —strimarg us, i,m. ಭೋಜನಪ್ರಿಯ.

Gastric us, a, um, ಅನ್ನಕೋಶದ.

Gaud eo, es, (gavisus sum,) ere, v.n.abl. ಸಂತೋಷಿಸ, ತುಷ್ಟಿಸ, ಮೆಚ್ಚಿಬೀಳ, ಸುಮಳಿಸ, ಹರ್ಷಿಸ, ರಂಜಿಸ, ಅಮೋದಿಸ, ಉಲ್ಲಾಸಿಸ, ನಂದಿಸ—*possidere* ಪುಳ್ಕಾಗಿರ, ಸಂಪಂನನಾಗಿರ-*gaudium* ಒಬ್ಬನಿಗೆ ಅನುಮೋದಿಸ.

Gauden s, tis, o. g. ತುಷ್ಟ, ಸಂತುಷ್ಟ, ಸಂತೋಷಿಸಿ, ಹೃಷಿತ, ಹರುಷಿತ, ಮುದ್ದಾನಿತ, ರಂಜಿತ.

Gaudi um, i, n. ಸಂತೋಷ, ಸೊಂಪು, ತುಷ್ಟಿ, ಆಹ್ಲಾದ, ಉಲ್ಲಾಸ, ಖುಶಿ, ಖುಶಾಲು, ಸೋಗಸು, ಹರುಷ, ನಂದನ, ಹರ್ಷಮಾಣ, ಅನುಮೋದ, ಅಗಮ—*magnum* ಮಹೋತ್ಸಾಹ, ಮನೋರಮ್ಯ—*replere gaudio* ಹಿಗ್ಗಿಸ--*efferri gaudio* ಹಿಗ್ಗ, ಹೆಚ್ಚಳಪಡ, ಸಂತೋಷಪರವಶವಾಗ— *gaudia annorum* ವಸಂತಕಾಲ.

Gaz a, æ,f.—gazophylaci um, i, n. ಭಂಡಾರ, ಕಜಾನೆ, ಕೋಶ, ಹಸ್ತಾಂತ್ರ, ಕೋಪಿಖಾನೆ — gazophila x, cis, m. ಭಂಡಾರಿ, ಖಜಾನೆದಾರ V. Thesaurarius

Gehenn a, æ, f. ವೇಧನೆ—*infernus* ನರಕಪಾತಾಳ-al is,*m.f.*e.*n.* ನರಕದ.

Gelabil is, *m. f.* e, *n.* ಚಳಿಯಿಂದ ಹೆಪ್ಪುವದಕ್ಕೆ ಹೇತುವೆಯಾದ.

Gelasc o, is, ere,*v.n.*V.Congelasco.

Gelatio, nis,*f.* ಹೆಪ್ಪುಗಟ್ಟಿಸುವಮಹಾ ಚಳಿ—ಹಿಮ—ಹೆಪ್ಪಿಡುವಿಕೆ.

Gelat us, a, um, *part.* ಚಳಿಯಿಂದ ಹೆಪ್ಪುಕಟ್ಟಿದ.

Gelidè, *adv.* ಮಹಾಚಳಿಯಾಗಿ.

Gelid us, a, um, ಹಿಮಕ್ರಂಡವಾದ, ಮಂಜುಗಡ್ಡೆಯಾದ, ಛಿಮದ, ಚಳಿಯಿಂದ ಹೆಪ್ಪುಕಟ್ಟಿದ, ಹೆಪ್ಪಿಸುವ—*frigidus* ತಂಣಾದ, ತಂಪಾದ—*horror* ದಿಗಲು—*aqua* ತಂಣೀರು.

Gel o···are, *v.a.* ಹೆಪ್ಪಿಸ, ಹಿಮತಂಡಮಾಡ—*v. n.* ಕಠಿಣ ಚಳಿಯುಂಟಾಗಿರ.

Gelsimin um, i, *n.* ಸುರಗೀಹೂವು —*species quædam* ಸುರಯಿ —*flavum* ಹೇಮಪುಷ್ಪ—*arabicum* ಇರುವಂತಿಗೆ—*repens* ಕಸ್ತೂರಿಜಾಜಿ—*multi florum* ಮೊಲ್ಲೆ, V. Jasminus.

Gel u, *ind.*—um, i, *n.*—us, i, *m.* ಹಿಮ, ಹಿಮಿಕೆ—*album* ತುಷಾರ—*ad gelu attinens* ಹೈಮ,V. Glacies, Nix.

Gemebund us, a, um, ನಿಟ್ಟುಸುರು ಬಿಟ್ಟು—ಬಿಡುವ.

Gemell us,—itic us, a, um, ಅವಳಿ ಮಕ್ಕಳು, ಅವಳಿಜವಳಿ—*vitis* ಜಮಚಿಗೊನೆಗಳನ್ನು ತರುವ(ದ್ರಾ)ಕ್ಷೀಗಿಡ.

Geminatim,*adv.* ಎರಡು ಎರಡಾಗಿ, ದ್ವಂದ್ವಾಗಿ, ಜೋಡುಜೋಡಾಗಿ.

Geminatio, nis, *f.* ಎರಡಷ್ಟುಮಾಡುವಿಕೆ—*in locutione* ಪುನರುಕ್ತಿ, ತಿರಿಗಿಹೇಳುವಿಕೆ.

Gemin i, orum, *n. pl.* ಅವಳಿಜವಳಿ *signum zodiaci* ಮಿಥುನರಾಶಿ—*testicul* ಅಂಡ.

Gemin o ··are, *v. a.* ಎರಡುಸಾರಿ.. ಯೆರಡಷ್ಟು..ಇಂನೊಂಮೆ..ತಿರಿಗಿ..ಮಾಡ-ಹಾಕ, ಜೋಡುಜೋಡಾಗಿಹಾಕ—ಹೊಂದಿಸ, ಮಡಿಸ.

Gemin us, a, um, ಇಬ್ಬಗೆಯಾದ, ದ್ವಿಮುಖವಾಗಿ V.gemell us—Duplex,*duo simul* ಇಕ್ಕಡೆರು, ಉಭಯ.

Gemit us, ûs, *m. dolore* ಸುಳಿವು, ನಿಟ್ಟುಸುರು, ಪ್ರಲಾಪ,ರೋದನ—*murmur* ಮಂದವಾದಶಬ್ದ.

Gemm a, æ, *f.* ರತ್ನ, ಮುತ್ತು—*adulterina* ಅಡಿಗೇರತ್ನ—ವಜ್ರ—*imperfecta* ಜಲರಾಗ—*eximia* ಆಣೆ ಮುತ್ತು ಜ್ಯೋತಿ...ರತ್ನ—ತಾರ, ಉಪರತ್ನ—*in cauda pavonis* ಕಂಣು, ಪೀಲಿಗಂಣು—*piscaria* ಸಲಾಪ—*officina regia* ಜವಾಹಿರಖಾನೆ—*plantarum* ಎಳೇತಳಿರು, ಅಗಿ ಮೊಗ್ಗೆ, ಇಗರು, ಕೋಶ, ನುಚ್ಚು—*granorum* ಮೊಂಗು V. Germen.

Gemma ri us, i,–tor, is, *m.* ವೈಕಟಿಕ, ರತ್ನವ್ಯಾಪಾರಿ, ಮಣಿ···ರತ್ನಗಳ ಕೆತ್ತುವವ, ರತ್ನಪಾನಿಕ—ri us, a, um, ರತ್ನಕಾರನ.

Gemmat us, a, um, ರತ್ನಾದಿಗಳಿಂದ ಅಲಂಕರಿಸಲ್ಪಟ್ಟ, ರತ್ನಾಭರಣಧರಿಸುವ, ಮುತ್ತುರತ್ನಗಳು ಹೊಂದಿಯಿರುವ—*planta* ಮೊಗ್ಗೆತಳಿರು ಅಪಾರವಾಗಿರುವ.

Gemmesc o, is,ere,*v.n.* ರತ್ನವಾಗ, ಮಾಣಿಕ್ಯರೂಪವಾಗ.

Gemme us, a, um, ರತ್ನದ, ಮುತ್ತಿನದು, ರತ್ನದಹಾಗೆ—ಕಾಂತಿಯುಳ್ಳ V. Gemmatus.

Gemm o···are, *v. n.* ಕೊನರ, ಚಿಗರಿಡ, ಚಿಗರ.

Gemmos us, a, um, ಶಾನಿಮುತ್ತು ರತ್ನಾದಿಗಳುಳ್ಳ.

Gemmul a, æ, f. ಸಂಣಮುತ್ತು, ರತ್ನ

Gem o, is, ui, itum, ere—isc o, is, ere, v. n. et. a. V. Ingemisco, (ಹಕ್ಕಿ) ಗುಗೂ ಅನ್ನ, ದುಃಖಿಸೀಚುಕೀಜ—resonare ಧ್ವನಿಸ.

Gemul us, a, um, ಪ್ರಲಾಪವುಳ್ಳ, ದುಃಖಿಸುವ.

Gen a, æ, f. ಕಂನ, ಕೆಂನೆ, ಕಪೋಲ, ಚಂಪೆ, ಗಂಡಸ್ಥಳ, ವದನ—pars inferior ಗಲ್ಲ, ಸೋಟೆ—pueri lac sugentis ಹಾಲುಗಲ್ಲ— laxa et pendula ಆಡದಾಡೆ—dilatata ಪ್ರಾಕು... ಗೂಬಿ... ಗಲ್ಲ—cavata ಗುಳಿಗಲ್ಲ—ದವಡೆ—depressa ಕೆಳಗಲ್ಲ—interior ಹಾಕುಡ—gen as conferre ಚುಂಬಿಸಿಕೊಳ—palpebræ ಮುಚೆಗಳು.

Genealogi a, æ, f. ವಂಶಾವಳಿ, ಗೋತ್ರದ..ಉತ್ಪತ್ತೀ...ಕ್ರಮ, ವಂಶ ಅಡ್ವಣೆ, ಕಲಾಂತರ—c us, a, um, ವಂಶಾವಳಿಯಾದ, ಪಿತೃರವರೀ ಸಂಬಂಧವಾದ—recitatio genealogiæ sponsorum in matrimonio ಕನ್ಯಾವರಣ—liber eas continens ಕಬಿತೆ.

Genealog us, i, m. ವಂಶಾವಳಿ...ಪಿತೃಗಳವರ..ಬರೆಯುವ—ವಿವರಿಸುವವ

Gener, i, m, (inter latinos) ಮಗಳ ಪುರುಷ, ಅಳಿಯ, ಸಹೋದರೀಕತೇ.—(inter Indos) post matrimonium ಮಗಳ ಗಂಡ, ಅಳಿಯ, ವರ, ಜಾಮಾತೃ—adoptatus in filium ಮನೇ ಅಳಿಯ—antè matrimonium, filios sororis suæ et filios fratris et sororis uxoris suæ, vir vocat ಸೋದರಳಿಯ— mulier sic vocat filios fratris sui et illos sororum mariti sui.

Generabil is, m. f. e. n. ಹೆರ...ಜನ್ಮಿಸ...ಆಗುವ—ಕೂಡುವ.

General is, m. f. e, n. ಒಟ್ಟು, ಸಾಧಾರಣ, ಸಾಮಾನ್ಯ, ವಾಡಿಕೆಯಾದ, ರುದುವಾದ, ಸಾರ್ವತ್ರಿಕ, ವಿಶಿಷ್ಟ— pro ut species includens ಶೇಷಿ.

Generalita s, tis, f. ವಿಶಿಷ್ಟ— prout includens varias species ಶೇಷಿಭಾವ V. Universitas.

Generaliter, adv. ಸಾಧಾರಣವಾಗಿ, ವಿಶಿಷ್ಟವಾಗಿ, ರುದುವಾಗಿ, ಒಟ್ಟಾಗಿ—grosso modo ಮೊತ್ತವಾಗಿ—consuetè ವಾಡಿಕೆ..ಪದ್ಧತಿ...ಆಗಿ.

Generatim, adv. ಜಾತಿ.. ಬಗೆ...ದಿನಸು...ತರತರ...ವಾಗಿ—natio ಜನಾಂಗಗಳಾಗಿ.

Generatio, nis, f. ಪೀಡಿ, ಹುಟ್ಟು, ಹುಟ್ಟುವಿಕೆ, ಉತ್ಪತ್ತಿ, ಸಂತತಿ, ಉದ್ಭವ, ಜನ್ಮ—de generatione in generationem ಪೀಡಿಪೀಡಿಯಾಗಿ, ಕಲಾಂತರವಾಗಿ—liber generationis ವಂಶಾವಳೀ ಅಡ್ವಣೆ.

Generator, is, m.—tri x, cis, f. V. Genitor.

Generat us, ûs, m. ಹೆರುವಿಕೆ, ಹುಟ್ಟಿಸುವಿಕೆ.

Gener o...are, ಹುಟ್ಟಿಸ, ಪಡೆಯು, ಹುಂಟುಮಾಡ, ಜನ್ಮಕೊಡ—concipere ಗರ್ಭಧರಿಸ V. gigno.

Generosè, adv. ಧೈರ್ಯವಾಗಿ—liberaliter ಧಾರಾಳವಾಗಿ, ಉದಾರವಾಗಿ V. Nobiliter.

Generosita s, tis, f. ಉದಾರ, ಗುಣಶ್ಯಾಗ, ಬಹುಧರ್ಮ, ದಾತೃತ್ವ, ಧಾರಾಳ—ortûs ಮೇಲಾದ ಗೋತ್ರ, ಉತ್ತಮ...ಜಾತಿ...ಕುಲ—nobilitas ಮಹತ್ವ, ಪ್ರಭುತ್ವ—fecunditas ಸಾಫಲ್ಯತ್ವ—vis

ಬಲ, ವೀರತ್ವ, ಶೌರ್ಯ.

Generos us, a,um, *liberalis* ದಾತಾರ, ಉದಾರಿ, ಧಾರಾಳಮನುಷ್ಯ ಧರ್ಮಿ, ಧರ್ಮಶಾಲಿ, ಧರ್ಮಾತ್ಮ —*ortu* V. Nobilis--*fortis* ವೀರ…ಶೂರ..ವುಳ್ಳ, ಬಲವುಳ್ಳ *equus* ಜಾತೀ ಕುದುರೆ.

Genes is, is, *f.* ಸತ್ಯವೇದದಲ್ಲಿ ಮೊದಲನೇ ಆಗಮ, ಲೋಕೋತ್ಪತ್ತಿಯು ಚರಿತ್ರೆ — *nativitas* ಜನ್ಮ, ಹುಟ್ಟು V. Horoscopium.

Genethli ac e, es, *f.* ಜಾತಕಪರಿಷೋ ಶಾಸ್ತ್ರ — ac us, i, *m.* ಜಾತಕಕರ್ಮಕಾರನು—ologi a,æ,*f.*V. Horoscopium

Genial is, *m. f.* e, *n.* V. Festivus. *musa* ಶೃಂಗಾರಕವ್ಯ—*torus* ಶೋಭನ ಪ್ರಸ್ಥದಹಾಸಿಕೆ—*dies* ಉತ್ಸವದಿವಸ--*abundans* ಪೇರಾಳ—geniales dii ಜನನಕ್ಕೆ ಪಾಲಿಕರಾದ ದೇವತೆಗಳು.

Genialita s,tis,*f.*V. gaudium—iter, *adv.* V. Lætanter.

Geniculatim, *adv.* ಅಂಥಂಥ ಕಣಬಿನಲ್ಲಿ, ಒಂದೊಂದುಗಂಟಿನಸುತ್ತಲು, ಗಂಟುಗಂಟಾಗಿ.

Geniculatio, nis, *f.*—at us, ûs, *m.* ಮೊಣಕಾಲಿನಮೇಲೆ…ಊರುವಿಕೆ--ಬೀಳುವಿಕೆ, ಮಂಡಿಹಾಕುವಿಕೆ.

Geniculat us, a, um, V. Nodosus *arbor.*

Genicul o…are, *v.n.* ಗಂಟು…ಗೆಣಪು..ಕಟ್ಟು--ಬೀಳು.

Genita bil is,—l is, *m. f.* e, *n.* ಉದ್ಭವದ, ಉತ್ಪತ್ತಿಗೆ ಸೇರಿದ, ಉದ್ಭವಿಸಮಾಡುವ ಶಕ್ತಿವುಳ್ಳ—*corpora* ಭೂತಗಳು — *nativitatis* ಹುಟ್ಟುವಿಕೆಯು, ಜನನದ—*terra* ಜನ್ಮದೇಶ—genitalia, um, *pl.n.* *utriusque sexûs* ಉಪಸ್ಥ, ಲಿಂಗ, ಮಾಣ--V. Verenda. *vaccæ* ಹೋರಿಗಳು.

Genitaliter, *adv.* ಜನನದ ಮಾರ್ಗವಾಗಿ.

Genitiv us, a,um, ಜನನದ, ಜನ್ಮದ, ಹುಟ್ಟಿದ —*naturalis* ಸ್ವಭಾವವಾದ, ಪ್ರಕೃತಿಯಾದ — *generans* ಹುಟ್ಟಿಸುವ—*agnomen* ಮನೇ ಅಡ್ಡೆಸರು--*casus* ಷಷ್ಠಿವಿಭಕ್ತಿ

Genitor, is,*m.* ಜನಕ, ಜನಯಿತ, ಮೂಲಕ—tri x, cis, *f.* ಜನಯಿತ್ರಿ, ಜನನಿ, ಪೆತ್ತವಳು V. Parens.

Genitur a, æ, *f*—t us, ûs, *m.* ಜನ್ಮಿಸುವಿಕೆ, ಉತ್ಪತ್ತಿ, ಉದ್ಭವ--*semen* ಬೀಜ

Genit us, a, um, *part.* ಜತ, ಜಾತ, ಹುಟ್ಟಿದ.

Geni um, i, *n.*—us, i, *m.* ಗುಣ, ಸ್ವಭಾವ, ಭಾವ, ಆಸೆ, ಇಚ್ಛೆ—*gula* ಭೋಜನಪ್ರಿಯ—*genio indulgere* ಸುಖಿಸಿಕೊಂಡಿರ—*sors* ದೈವ, ವಿಧಿ—*peritia* ಚಾತುರ್ಯ, ಚಟುವಟಿಕೆ—*inter gentiles* ಸಮಸ್ತ ಸೃಷ್ಟಿಗಳ ಮೇಲ್ವಿಚಾರಣೆಕರ್ತರಾದ ಭೂತಗಳು, ಸುರರು—*mali* ದೈತ್ಯರು, ಅಸುರರು, ದುರ್ಗಿಗಳು—*boni* ದೇವತೆಗಳು.

Gen s, tis, *f.* ಜನ, ಜಾತಿ, ಜನಾಂಗ, ಪಣ, ಬಣಿಕಟ್ಟು — *familia* ಗೋತ್ರ, ವಂಶ — furva ಅಪ್ರೀಕಕಾರರು — odorifera ಅರಬ್ಬಿಕಾರರು---togata ರೋಮಾನರು—ubi gentium ಯಾವ ದಿಕ್ಕಿನಲ್ಲಿ — minimè gentium ಯೆಲ್ಲಾದರೂ ಇಲ್ಲ —*humida* ಮತ್ಸ್ಯಾದಿಗಳು—gentes ಅಜ್ಞಾನಿಗಳು, ಲೋಕಿಗಳು, ಲೌಕೀಕರು, ಲೋಕದವರು·

Gentian a, æ, *f. planta,* ನೆಲಬೇವು.

Gentic us, a,um, ಒಂದುಜನ ಜಾತೀ..ಲಕ್ಷಣ--ಧರ್ಮ--ಸ್ವಂತ.

Gentil is, *m. f.* e, *n.* ಏಕ ಕುಟುಂಬದ--ಮನೇಜನ, ಒಂದುಗೋತ್ರಕ್ಕೆ ಸೇ

ರಿದ—ವಿಶೇಷ—*regionis* ಪರ ಶೀಮೆಯವ —*quoad religionem* ದೇವರುಗಳಾರಾಧಿ ಕನು, ಲೋಕದವನು, ಅಜ್ಞಾನಿ.

Gentilita s, tis, *f.* ಬಂಧುತ್ವ, ವಂಶ, ಕುಲ, ಬಂಧುಜನ—*nominis* ನಾಮದಸಮ *quoad religionem* ಅಬದ್ಧಮತಾಚಾರ, ದೇವರುಗಳಾರಾಧನೆ, ಅಜ್ಞಾನಮತಾಚಾರ.

Gentiliter, *adv.—secundum gentis usus* ದೇಶದ... ಭಾಷೆಯಲ್ಲಿ—ಮರ್ಯಾದೆ ಆಚಾರ ಪ್ರಕಾರವಾಗಿ—*ethnicè* ದೇವತೆಗಳ ಮತಾಚಾರದ ಪ್ರಕಾರ.

Gentiliti um, i, *n.* ತಂನ ಪಿತೃಗಳಿಂದ ಬಂದ ಸ್ವಾಸ್ಥಿ.

Gentiliti us, a, um, ಒಂದು ಗೋತ್ರಕ್ಕೆ..ಮನೇಜನರಿಗೆ...ವಿಶೇಷ--ಸ್ವಂತವಾದ—*nomina* ಮನೇಹೆಸರುಗಳು.

Gentilitùs, *adv.* ಶೀಮೇರಿವಾಜು ಪ್ರಕಾರವಾಗಿ.

Genu, *ind.* — a, um, *pl. n.* ಮೊಣಕಾಲು, ಮಂಡಿ, ಜಾನು—*extremitas* ಮೊಣಗಾಲುಕಂಣು—submittere ಮಂಡಿಹಾಕ—*caulis nodus* ತಾಳಿನಲ್ಲಿ ಗೆಣ್ಣು.

Genufluxio, nis, *f.* V. Geniculatio.

Genuflect o..are, *v. n.* ಮಂಡಿಹಾಕ, ಮೊಣಕಾಲೂರ, ಮೊಣಕಾಲಿನ ಮೇಲೆ ನಿಲ್ಲ, ದಂಡೆಗೊಳ್ಳ, ವೀರಮಂಡಿ ಹಾಕ.

Genui, *præt.* gigno.

Genuinè, *adv.* ನಿಷ್ಕಪಟವಾಗಿ, ಉಂಟಾದ್ದು, ಕಿಳುವಾಗಿ.

Genuin us, i, *m.* ದವಡೇಹಲ್ಲು.

Genuin us, a, um, ಸಾಮಾನ್ಯಗುಣ —ಜಾತಿ—*status* ನಿಸರ್ಗ, ಕಲಬೆರಕೆ... ಕಳವಿ...ಇಲ್ಲದ, ತಾಜಾವಾದ—*nummus* ಸಲ್ಲುವ, ಚಲಾವಣೆ.

Gen us, eris, *n. stirps* ಜಾತಿ, ಕುಲ, ಜನ, ವಂಶ, ಅಭಿಜನ, ಸಂತಾನ, ಅನ್ವಯ —*ducere* ಇಂದ ಹುಟ್ಟ—*natio* ಜನಾಂಗ, ಪ್ರಜೆ, ದೇಶದವರು— *ejusdem generis populi* ಪಣದವರು, ಪಣಕಟ್ಟು, ಪಣ, ಗಣ ಬಣ್ಣ, ಕುಲ--*species* ವರ್ಗ, ತರ, ಬಗೆ, ರಾಶಿ, ಪದಾರ್ಥ, ದಿನಸು, ಅಂತಸ್ತು--*optimum* ಅಸಲು--*purum* ಅಚ್ಚವಳಿ ---*promiscuum* ಅಡ್ಡಾತಿ, ಅಡ್ಡವಳಿ—*humanum* ನರಜಾತಿ, ಜಗಜ್ಜನ, ನರಮಕ್ಕಳು, ಜನತೆ, —*masculinum* ಪುಲ್ಲಿಂಗ — *femininum* ಸ್ತ್ರೀಲಿಂಗ--*neutrum* ನಪುಂಸಕ..ಕ್ಲೀಬ..ಲಿಂಗ—*commune* ಅನಿಯತ ಲಿಂಗ—et cætera id genus ಈ ಬಗೆಯಾದ ಕಡೆಮೆಯವುಗಳು, ಇತ್ಯಾದಿಗಳು.

Geographi a, æ, *f.* ಭೂಗೋಳದ ಶಾಸ್ತ್ರ, ಭೂಗೋಳದವಿವರ.

Geographic us, a, um, ಇಂಥ ಶಾಸ್ತ್ರದ ಸಂಬಂಧ — *mappa* ಭೂಗೋಳದಪಠ—ನಕ್ಷೆ--ph us, i, *m.* ಭೂಗೋಳಶಾಸ್ತ್ರಿ.

Geolog i a, æ, *f.* ಭೂಪ್ರಕೃತಿ... ಮಯ..ಪಂಚಭೂತಗಳನ್ನು..ವಿವರಿಸುವ ವಿದ್ಯೆ-us, i, *m.* ಇಂಥವಿದ್ಯಾಸಂಪನ್ನನು.

Geomanti a, æ *f.* ನೆಲದಮೇಲೆಗೆರೆಗಳ ರುಜ್ಜುಗಳಿಂದಹಕುನ ಹೇಳುವವಿದ್ಯೆ.

Geometr a,—es, æ, *m.* ಪರಿಮಾಣದ ಶಾಸ್ತ್ರಿ, ವಿಶಾಲಕ್ಷೇತ್ರಗಳ ಶೇಶಾಸ್ತ್ರಿ.

Geometri a, æ,—c e, es, *f.* ಪರಿಮಾಣದವಿದ್ಯೆ, ಗಣಿತಶಾಸ್ತ್ರ—c us, a, um ಪರಿಮಾಣಶಾಸ್ತ್ರದಸಂಬಂಧ-ca, orum, *pl. m.* ಇಂಥ ವಿದ್ಯಾದಿಗಳು.

Georgic us, a, um, ವ್ಯವಸಾಯದ, ವ್ಯೈರಿಡುವಿಕೆಯ--a, orum, *pl. n.* ಇಂಥ ಕೆಲಸದಮೇಲೆಕವ್ಯ.

Gerani on, i, *n.* ಒಂದು ಬಗೆಸಸಿ—

machina ಭಾರವಂನೆತ್ತುವಯಂತ್ರ.

Gerari a, æ, *f.* ಆಯು, ಚಿಟ್ಟಾಳಿಗಾರ್ತಿ.

Geren s, tis, *o. g.* ಧಾರಿ, ದಾರಕ, —*benè sui negotii* ತನ ಕಾರ್ಯಗಳನ್ನು ವಿವೇಕವಾಗಿ ನಡಿಸುವವ.

German è--itùs, *adv.* V. Fraternè.

Germanita s, tis, *f.* ಸಹೋದರ... ತನ--ಲಕ್ಷಣ--ಧರ್ಮ--ಸ್ನೇಹ--ಬಂಧುತ್ವ —*similitudo* ಹೋಲಿಕೆ.

German us, a, um, ಸಹೋದರ... ರಿ... ಕೂಡ ಹುಟ್ಟಿದ—*ex patre* ಒಬ್ಬ ತಂದೆಯಮಗ--ಳು—*ex matre* ಸಗರ್ಭ ಮಗ--ಳು—*verus* ನಿಜವಾದ, V. genuinus --*proprius* ಖಾಸ, ಸ್ವಮ, ಸ್ವಂತ, V. Parilis.

Germ en, inis, *n.* ಮೊಳಕೆ, ಮೊಗ್ಗೆ, ಕುಡಿ, ತಳಿರು, ಅಂಕುರ, ಅಗೆ, ವಿದ್ರುಮ, ಜದರು—*tenerum* ಸಜ್ಜಕ, ಸುಳಿ, ಮುಗುಳ, ಇಗರು, ಪಲ್ಲವ--*tenerrimum* ಮೊಳೇ ಜದರು—*semiexpansum* ಅಮುರ್ಗಳು-ಹುಟ್ಟು, ಅಮೋಗ್ಗೆ—*primum* ಕಣುಲು—*denuò ex eadem radice aut caule jam sectis* ಕೂಳೆ—*pueri* ಸಂತಾನ—*origo* ಮೂಲ.

Germinal is, *m.f.e,n.* ಮೊಳೆಯುವ, ಚಿಗರುವ.

Germinatio, nis. *f.* — t us, ûs, *m.* ಜದರಿಕೆ, ಚಿಗರುವಿಕೆ, ಮೊಳೆಯುವಿಕೆ—*iterata ejusdem calami* ಅಗ್ಗಲಾರು, ಕೂಳೆ-*cæremonia novem species granorum ponendi in quinque vasis germinandorum* ಅಂಕುರಾರ್ಪಣ.

Germinat us, a, um, *part.* ಜದಿದ, ಚಿಗತ, ಚಿಗತಿದ, ಹೂತ, ತಳಿತ.

Germin o..are, *v. n.* ಜದರ, ತಳಿರ, ಚಿಗರ, ಮೊಳೆಯು, ಮಿಳಿರ, ಅಂಕುರಿಸ, ಕುಡಿಗೊಳ್ಳ, ಕೊನರ, ಮುಗುಳ, ಪೆರ, ನಿಮಿರ, ನಿಮಿಡ, ಪಲ್ಲವಿಸ — *denuò ut* (ಜೋಳ) ಅಗ್ಗಲಾರಿಡ, ಕೂಳಾಗ.

Ge ro, ris, ssi,stum,rere.*v.a.vehere* ಹೊರ, ಧರಿಸ, ಹೊತ್ತುಕೊಳ್ಳ, ಹೇರಿಕೊಳ್ಳ, ವಹಿಸ— *ostendere* ತೋರಿಸ, ಕಾಣಿಸ — personam alicujus ಒಬ್ಬನ ಭಾವನೆಯಾಗಿರ— personam civitatis ರಾಜನ ಸ್ಥಾನಾಪತಿಯಾಗ —se pro cive ತಾನುಸ್ಥಳದವ...ಒಕ್ಕಲನೆಂತ.. ನಿಶ್ಚಯಿಸ—præ se utilitatem ಉಪಯೋಗವೆಂತ ತೋಚ — se honestè ಮರ್ಯಾದೆಯಾಗಿ...ಯೋಗ್ಯಸ್ಥನಹಾಗೆ..ನಡೆಯ—*producere,* ತರ ಹೇಳಿಸ—*negotium* ವ್ಯಾಪಾರ ನಡಿಸ, ವಿಚಾರಿಸ, ವಹಿಸಿಕೊಳ್ಳ, ಕಾರ್ಯವಾಗಿಸ—ನೀಗಿಸ, ನಿರ್ವಹಿಸ, ಸಮಾಳಿಸ, ಸುದಾರಿಸ—*feliciter* ಕೈಗೂಡ—*arduum quàm meliùs* ಸರಿಪಿಕೊಂಡು ಹೋಗ —morem alicui ಒಬ್ಬನಿಗೆ ಕೀಳ್ಪಡ, ದಾಕ್ಷಿಣ್ಯವಾಗಿನಡಿಯು—morem animo ತನಯಿಚ್ಛೆ ಪ್ರಕಾರ ನಡಿಯು--ಮಾಡ.

Gerundi a, orum, *n. pl.* ಕ್ರಿಯಾನ್ಯೂನಗಳು.

Gesta,orum,*d.n.* ಪರಾಕ್ರಮಗಳು, ವೀರಶೂರಕರ್ಮಾದಿಗಳು, ಶ್ರೇಯಸ್ಸುಗಳು

Gestabil is, *m. f.* e, *n.* ಹೋರಲ್ಪಡಲಾಗುವ.

Gestam en, inis, *n.* ಹೊರಲ್ಪಡುವಂಥಾದ್ದು— *vehiculum* ವಹನ, V. Ornamentum.

Gestatio, nis, *f.* ವಾಹನದಲ್ಲಿ...ತಿರುಗಾಟ—ಸ್ವಾರಿ — *locus* ಇಂಥಾಸ್ವಾರಿಮಾಡುತ್ತಿದ್ದ ಶಾಲೆ, ಮಂಟಪ V, gestatus.

Gestator, is,*m.* ವಾಹಕ, ಹೊರುವವ, --*sellæ gestatoriæ* ಬೋಯಿ, ಪಲ್ಲಕ್ಕಿಗಾರ.

Gestatori um, i, *n.* V. Lectica.

Gestatori us,a,um, V. Portatorius.

Gestat us, ûs, m. ಹೊರುವಿಕೆ, ಧಾರಣೆ, ಸಂವಾಹನ.

Gesticul a, æ, f. ಒಂದು ಬಗೆನಟನೆ.

Gesticulatio, nis, f.—lus, i, m. ಆಟ, ಅಂಗವಿಕ್ಷೇಪ, ಅಂಗಹಾರ.—*oratoris* ಅಭಿನಯ, V. gestus.

Gesticulator, is, m.—lari us, i, m. —lari a, æ, f. V. Mimus.

Gesticul or··ari, v. d. ಕೈ..ಅಂಗ—ಭಾವನೆ ತೋರಿಸ—ಆಡ—ಆಡಿಸ, ಚೇಷ್ಟೆ ಮಾಡ — *sensus animi indicare* ಅಭಿನಯಿಸ.

Gestio, nis, f. *negotii*, ಸುದಾರಿಕೆ, ವಿಚಾರಣೆ, ನಡಿಸುವಿಕೆ.

Gest io, is, ivi, itum, ire, v. n. ಸಂತೋಷದಿಂದ ಕುಪ್ಪಳಿಸ, ಆನಂದಿಸ—*desiderio* ತವಕಿಸ, ಅತ್ಯಾಸೆಪಡ— *properare* ಆತುರಪಡ, ಆಶೆಪಿತೀವರಿಸ.

Gest o, are, v.a. V. gero, *sub brachio* ಅವಚ—*in utero* ಪಡೆಯು— in sinu ಅತಿಪ್ರೀತಿಮಾಡಿಕೊಳ್ಳ-*delatione* ಅರುಹಿಸ, ಚಾಡಿತುದ್ರ ಹೇಳ.

Gestor, is, m. V. gestator—*linguis* ಚಾಡಿಗಾರರು, ಅರುಹಿಸುವ — *administrator* ವಿಚಾರಣೆಕರ್ತ.

Gestuosè, *adv.* ಅಭಿನಯವಾಗಿ, ಹೆಚ್ಚಾದ ಚೇಷ್ಟೆಯೊಂದಿಗೆ.

Gestuos us,a,um ಬಹುಚೇಷ್ಟೆಯುಳ್ಳ, ಮಹಾ...ದೊಡ್ಡ...ಅಭಿನಯಮಾಡುವ.

Gest us, ûs, m. ಚೇಷ್ಟೆ, ಇಂಗಿತ, ಸೂಚನೆ—*affectatus* ಮುರುಕು—*mentem exprimens* ಚೇಷ್ಟಾಭಾವ, ಅಭಿನಯ—*indicativus et secretus* ಸಂಕೇತ, ಸಾಂಜ್ಞೆ-*lascivus* ಲಲಿತ, ಲೀಲೆ, ಸರಸಕೇಳಿ—ಹಾವ

Gest us, a, um, *part.* gero, ಮಾಡಿದ್ದು, ಆದ್ದು—gesti honores ಸಲ್ಲಿಸಿದ...ವಹಿಸಿದ..ಮಹಿಮೆಯಾದ ಉದ್ಯೋಗಗಳು—gestus est illi mos ಅವನ ತೋರಿಕೆ ಪ್ರಕಾರ ನಂಬಿಸಿದರು—ಕುದುರಿಸಿದರು—*res gestæ* ಪರಾಕ್ರಮಕರ್ಮಗಳು

GI

Gibb a, æ, f.—er, is—us, i, m. ಕೂನು, ಕೂನ, ಗೂನು — *bovis* ಹಿಣಿಲು, ಹಿಳಿಲು, ಹಂಸಕೂಟ, ಕಕುತ್ತು, ಗುಟ್ಟು — *cameli* ಡುಬ್ಬ.

Gibber—os us—gibb us—os us, a, um, ಗೂನಿ..ಉಳ್ಳ—ಆದ, ಕೂನನು, ಕುಬ್ಜ, ಕುಬ್ಜದವ—*bos* ಕುಕುದ್ಮಂತನು—*convexus* ಲದಾವಾದ, ವಲಯಾಕಾರ-*protuberans* ಉಬ್ಬಾಗ.

Gigante us, a, um, ರಾಕ್ಷಸನ—*ingens* ಬ್ರಹ್ಮಾಂಡವಾದ.

Giga s, ntis, m. ರಾಕ್ಷಸ, ಅಸುರ, ದನುಜ, ದೈತೇಯ, ಸುರ, ಆಹೊಂಬ, ದಿತಿಪುತ್ರ, ದಾನವ, ದೇವಾರಿ—*rex gigantum* ದನುಜೇಶ್ವರ—*femina* ರಾಕ್ಷಸಿ, ಅಸುರೆ, ಅಸುರಾಂಗನೆ — *vorator crudæ carnis* ಕ್ರವ್ಯಾದ, ಮಾಂಸಾದ-*tenebrarum* ಮಬ್ಬುಗರು—*malum ex illis oriens* ದೈತ್ಯರಹಾವಳಿ.

Gign o, is, (genui, genitum,) ere, v.a. ಹೆರ, ಪಡೆಯು, ಪ್ರಸವಿಸ, ಹೆತ್ತುಕೊಳ್ಳ, ಮಾಡಿಸ, gigni capite, in capite ತಲೆಮುಂದಾಗಿಹುಟ್ಟ — *producere* ಹುಟ್ಟಿಸ, ಮೊಳಿಸ, ಬೆಳಿಸ, ಬರಲಿಸ—*ova* ಮೊಟ್ಟೆಯಿಕ್ಕ.

Gingiv a, æ, f. ಹಲ್ಲಿನಬುರು.

Girgill us, i, m. ಅಚ್ಚೆ, ಆಳಟಿ, ರಾಟಣ.

GL

Glab er, ra, rum, ತಲೆಬೊಳಿಸಿದ, ಬೋಳ, ಕೂದಲು, ಕತ್ತಿನಲು, ಚಿಮಟ

ಲುಟ್ಟ--*delicatus* ಕೋಮಲವಾದ, ಹೆಂಗಿನ.

Glabr eo, es, ere--esc o, is, ere,*v. a* ಕೂದಲು... ಗಡ್ಡ... ಕುಲ್ಲು... ಇಲ್ಲದಿರ V. Calvefio .

Glabret a, orum, *pl . n .* ಕುಲ್ಲು ಇಲ್ಲದ ಜಾಗಗಳು.

Glabr o··· are , *v . a .* ಬೋಳಮಾಡ, ರೋಮಗಳ ಕಿತ್ತುಹಾಕ.

Glacial is, *m. f.* e, *n.* ಚಳಿಯುಂಡ.. ಹೆಪ್ಪಿನ--ಹೆಪ್ಪಿಸುವ, ನೀರುಕಟ್ಟಿಸು.

Glacie s, i, *f.* ಹಿಮಗಂಡ,ಹೇಮಂತ, ನೀರಿನಹೆಪ್ಪು, ಮಂಜುಗಡ್ಡೆ, ಶೀತದಿಂದಕಲ್ಲಾದ ಜಲ—*(eris* ಕಂಚಿನಕಠಿನ.

Glaci o··are, *v. a .* ಚಳಿಯುಂಡ ಹೆಪ್ಪುಗಟ್ಟಿಸ.

Glacit o·· are,*v.n.* (ಬಾತು) ಕೂಗ

Gladiari us a, um, ಕತ್ತಿನ.

Gladiator, is,*m.* ಕತ್ತಿಮಲ್ಲ,ನರ್ತಾನ್ತಿ, ಅಸಿಗಾರ, ಕವಾಸಿಗೆ ಕತ್ತಿಯುದ್ಧ ಡು ವವ—i um, i, *n.* ಅವನಸಂಬಳ—tur a, æ, *f.* ಕತ್ತಿಯುದ್ಧಕಾರನಲುದ್ಯೋಗ-ಕಾಯಕ.

Gladi um,i, *n*—us, i, *m.* ಕತ್ತಿ,ಖಡ್ಗ ಅಸಿ, ಸಾಯಕ — *rectus et anceps cum capulo* ಪಟ್ಟಾಕತ್ತಿ,ಕಂಡೇಯವು, ನೇಟಾಕತ್ತಿ — *valdè flexilis* ಮಡವುಕತ್ತಿ — *acutus* ಕೂರಸಿ, ಖರಾಸಿ , ಬಸಿದಖಡ್ಗ— *latus* ತಬರ ಕತ್ತಿ, ಗುಜುಗತ್ತಿ, ಪಡಗಟ್ಟನತ್ತಿಗೆ — *herois cum acumine curvo* ಸುರಾಯಿಕತ್ತಿ *duobus cubitis longum* ಕರ ··· ವಾಳ — ವಾರಿ—*communis* ವಂಕಿಣಿಕತ್ತಿ—*præpilatus* ಜಮದಂಡೆ,ಬಾಣಕಟ್ಟಿಗೆ—*districtus*, ಬರಿಕಿತ್ತ ಕತ್ತಿ, ಬಿಚ್ಚುಕತ್ತಿ — *ligneus* ಕರಸಾಳಿಕ —os ಆಲಿ , ಮುಖ —*capulus* ಪಜುಕ,ಕ್ರನುವು—ad gladium damnari ಕತ್ತಿಯುದ್ಧಸ್ಸಾಗುವದಕ್ಕೆ ಶಿಕ್ಷೆಪಡ.

Glandul a,æ,*f.* ಗಂಟ್ಲಮಣಿ,ಶರೀರದ ಧಾತುಗಳ ಸೋಸುವ ವೃದಾದಮಣಿ. —*dolor* ಗಂಟ್ಲನೋವು, ಗಂಡಮಾಲೆ.

Glandulos us, a,um, ಮೇಲೆಹೇಳಿದ ಮಣಿ... ಗಂಟು... ತರಿತವಾದ.

Glan s, dis, *f.* ಶೀಮೇ ಪೊಂದುಬಗೆ ದೊಡ್ಡಮರದ ಬೀಜ--ಗುಂಡು—*plumbea* ಶೀಸದಗುಂಡು--*fertilis* ಸಾಫಲ್ಯ—dulari us, a, um ಇಂಥ ಬೀಜ ತರಿತವಾದ—difer,a , um ಇಂಥ ಬೀಜ ಬೆಳಿಸುವ.

Glaphyr us, a, um, V. Elegans.

Glare a, æ, *f.* ಗರಳು, ಮರಪಕಲ್ಲು, ಗುರುಸು, ಜಲ್ಲಿ, ಕಂಕರೆ—*alba* ಕಟುರು—*in frumentis* ಹೆಗಲ್ಲು.

Glareos us, a , um , *solum* ಗರಸು ನೆಲ, ಜಲ್ಲಿಕಲ್ಲು ತುಂಬಿದ.

Glaucom a, æ,*f.*—a, tis, *n.* ಕಂಣು ನಮುದ್ರದಬಂಣವಾಗುವವ್ಯಾಧಿ.

Glauc us, a, um. *homo* ಗೂಗಂಣ· *oculus* ಗೂಗಂಣು , ಬಿಳಿಗಂಣು — *color* ಎಳೆಹಳದಿ... ಸಮುದ್ರದ··· ಬಂಣವಾದ.

Gleb a,æ,*f.* ಮಂಣಿನ··ಗಡ್ಡೆ—ಹೆಂಟೆ —ಅಕ್ಕರೆ—ಮುದ್ದೆ—ಲೋಷ್ಟ—ಹೆಕ್ಕೆ—ಚೆಟ್ಟು—*satus ager* ಬೀಜಬಿತ್ತಿದನೆಲ— *imbre in arvo nuper sato* ಮೇಲುಪೆಟ್ಟು--*suprà cadaver* ಶವದಮೇಲೆ ಹಾಕಿಬಿಟ್ಟ ಮಂಣು —*calcis* ಸುಂಣದಕಲ್ಲು.

Glebal is,*m.f.*e,*n.*ಮಂಣುಹೆಂಟೆಯ.

Glebari us, i, *m.* ಹೆಗಲಾಯೆತ್ತು.

Glebatio, nis, *f.* ನೆಲದತೆರಿಗೆ.

Gleb os us--ulent us, a,um, ಮಂಣಿನಗಡ್ಡೆತರಿತವಾದ.

Gli s, dis,*f.* ರೋಟ್ಟಿಗೆಮಾಡ್ಸ—ris,*m.* ಚಳಿಕಾಲವೆಲ್ಲನಿದ್ದಿಸುವಬಂದುಬಗೆ ಇಲಿ —tis, *f.* V. Argilla.

Gliscen s,tis,*o. g.* ಹೆಚ್ಚುವ, ವುಬ್ಬುವ,

ಬಲಿಯುವ, ಬಲಿತು.

Glisc o, is, ere, *v.n.* ಅದೃಶ್ಯವಾದ ವಿಧವಾಗಿ ಬೆಳೆಯು—*crescere* ಹೆಚ್ಚಿಕೊಳ್ಳ, ಪುಷ್ಟಿ..ಕೊಬ್ಬು..ಮಾಡ—*diffundi* ಹಬ್ಬಿಕೊಳ್ಳ V. gestio.

Globatim, *adv.* ಸಗಟು, ಸಗುಟಾಗಿ, ಹುಂಡಾಳಿತವಾಗಿ, ಗುಂಪಾಗಿ—*in globo* ಸಗುಟಿನಮೇಲೆ, ಮೊತ್ತವಾಗಿ.

Glob o...are, *v.a.* ಬಟುವಾಗಿ.. ಚಕ್ರಾಕಾರ...ಉಂಡೆಯಾಗಿ.. ಮಾಡ—or ...ari, *v. pass.* ತಿರುಗ, ಬಟುವಾಕಾರ... ಉಂಡೆ..ಆಗ.

Globosita s, tis, *f.* ವರ್ತುಲಾಕಾರ V. Rotunditas.

Globos us, *a, um,* ದುಂಡಾದ, ಗುಸುಕು, ಗುಬ್ಬ, ಗುಬ್ಬಿ, ಉಂಡೆ.

Globul us, i, *m.* ಸಣ... ಉಂಡೆ—ಗುಂಡು—*metallicus ad ornatum* ಕುಚ್ಚು—*pro sertis* ಮಣಿ— *lusorius* ಗೋಲಿ, ಕಂಚಾ—*è semine* ಹೇಟುಕಾಯಿ—*ligneus* ಓಬಿಕಾಯಿ—*acervus trium globulorum, lapillorum quarto superposito* ಉಡ್ಡಿ—*idem cum quatuor sic collocatis* ಉಡ್ಡಿಗಜ್ಜುಗ...ಗು— *immittere globulos unum in alium* ತಿಳಿಕೊಳ್ಳ, ಗೋಟಿಹಾಕ, ಮಾಟ—*globuli feriendi* ಗೋಟಿಪಿಚ್ಚೆ—*argilleus pro arcu* ಮಿಂಚಿ, ಮಿಡಿಗಲ್ಲು— *pistoria dulciola* ಹೋಳಿಗೆ ಇತ್ಯಾದಿಗಳು—*fili* V. glomicellus.

Glob um, i, *n.*—us, i, *m.* ಮಂಡಲ, ಗುಂಡು, ದುಂಡು—(Bombe) ಗರ್ಭಗುಂಡು, ಹವೇಲಿಬಾಣ—*in summitate virgæ, ensis* ಗುಬ್ಬ — *capitis elephantis* ಕುಂಭಸ್ಥಲ—*fili* V. glomus—*fluctuum* ತೆರೆಗಳು— *telorum* ಅಂಬುಮಾರಿ— *caterva* ಗುಂಪು—*conventionis* ಸಂಘಬಂಧುಕಾರರಕೂಟ.

Gloci do, are—o, is, ivi, itum, ire —t o..are, *v. n.* (ಹೆಟ್ಟೆ ಕೋಳಿ) ಕೊರಗುಟ್ಟ.

Glocitatio, nis, *f.* ಕೊರಗುಟ್ಟಿಕೆ.

Glomer, is, *n.* V. glomicellus.

Glomerabil is, *m. f.* e, *n.* ಉಂಡೆಯಾಗಿ ಸುತ್ತಲ್ಪಡುಲಾಗುವ.

Glomeratim, *adv.* ಉಂಡೆಯಾಗಿ, ಸುರುಳಾಗಿ V. Conglobatim.

Glomer o...are, *v.a. funem* ಸುರಣೆ ಮಾಡ, ಸುರುಳ — *filum* ಕಡಿಹೋಡ, ಕುಕ್ಕಡಿ ಸುತ್ತ, ಉಂಡೆಹಾಕ—*fusis* ಕುಂಜಾ ಕಟ್ಟ-*congregare* ಕೂಡಿಸ V.Agglomero

Glomeros us, a,um, ಉಂಡೆಯಾಗಿ ...ವರ್ತುಲಾಕಾರವಾಗಿ ... ಕೂಡಿದ— ಹೊಂದಿಕೊಂಡ.

Glom icell us—ul us, i, *m*—us, eris, *n. vel,* i, *m. panni* ತಿಂಬ—*fili tenuis* ಗುಳಿಗೆ ತಿಳು, ಉಂಡೆ, ತೆಳಿನಕಡಿ *super fusum* ಕಂಡಿಕೆ, ಕಕ್ಕಡಿ—*funis* ಸುರಣೆ, ಸುರುಳು, ಸುರುಟು — *gossipinum* ಸಂಜಿಡಿ—*staminis* ಹಾಸಿನುಂಜ—60 *filorum* ಕುಂಜ—*contortus* ಕುಂಜಡಿ.

Glori a, æ, *f.* ಮಹಿಮೆ, ವೈಭವ, ಪಿರಿಕೆ, ಸ್ತೋತ್ರ, ಪ್ರತಾಪ, ಬಹುಮಾನ V. Laus—glori æ, arum ಬಣಬಡಾಯಿ, ಸುಳ್ಳುಗಾಂಭೀರ್ಯ.

Gloriabund us,a,um ಬಡಿವಾರದವ, ಹರಚಿಕೊಳ್ಳುಕಾರ, ತನ್ನನ್ನೇಮೆಚ್ಚಿಕೊಳ್ಳುವ.

Gloriand us, a, um, ಮಹಿಮೆಗೆ... ಕೀರ್ತಿಗೆ.. ಸ್ತುತಿಸಲ್ಪಡುವದಕ್ಕೆ..ಯೋಗ್ಯವಾದ—ತಕ್ಕ.

Gloriatio, nis, *f. propria* ಬಡಿವಾರತನ, ಬಿಂಕ, ಆತ್ಮಸ್ತುತಿ, ನೀಟು—*vana* ಹ

ರಜಿಕೊಳ್ಳ, ಅಹಮಹಮಿಕೆ, ಜಲ್ಲಿ, ದುರಭಿಮಾನ V. Jactantia.

Glorificatio, nis, *f*. ಕೊಂಡಾಟ, ಮಹಿಮೆ...ಸ್ತುತಿ.. ಪ್ರತಿಷ್ಠೆ... ಪಡಿಸುವಿಕೆ V. gloria.

Glorific o..are,*v.a.* ಮಹಿಮೆ..ಪಡಿಸ—ಕೊಡ, ಬಹುಮಾನಿಸ, ಕೊಂಡಾಡ, ಸ್ತುತಿಸ.

Glorific us, a, um, ಮಹಿಮೆಗೆ..ಶ್ಲಾಘನೆಗೆ ..ಕೀರ್ತಿಗೆ...ಕರ್ತ.

Gloriol a, æ, *f*. ಮಮತೆ, ಅಲ್ಪಘನತೆ, ಸ್ವಲ್ಪಮಹಿಮೆ.

Glori or ··ari, *v. d. acc.* de,in,*abl*· ಬಡಿವಾರಮಾಡ, ಬಡಾಯಿ..ಬುರುಡೆ..ಜಲ್ಲಿ ...ಕೊಚ್ಚ —ಕೂಗ, ಬಿಂಕವಾಡ, ತಂನಂನೇ ತಾನೇ ಮೆಚ್ಚಿಕೊಳ್ಳ—ಜಂಭ ಹೇಳ.

Gloriosè, *adv*. V. Jactanter—*cum pompâ* ಗಾಂಭೀರ್ಯದೊಂದಿಗೆ, ಆಡಂಬರವಾಗಿ.

Glorios us, a, um, ಮಹಿಮೆ..ಕೀರ್ತಿ ··ಘನ.. ಉಳ್ಳ—*superbus* ಬಡಾಯಿಗಾರ, *f*. ಗಾತಿ, ಬಡಿವಾರದವ—*avidus gloriæ* ಕೀರ್ತಿಗೆ ಆಶೆಗಾರ V. Jactator.

Glo s, ris, *f*. *femina vocat* ಅತ್ತಿಗೆ 1. *sororem natu majorem sui mariti*—2. *uxorem sui fratris majoris*—3. *fratris sui mariti* (ಮಾತೃವು)—*vir vocat* ಅತ್ತಿಗೆ 1. *sororem majorem suæ uxoris* 2 *uxorem sui fratris majoris—sed soror natu minor mariti vel uxoris; uxor fratris minoris dicuntur* ನಾದಿನಿ—*glores inter se dicuntur* ವಾರಗಿತ್ತಿಯರು, ನೆಗೆವೆಂಣು.

Gloss a, æ, *f*. ಟಿಪ್ಪಣಿ, ಟೀಕು, ವೃತ್ತಿ, ವ್ಯಾಖ್ಯೆ, ಭಾಷ್ಯ—*lingua* ಭಾಷೆ—*voces obscuræ dialecti* ಶಿಕ್ಷ ವುಳ್ಳ ಗ್ರಾಮ್ಯ ಭಾಷೆಯ ಶಬ್ದಗಳು—ul, a, æ, *f*. ಸ್ವಲ್ಪ ..ಸಂಕ್ಷೇಪವಾದ...ವ್ಯಾಖ್ಯಾನ.

Glossari um,i,*n*. ನಿಘಂಟು, ಕೋಶ—*præcipuè verborum sacrorum* ನಿರುಕ್ತ us, i *m*. glossograph us, i, *m*. ಟಿಪ್ಪಣಿಕಾರ.

Glotti s, dis,*f*. ಕಂಠದ ಕುಣಿ, ನಾಗದ್ವಾರ—*avis* ಬಂದುಬಗೆ ಹಕ್ಕಿ.

Glum a, æ, *f*. ಧಾನ್ಯದ ತವುಡು—*ficorum* ಅಜ್ಜೀರಹಂಣಿನ ಸಿಪ್ಪೆ.

Glu s, tis, — glut en, inis, *n*. *pro avibus* ಜಿಗುರಂಟು, V. glutinum.

Glutinam en, inis,—ent um, i, *n*. —tinatio, nis, *f*. ಅಂಟಿಸುವಿಕೆ, ಒಟ್ಟುಗೆ, ಒಟ್ಟಿಕ್ಕುವಿಕೆ, ಹಚ್ಚುವಿಕೆ— *vulneris* ಹುಂಣಾರುವಿಕೆ, ಕಲೆಕಟ್ಟುವಿಕೆ.

Glutinat iv us—ori us, a, um, ಅಂಟುವದಕ್ಕೆ... ಅಂಟಿಸುವದಕ್ಕೆ... ಒಟ್ಟಿಸುವದಕ್ಕೆ..ಅಪ್ಪಿಡುವದಕ್ಕೆ..ತಕ್ಕ—ಒದಗುವ.

Glutin o..are, V. Ferrumino ಹಚ್ಚ, ಅಂಟಿಸ—*vulnus glutinari* ಹುಣ್ಣು ಅಂಜ ಕಟ್ಟ.

Glutin e us—os us, a, um ಜಿಗಟು.. ಕಚಿ...ಬಂಕೆ...ಬಂಟು ..ಚಿಬುಟಿ. ·ಬೋಳಿ..ಮಾದ, ಕಸುಕು-*argilla* ಜೇಡಿಮಣ್ಣು.

Glutin um, i, *n*. ಜಿಗುಟು, ಬಂಕೆ, ಅಂಟು, ಬಂಟು, ಸರೆ, ಬಂಧನೆ—(colle forte) ವಜ್ರ—*virgæ avibus* ಅಂಟುಗಳು *metallorum* ಪಟ್ಟು, ಹುಡಿ, ಅತಕುವಿಕೆಗೆ ತಕ್ಕದ್ದೆಲ್ಲಾ.

Glut io, is, ivi, itum, ire, *v. a.* ನುಂಗ, ಉಕ್ಕೊಳ್ಳ, V. Deglutio.

Gluto, nis, *m*. ಹೊಟ್ಟೆಬಾಕ, ರಾವಣ ಹೊಟ್ಟೆಯವ, ತಿನ್ನಾಳಿ, ದಿಂಡಿಮವ, ಅಶನಾಳಿ, ಊಟಗಾರ, V. Helluo.

Glutt us—glut us, a, um, ಸರಿಯಾ

ಗಿ ಹೊಂದಿಯಿರುವ.

Glutt us, i, *m.* V. guttur.

Glycyrrhiz a, æ, *f.* on, i, *n.* ಅತಿ ಮಧುರ —*vel, radix* abri precatorii ಯಷ್ಟಿಮಧುರ.

GN.

Gnar us, a, um, ವಿಜ್ಞ, V. Doctus, —è *adv.* ಶಾಸ್ತ್ರಪ್ರಕಾರವಾಗಿ, ಅಜ್ಞೆತರವಾಗಿ.

Gnat a, æ, *f.* ಮಗಳು, V. Filia.

Gnat us, i, *m.* ಮಗ, V. Filius. — gnat us, a, um, ಹುಟ್ಟಿದ.

Gnavita s, tis, *f.* ಬಲ, ಉಗ್ರ, ಘಟ್ಟಿತನ, V. Accuratio.

Gnav iter—è, *adv.* ಘಟ್ಟಿಯಾಗಿ, ಬಲದೊಂದಿಗೆ, V. Accuratè.

Gnav us, a, um ಬಲ..ಧೈರ್ಯ..ಉಳ್ಳ, V. Alacer.

Gnom a, æ, *f.* ಚ್ರೈಮಾಷಿಗೆ ತಕ್ಕ ಯಂತ್ರ —*amussim* ಮೂಲೆಮಟ್ಟಹಲಿಗೆ.

Gnomon, is, *m. solarii* ಶಂಕು.

Gnomonic a, æ;— e, es, *f.* ಸೂರ್ಯ ಘಡಿಯಾರದ ಶಾಸ್ತ್ರ, ಅಂಥ ಘಡಿಯಾರ ಗೀರಿಡುವ ವಿದ್ಯ—i, orum. *pl. m.* ಇದರಲ್ಲಿ ವಿದ್ಯಾಶಾಲಿಗಳು.

Gnosc o, is, ere, V. Nosco.

GO.

Go a, æ, *f.* ಬಾಳೇಮರ.

Gobio, nis; -- bi us, i, *m.* ಒಂದು ಸಣ್ಣ ಮೀನು.

Gomor, *ind,* ಜಾದರ ಒಂದು ಅಳತೆ.

Gomph us, i, *m.* V. Paxillus--*viarum* ಮಾರ್ಗ ತುಂಬಿಸುವಿಕೆ, ಸಾಫು ಮಾಡುವದರ ಸಂಬಂಧ— *oculorum* ಕಂಣು ನೋವು.

Gonorrhæ a, æ, *f.* ಮೇಹ ರೋಗ, ಅಂಟು ಮೇಣ, ಪಿಶ್ಟಿ—*species quædam* ತಂಟುಮೇಣ.

Gossipi um, i, *n.* ಹತ್ತಿ, ಪಂಜ, ತೂಲ, ಬದರಿ, ಪಿಚು —*mundatum* ಅರಳೆ, ಹಂಜಿ —*bombice mixtum* ಕೂಟಶಾಲ್ಮಲಿ— *Bombax petrandum* ಬೂರಗ ಮರ — *gossipium glomeratum non netum* ಹಂಜೀ ಬತ್ತಿ—*in atramento* ಸೋಪು—*educere è semine* ಹತ್ತಿ ಹರದು ಅರಳೆಮಾಡ —*parator* ಪಿಂಜಾರ —*sarcina gossipina* ಚಕ್ರು, V. Xilon.

GR.

Grabat us, i, *m.* ಹಾಸಿಕೆ, ಗರೀಬರ ಮಂಚ.

Gracilen s, tis, *o. g.*—t us, a, um, V. gracilis.

Gracilesc o, is, ere, *n.* ತೆಳುವು... ಸಣ್ಣ... ಬಡಬಕ್ಕಲು.. ಆಗ–ಬೀಳ, ನಲಿದು ಹೋಗ.

Gracil is, *m. f.* e, *n.*— us, a, um, ಬಡಬಕ್ಕಲು, ಅಳರು, ತೆಳುವಾದ, ಕೃಶ, ಕ್ಷೀಣ, ಸಣ್ಣ—*medium corporis* ಸೆಳ ನಡುವು, ಕೃಶೋದರ—*via* ಕಿರಿದಾರಿ— *materia* ಅಲ್ಪಸ್ವಲ್ಪ ವಸ್ತುವು, ಕಾರ್ಶ್ಯ V. Macilentus.

Gracilita s, tis--tud o, nis, *f.* ತೆಳುವು ..ಬಡಬಕ್ಕಲು..ಅಳರ..ತನ--ಸಣ್ಣತನ ಲಾಘವ, ಕೃಶತ್ವ--*muliebris* ಅಸಿನಡು.

Graciliter, *adv.* ಅಳರಾಗಿ, ತೆಳ್ಳನೆ.

Gracill o..are, *v. n.* (ಕೋಳಿ) ಕೇರ, ಕೊಕ್ಕರಿಸ, ಕೂರಗುಟ್ಟ.

Grac us, i,— ul us, i, *m.* ಕರಪುಂಗನಹಕ್ಕಿ, ಕಿರೀದಿವಿ--gracula religiosa, ಶಾರಿ—*cæruleus* ಚಿತ್ರವಾಲ, ಮಣಿಕಂಠ, ಚಾಷ--*piscis* ಒಂದು ಬಗೆ ಮೀನು.

Gradal is, *m. f.* e, ಮೆಲ್ಲಗೆ ಮೆಲ್ಲಗೆ

ನಡೆಯುವ.

Gradari us, a, um, V. gradalis.—gradatus.

Gradatim, *adv.* ಪಡಿಪಡಿ, ಅಂತಸ್ತಂತಸ್ತಾಗಿ, ತಿರಿತಿರಿಯಾಗಿ, ಮೆಟ್ಟುಮೆಟ್ಟಾಗಿ, ತಿನತಿನ, ಅಲ್ಲಿಗಲ್ಲಿಗೆ--*paulisper* ಕುಸಕುಸವಾಗಿ--*pro futuro* ಆಗತಾಗತ, ಬರಬರ.

Gradatio, nis, *f.* ಅಂತಸ್ತಂತಸ್ತು—ಪಡಿ, V. Scala ಸೋಪಾನ — *ascensus* ಸುಟ್ಟಿ, ಎಗ್ಗುಡಿ--*amphitheatri* ಕೂಕುಕೊಳ್ಳುವದಕ್ಕೆ ಆಟದ ರಂಗದಲ್ಲಿ ಸೋಪಾನ ಸೋಪನವಾದ ಪಡಿಕಟ್ಟು — *augmentum* ಹೆಚ್ಚವಳಿ, ಅಧಿಕರಿಸುವ ಕ್ರಮ.

Gradat us, a, um, ಮೆಟ್ಟು ಮೆಟ್ಟಾದ' ಅಂತಸ್ತಂತಸ್ತುಳ್ಳ, ಸೋಪಾನ ಸೋಪಾನವಾದ, ಪಡಿಕಟ್ಟಾದ.

Gradil is, *m. f.* e, *n.* ಪಡಿ..ಮೆಟ್ಟು...ಸೋವಟಿಗೆ ..ಉಳ್ಳ.

Grad ior, eris, (gressus sum,) i, *v. n.* ನಡೆಸು—*magno passu* ಜಂಗೆ ಹಾಕಿ ನಡೆಯು—*cum sonitu* ದಗದಗ ನಡೆಯು—*superbè, ambitiosè* ನಿಗ್ಗುಜಗ್ಗಾಗಿ ನಡೆಯು—*retentis passibus* ಜಗ್ಗುನಿಗ್ಗಾಗಿ ನಡೆಯು — ಅಡಿಮೇಲಡಿಯುಡ— *ascendere* ಏರ,

Grad us, ûs, *m.* ಮೆಟ್ಟು, ಪಡಿ, ಸೋವಟಿಗೆ, ಸೋಪಾನ, ಪಡಿಕಟ್ಟು, ಆರೋಹಣ, ಹಂತ—*cochleatus* ಸುರುಳಾದ ಪಡಿಕಟ್ಟು, V. Sçala,--gradibus ಮೆಟ್ಟುಮೆಟ್ಟಾಗಿ--*genealogicus* ವರಿಸೆ, ಕಾಲು, ತಲಾಂತರ, ಬಂಧುತ್ವ, ವಾವಿ--- *in quo gradu ille ?* ನಿನಗವನು ಯೇನಾಗಬೇಕು— *temporum* ಕಾಲದ ಕ್ರಮ—*circuli* ಪಂಕ್ತಿ, ದಿಶ, ಅಂಶ—*semi-gradus* ಉಪದಿಶ---*series, ordo* ಅಂತಸ್ತು, ವಸೀ, ಉಂನತಸ್ಥಾನ, ತರ, ತರಾಂತರ—*dignitas* ಪಟ್ಟ, ಉದ್ಯೋಗ — *secundùm uniuscujusque gradum* ದಾಮಾಷಿ...ದಾಮಾಷಾವು..ಪ್ರಕಾರ--*quoad divitias cujusque* ಮುನಾಸಬು ಪ್ರಕಾರ—de gradu dejici, deponi ಉದ್ಯೋಗವ ಹೋಗಲಾಡಿಸ, ಬರತರಫ ಪಡ, ಜಾತಿ...ಕುಲ...ಭ್ರಷ್ಟ ಮಾಡ, ಬುದ್ಧಿ ತಬ್ಬಿಬ್ಬುಬೀಳ—*gressus* ಹೆಜ್ಜೆ—gradum alicui conferre ಒಬ್ಬನ ಬಳಿಗೆ ಸೇರ—ಹೋಗ — gradu pleno ಶೀಘ್ರವಾಗಿ — gradum facere ಬೇರೆ ಸಂಗತಿ ಹೊಡಗ, ಯುಕ್ತಿಮಾಡ—*ligonis* ಚೆನಿಕೇ ಪೆಟ್ಟು--ಕಡಿತ—*in ore equino* ಕುದುರೆಯ ಮೇಲ್ಬಾಯಲ್ಲಿ ತಿರಿಗಳು.

Græcè *adv.* ಗ್ರೀಕರ ಭಾಷೆಯಾಗಿ.

Græci a, æ, *f.* ಗ್ರೀಸೆಂಬ ಸೀಮೆ.

Græcita s, tis, *f.* ಗ್ರೀಕು ವಿದ್ಯಾದಿಗಳು—ಭಾಷೆ—græc or..ari, *v. d.* ಗ್ರೀಕರನ್ನು ಕಂಡುಭಾವಿಸ.

Græc us, a, um ಗ್ರೀಕನಾದ, ಗ್ರೀಸೆಂಬ ಸೀಮೆಯಾದ್ದು—fides ಕಪಟ..ವಂಚನೆಯಾದ ಮಾತು--fide mercari ನಗದು ಹಣದಿಂದ ಕೊಂಡುಕೊಳ್ಳ.

Grall æ,arum,*pl.f.* ಊರುಗೋಲು, ಮರಗಾಲು— ator, is,—ipe s, tis, *m.* ಇಂಥ ಮರಗಾಲುಗಳ ಮೇಲೆ ನಡೆಯುವವ.

Gram en, inis, *n.* ಹುಲ್ಲು, ಹಸುರು, ತೃಣ, ಕಜಪ, ಘಾಸ—*eradicatum* ಹೋಕಣಿ—(*chiendent*) ಗರಿಕೇಹುಲ್ಲು—*cespes* ಹುಲ್ಲಿನ ಹುದಿ.

Gramine us, a, um ಗರಿಕೇಹುಲ್ಲಿನ.

Græminos us, a, um ಶಾಡ್ವಲ, ಬಹುಮೇವು ವುಳ್ಳ.

Grammatic a, æ;—e, es, *f.* ವ್ಯಾಕರಣ, ಶಬ್ದಶಾಸ್ತ್ರ.

Grammaticè, *adv.* ವ್ಯಾಕರಣರೀತಿ

...ಕಷ್ಟ...ಯಾಗಿ.

Grammatic us,a, um, ವೈಯ್ಯಾಕರಣ—*analysis grammaticolis* ಪದಚ್ಛೇದನೆ—*grammatistæ* ವ್ಯಾಕರಣಾಚಾರಿಯನ.

Grammatist a--es, æ, *m.* ಬಾಕರಣಿಗನು, ವೈಯ್ಯಾಕರಣ.

Granari um, i, *n.* ಕಣಜ, ಕೋಷ್ಟ, ಉಗ್ರಾಣ — *regium* ಮೋದಿಖಾನೆ—*subterraneum* ಪಾತ್ರೆ, ಹಗೇವು,ಗುಳಿ, ನೆಲಗುಣಿ-*vas vimineum* ಪಿಟಕ,ಗುಂಮಿ, ಗಾದಿ—*figlinum* ಓಡೆ, ವಾಡೆ, ಕೆರಜೆ.

Granatim, *adv.* ಕಾಳುಕಾಳಾಗಿ, ಮಣಿಮಣಿಯಾಗಿ.

Granat um, i, *n.* ದಾಳಿಂಬಿಹಂಣು—*bellicum* ಒಂದುಬಗೆ ಗರ್ಣಗುಂಡು.

Granat us, ûs,*m.* ಧಾನ್ಯದಕಾಳು...ಮಣಿ...ಬೆಳಿಯ—ಉಂಟಾಗ—us, a,um, ಅನೇಕಕಾಳು.. ಮಣಿ...ಅಕ್ಕಿ..ಬೀಜ..ಉಳ್ಳ—*seminibus* ಆಟಾಗೋಟಿ...ಟು.

Grandævita s, tis, *f.* ವೃದ್ಧಾಪ್ಯ, ಮುಪ್ಪುಪ್ರಾಯ, ದೀರ್ಘಾಯುಷ್ಯ.

Grandæv us, a, um, ಜಿರ್ಣನು,*f.* ಮುದುಕು ಪ್ರಾಯವುಳ್ಳ, ವರ್ಷಿಷ್ಟ, ವರ್ಷಿಯಾಂಸ, *f.* ಂಜೆ.

Grandesc o, is, ere, *v. n.* ಬಲಿಯು, ದೊಡ್ಡದಾಗ.

Grandiloqu us, a, um, ಉನ್ನತ..ಘನತೆ...ಜಂಬ..ಆದವಾಕ್ಯವುಳ್ಳ,ಮಾತಾಡುವದರಲ್ಲಿ ಗಂಭೀರಸ್ತ-*verbum* ದೊಡ್ಡ..ಘನ..ವುಳ್ಳವಾಕ್ಯ.

Grandin at, avit,are, *v. imp.* ಆನೆಕಲ್ಲುವರ್ಷಿಸ.

Grandin e us, a, um ವಾರಿಗಲ್ಲುಕುಂಬಿದ—nos us, a, um, ಕಲ್ಮಳೆ ಆಗಾಗ್ಯಗರಿಯುವ.

Grand io, is, ivi,itum, ire, *v.a.* ಬೆಳಿಸ..ಹೆಚ್ಚಿಸ...ಪೊಳಿಸ.

Grand is, *m. f.*e, *n.* ದೊಡ್ಡ, ಉದ್ದ, ಉಪ್ಪರ—*amplus* ವಿಶಾಲ, ವಿಸ್ತಾರ—*sublimis* ಉನ್ನತ,ಮಹತ್ತು,ಮಹಿಮೆಯುಳ್ಳ

Grandita s, tis, *f.* V. Magnitudo—*ætatis* ದೀರ್ಘಾಯುಷ್ಯ.

Grandi ter—ùs, *adv.* ದೊಡ್ಡವಾಗಿ, ಶಾನೆ—*stylo* ಉನ್ನತವಾದ ವಚನ ನಡೆಯಾಗಿ.

Grand o, inis, *f.* ವಾರಿಗಲ್ಲು, ಆನೆಗಲ್ಲು — *pluvia* ಆನೆಕಲ್ಮಳೆ, ವರ್ಷೋಪಲ, ಅಶ್ಮವರ್ಷ, ಕರ, ನೀರ್ಗಲ್ಲು.

Granea,æ,*f.* ಧಾನ್ಯದಅಂಬಲಿ,ಹಿಟ್ಟು.

Gramifer a, um, ದವಸ...ಬೀಜ...ತರುವ--ಫಲಿತವಾದ.

Granos us,a,um,V.granatus,a,um.

Gran um, i, *n.* *cujuscumque speciei* ಧಾನ್ಯ,ದವಸ, ಬತ್ತ—*grandiora ut milliaceum etc.* ಗಟ್ಟಿಬತ್ತ-*leviora* ಹುಲ್ಲುಬತ್ತ—*in spicâ* ತೆನೆ ಕಾಳು—*singulum* ಹರಳು,ಕಾಳು,ಮಣಿ,ರವೆ, ಕಣ — *aceribus eductum* ಅಕ್ಕಿ, ಧಾನ್ಯಸಾರ—*semi purgatum* ನುಗ್ಗಾಗು — *confractum* ನುಚ್ಚು, ಬಿರಣೆ—*vacuum* ಜಳ್ಳು, ಜೀಪರಿಕಾಳು—*exile* ಗುಣುಗು, ನೀರಸ ಧಾನ್ಯ—*ad usum equorum* ಹುರುಳಿ, ದಾಣ...ಣೆ—*sale mixtum* ಚಿಟ್ಟಿಹುರುಳಿ— *mucida grana* ಮುಗ್ಗಿಬಿದ್ದ, ರಸ ಧಾನ್ಯ, ಅಡಿಗಂಟು—*semi torrefactum ità ut manducari possit* ಕರಕಜಿರ್ತ — *granum coctum singulatim* ಅಗುಳು, ಪುಲಾಕ.

Graphic e, es, *f.* ಬರವಣಿಗೇ...ಚಿತ್ರದ...ವಿದ್ಯ.

Graphicè,*adv.* ಬರುಪಸಂದಾಗಿ,ವಿಚಿತ್ರವಾಗಿ, ಉಚಿತತರದಿಂದ, ಸ್ವರೂಪವಾಗಿ.

Graphic us, a, um, ಉಚಿತತರವಾದ, ಬಹುನಾಜೂಕವಾದ, ವಿಚಿತ್ರವಾದ—oter us, a, um, *id.*

Graphi s, dis, *f.* ಪಟ, ರೂಪ, ನಕ್ಷೆ, ಚಿತ್ರ— *incorrectus* ಕರಡು‥ಕಚ್ಚಾ…ಚಿತ್ರ, ಬರಿಮಾದರಿ.

Graphi um, i, *n. ad sculpendum* V. Cæltes--*ad scribendum* ಘಂಟ, ಲೇಖಣಿ—*ad pingendum* ಕುರಿ, ಕೂಚೀ.

Grassa tio, nis—tur a, æ, *f.* ಸೂರೆ, ಮಾರ್ಗಸ್ಥರ ಮೇಲೆಬಿದ್ದು ಕೊಳ್ಳೆ ಮಾಡುವಿಕೆ.

Grassator, is, *m.* V. Depeculator--Parasitus—*adulator* ಇಚ್ಛಕಗಾರ.

Grassat us, a, um, ಕೊಳ್ಳೆ..ಸೂರೆ..ಮಾಡಿದವ.

Grass or•••ari. *v. d.* ad, in, contrà *acc.* ಜಂಗೆಹಾಕಿನಡಿಯು—*procedere* ಮುಂದುಹೋಗ—ಹೋಗ—*jure* ನೀತಿಮಾರ್ಗವಾಗಿ ಹೋಗ—*consilio* ಸೂತ್ಯೋಪಾಯಗಳ ಪ್ರಯೋಗಿಸ—*diffundi* ವೃದ್ಧಿಯಾಗ, ಪ್ರಬಲಿಸು, ಹೆಚ್ಚೆಚ್ಚ—*aggredi* ಅಂಟಿಕೊಳ್ಳ, ತಗುಲಿಕೊಳ್ಳ, ಮೇಲೆಬೀಳ, ಸೂರೆ..ಕೊಳ್ಳೆ..ಮಾಡ—ಆಡ—*adulari* ಇಚ್ಛಕ ಆಡ.

Gratabund us, a, um,— gratan s, tis, *o. g.* ಹೊಗಳುವ, ಅನುಸಂತೋಷಪಟ್ಟುಕೊಂಡಿರುವ.

Gratanter, *adv.* ಪ್ರಿಯ…ಸಂತೋಷ…ದೊಂದಿಗೆ—ಸ್ತುತಿಸಿ.

Grat è--iùs--issimè, *adv.* V. Lætanter

Grat es, *acc.* ibus, *abl. f. pl.* ಮೇಲರಿತಸ್ತೋತ್ರ, ಉಪಕಾರ—agere, ferre, exsolvere, habere, persolvere ಮೇಲರಿತಸ್ತೋತ್ರಗಳ ಸಲ್ಲಿಸಲು—ಮಾಡಲು—ಹೇಳ

Grati a, æ, *f. divina* ದೇವಪ್ರಸಾದ, ದೇವಾನುಗ್ರಹ, ವರ, ವರಪ್ರಸಾದ—sanctificans ಇಷ್ಟಪ್ರಸಾದ, ಪ್ರಿಯದತ್ತ—excitans ಪ್ರೇರೇಪಕಪ್ರಸಾದ—*beneficium* ಉಪಕಾರ, ದಯ, ಕೃತೆ, ಕೃಪೆ, ಕರುಣ, ಕಾರುಣ್ಯ, ಕಟಾಕ್ಷ—est ಬಹುಉಪಕಾರ--*amicitia* ಇಷ್ಟ, ಪ್ರಿಯ, ಸ್ನೇಹ—bona ದಾಕ್ಷಿಣ್ಯ, ಪಕ್ಷ — mala ಹಗೆ, ಮನಸ್ತಾಪ—gratiam componere ಸಮಾಧಾನಪಡಿಸ--gratiam inire, sequi ಸಖ್ಯಸಂಪಾದಿಸಿಕೊಳ್ಳ--ಅಪೇಕ್ಷಿಸ--in gratiâ habere ಪ್ರಿಯವಾಗಿ..ದಯದೊಂದಿಗೆ ನಡಿಸ gratiam referre ಮೇಲರಿತಸ್ತೋತ್ರಮಾಡ—*venia* ಮಾಫು, ಮಂನಣೆ- in gratiam recipere ಕ್ಷಮೆಕೊಡ--jusjurandi ಭಾಷೆ ಪ್ರಮಾಣ ಮಾಡುವದಕ್ಕೆ ಮಾಫುಕೊಡ—*commodum* ಪ್ರಯೋಜನ, ಉಪಯೋಗ, ಮೇಲು—*motivus* ಮುಖಾಂತರ, ಕಾರಣ, ಓಸ್ಕರ—eâ gratiâ--ejus rei gratiâ, alicujus gratiâ ಒಬ್ಬನ ಮುಖ‥ಮುಖದಾಕ್ಷಿಣ್ಯ..ನೋಡಿ. ಇದರ ಕಾರಣ, ಇದಕ್ಕೋಸ್ಕರ—exempli gratiâ ಉದಾರಣೆಯಾಗಿ, ಅ…ಇ…ದು ಯೇನಂದರೆ, ಅ…ಇ…ದು ಹ್ಯಾಗಂದರೆ— *venustas* ಅಂದ, ಚೊಕ್ಕಲಿಕೆ — *sapor* ಇಂಪಾದ ರುಚಿ V. gratitudo.

Grati æ, arum, *pl. f.* V. grates.

Gratificatio, nis, *f.* ಉಪಕಾರ, ಮೇಲು—*pecuniaria* ಇನಾಮು, ಸಂತೋಷ—*veste etc.* ಬಹುಮಾನ, ಉಡಿಗೆರೆ.

Gratific o•••are, *v. a.* or••ari, *v.d.* ದಯಮಾಡ, ದಯ…ಕೃಪೆ…ತೋರಿಸ—ಪಾಲಿಸ — ಪ್ರಸಾದಿಸ, ಉಪಕಾರಿಸ—*perversam gratiam* ಅಪಕಾರಮಾಡ—*munere* ಇನಾಮು…ಸಂತೋಷ…ಉಡಿಗೆರೆ‥ಕೊಡ, ಬಹುಮಾನಮಾಡ.

Gratiosè, *adv.* ಕುಮ್ಮಕ್ಕಾಗಿ, ಶಿಫಾರ

ಸಿನಿಂದ, ದಾಕ್ಷಿಣ್ಯವಾಗಿ.

Gratios us, a, um, *bonus* ದಯಾಗುಣಮೂರ್ತಿ, ದಯಾಧಾರ, ದಾಕ್ಷಿಣ್ಯ..ಪರ…ಮೂರ್ತಿ, ಪ್ರಸನ್ನ--*protectus* ಕುಮಕು..ಶಿಫಾರಸ್ಸು…ಸಹಾಯ…ಪಟ್ಟ--*favore obtentus* ಶಿಫಾರಸಿನಿಂದ … ಪಕ್ಷಪಾತದಿಂದ…ದಯದಿಂದ..ಬಂದ—ಆದ—*venustus* ಚೆಲ್ವಿಕೆಯಾದ, ಪ್ರಿಯವಾದ.

Grat is—uitò, *adv*. ಸುಂಮನೆ, ಉಚಿತಾರ್ಥ..ಉಚಿತ…ಅಡಾಣೆ… ನಿರಾಕ್ಷೇದ…ವಾಗಿ—*absque causâ* ಅನ್ಯಾಯವಾಗಿ, ನಿಷ್ಕಾರಣವಾಗಿ, ಚೇನುಲಾಚು—*falsò* ನಚಿಯಾಗಿ, ಪುಕ್ಕಚಿ.

Gratitud o, inis, *f*. ಮೇಲರಿತತನ, ಕೃತಜ್ಞತೆ, ಉಪಕಾರದಸ್ಮರಣೆ-ನೆನಪು.

Grat or ··ari, *v. d. dat*. V. Congratulor — gratias reddere ಮೇಲರಿತಸ್ತೋತ್ರ…ಹೇಳ—ಸಲ್ಲಿಸ—ಒಪ್ಪಿಸ.

Gratuit us, a, um, ಉಚಿತ, ಉಚಿತಾರ್ಥವಾದ, ಪುಣ್ಯಕ್ಕಾಗಿ, ಮುಯಿಯಿಲ್ಲದ, ಲಾಭನೋಡದೆ, ಮನೋಪೂರ್ವಕಕೃಪೆಯಿಂದ—*opus,labor* ಅಡಾಣೆ, ಇಟ್ಟಿಬಿಟ್ಟಿ—*absque causa* ನಿಷ್ಕಾರಣವಾದ —*absque veritate* ಪುಗುಸಚಿಯಾದ.

Gratulanter, *adv*. V. gratanter.

Gratulatio, nis, *f*. ಹೊಗಳಿಕೆ, ಸ್ತುತಿ, ಸ್ವಾಗತ, ಮಂಗಳ, ಅನುಸಂತೋಷ, ಉಪಚಾರಣೆ V. grates.

Gratulator, is,*m*.--tri x, cis, *f*. ಸ್ತುತಿಕಾರ, ಅನುಸಂತೋಷಪಡುವವ.

Gratulatorié, *adv*. ಹೊಗಳುವಬಗೆಯಾಗಿ,ಹರಸಿಕೊಂಡು,ಮಂಗಳಹೇಳಿ.

Gratul or…ari, *v. d*. ಸ್ತುತಿಸ, ಮಂಗಳ ಹೇಳ-*alicui,rem, re de,in,pro re* ಯಾವದೊಂದು ಕಾರ್ಯಕ್ಕಾಗಿ ಪೊಬ್ಬನ್ನು ಸ್ತುತಿಸ—ಹೊಗಳ—*sibimet* ಹರಸಿಕೊಳ್ಳ—ಸಂತೋಷಿಸಿಕೊಳ್ಳ.

Grat us, a, um ಕೃತಜ್ಞ, ಉಪಕಾರನೆನಸುವವ, ಮೇಲರಿತವ — *se præbere* ಮೇಲರಿತವನಾಗಿ ನಡೆಯ--*carus* ಪ್ರಿಯ, ಇಂಪಾದ, ಇಷ್ಟವಾದ — *odore* ಸುಗಂಧವುಳ್ಳ—*venustus* ಅಂದವಾದ, ಸ್ನೇಹಕ್ಕೆ ಪಾತ್ರನು—*acceptus* ಮಂಜೂರಾದ, ಅಂಗೀಕರವಾದ, ಕೈಕೊಳ್ಳಲ್ಪಟ್ಟ.

Gravam en, inis, *n*. ಕಷ್ಟ, ಶ್ರಮೆ, ಭಾರ.

Gravat è--im, *adv*. V. Ægrè.

Gravedinos us, a, um, ಆಗಾಗೆ ಶೀತಲೆಭಾರವಾದ, ನೆಗಡಿಯುಳ್ಳ.

Graved o, inis,*f*. ಡೀಮ,ತಲೇಭಾರ —*frigore* ನೆಗಡಿ, V. graviditas.

Graveolenti a, æ, *f*. V. Fetor.

Gravesc o, is, ere, *v. n*. ಹೆಚ್ಚಾದಭಾರಹೊತ್ತಿರ,ಬಲುವಾಗ, ಹೊರೆಯಿಂದಸೋರಗ--ಮುರಿಯ—*submergi* ಮುಳುಗ—*bestia* ಸೂಲಾಗ—*ovis* ಕಟ್ಟ--*pejus fieri* ಬರ ಬರ ಕೆಡ.

Gravidita s, tis, *f*. ಗರ್ಭ, ಬಸುರು, *ultimus mensis graviditatis* ವೈಜನನ —*vaccæ* ಸೂಲು.

Gravid o…are, *v. a*. ಗರ್ಭಪಡಿಸಮಾಡ—*bestiam* ಸೂಲುಪಡಿಸ—ತುಂಬಿಸ-ಕಟ್ಟಿಸ.

Gravid us, a, um, *plenus* ತುಂಬಿದ, ಭರಿತ—*mulier* ಗರ್ಭಿಣಿ, ಬಸುರಿ, ಅಂತರ್ವತ್ನಿ —*fieri* ಗರ್ಭಕಟ್ಟಿಕೊಳ್ಳ—*partui proxima* ದಿನ ತುಂಬಿದವಳು— *vacca* ಕೆನೆ ಆಕಳು, ಸೂಲಾದ—*equa* ಸಬಲಾದ, —*onere* ಹೊರೆ…ಭಾರ..ಉಳ್ಳ V. Prægnans.

Graviloqu us,a,um, ಘನದೊಂದಿಗೆ…ಖಂಡಿತವಾಗಿ..ಮೆಲ್ಲಗೆ..ಮಾತಾಡುವ;

Grav is, *m. f.* e. *n.* ಘನವಾದ, ಭಾರವಾದ, ಬಲುವಾದ, ಗುರು—*vir* ದಾಕ್ಷಿಣ್ಯಮೂರ್ತಿ, ಘನವೊಂದಿದ, ಪೂಜಿತ, ಗ್ರಹಸ್ತ, ಹಿತಬಾರಿಮನುಷ್ಯ—*somnus* ಗಾಢನಿದ್ರೆ— *plenus* ಪೂರ್ತಿಯಾದ— *annis* ಪೂರ್ಣಪ್ರಾಯವುಳ್ಳ, ಪ್ರಾಯಸಂದವ— *periculosus* ಮೋಸ…ಕೇಡು…ಉಳ್ಳ— *odor* ದುರ್ಗಂಧ— *sapor* ಕಹಿರುಚಿ—*molestus* ಶ್ರಮೆಯಾದ—*annona* ದುರ್ಭಿಕ್ಷ—*nuntius* ಕೆಟ್ಟ ಸಮಾಚಾರ—*sonus* ಮಂದವಾದಶಬ್ದ—*severus* ಖಂಡಿತ, ಕಡಾಕಡಿ, ಭೀಕರ—*mandatum* ಜೋರುಹುಕುಮು—*sententia* ಆಜ್ಞೆ ಶಿಕ್ಷೆ —*grave negotium* ಮಹಾ ದೊಡ್ಡಸಂಗತಿ—*amor* ಅತ್ಯಂತಪ್ರೀತಿ.

Gravita s, tis, *f. ponderis* ಗರಿಮ, ಗೌರವ, ಬಲುಪು, ಘನತೆ—*auditûs* ಕಿವೀಮಟ್ಟು—*oris* ಬಾಯಿದುರ್ಗಂಧ— *onus* ಭಾರ, ಬಲುಹು—*violentia* ಉಗ್ರ, ಅಘೋರ—*morum* ಘನತೆ, ಗರಿಮೆ, ದಾಕ್ಷಿಣ್ಯ, ಗಾಂಭೀರ್ಯ, ಗುರುತ್ವ—*in morbo* ಬಲುಪು—*firmitas* ಸ್ಥಿರತ್ವ — *soliditas* ಶಾಶ್ವತತನ—*robur* ಬಲ, ಶಕ್ತಿ — *potestas* ಅಧಿಕಾರ—*pretii* ಗಿರಾಕಿ, V. graviditas.

Gravi ter—ius—ssimè, *adv.* ಭಾರವಾಗಿ, ಗರಿಮೆಯೊಂದಿಗೆ— *multùm* ಬಹುಶಾ, ಮಹಾ—*moribus* ಘನತೆಯಾಗಿ, ಗಂಭೀರವಾಗಿ, ಗುರುತ್ವವಾಗಿ — *severè* ಭೀಕರವಾಗಿ, ಖಂಡಿತದೊಂದಿಗೆ—*advertere* ನುಂಗಾಗಿ ವಿಚಾರಿಸ—*ægrè* ಕಷ್ಟ…ಪ್ರಯಾಸ…ಆಗಿ, ಸಂತೋಷವಿಲ್ಲದ—*accipere* ಕೋಪಿಸ — *sonare* ಮಂದವಾಗಿ ಧ್ವನಿಸ.

Grav o…are, *v. a.* V. Onero—*augere* ಹೆಚ್ಚಿಸ, ಅಧಿಕರಿಸ—*accentu* ಅನುದಾತ್ತ ಹಾಕ, V. Molesto—or…ari, *v. d. acc.* V. Fastidio—*ære alieno gravari* ಸಾಲದಲ್ಲಿ..ಬೀಳ—ಮುಣುಗ, ತಂಟೆಬೀಳ.

Gregal is, *m. f.* e, *n.* ಬಂದೀಮಂದೆಯದು—*consocius* ಸಂಗಾತಿ, ಪ್ರಾಣಸ್ನೇಹಿತ—*plebs* ಅಲ್ಪಜನ.

Gregari us,a,um, ಮಂದೆಯ—*miles* ಬರೀಭಂಟ.

Gregatim, *adv*, ಮಂದೆಮಂದೆ…ಗುಂಪುಗುಂಪು…ಸಂದಣಿ…ಯಾಗಿ.

Gregat us, a, um,*part.* ಗುಂಪಾಗಿ ಹೋಗುವ—greg or…ari, *v.d.* ಕೂಟವಾಗಿಕೂಡ.

Gremial e, is, *n.* ಮಡಲಿನಪಾವಡೆ.

Gremi um, i, *n.* ಮಡಿ, ಮಡಲು, ತೊಡೆ, ಉಡಿ, ಅಂಕಪೀಠ—*cruribus transversis* ಉಡಲು— *brachia ad infantem gestandum* ಸೋಗಿಲು—imperii ರಾಜ್ಯದಮಧ್ಯ—in gremiis ponere ಮಡಲಿನಲ್ಲಿ ಹಾಕ, ಕೈಯಲ್ಲಿ ಒಪ್ಪಿಸ.

Gressio, nis, *f.*—ss us, ûs, *m.* ನಡೆ, ನಡಿಗೆ, ಅಡಿ—*largus* ಅಡ್ಡಾಲಂಗೆ, ಜಂಗೆ *firmus* ಊಟುಕಾಲು— *titubans puerorum* ತಪ್ಪಜ್ಜೆ, ತಪ್ಪಡಿ—*ambitiosus* ನಿಗ್ರಾಟ—*equi* ಠೀಚಿತ.

Gre x, gis, *m.* ಮಂದೆ, ಹಿಂಡು—*vaccarum* ಆಕಳ…ತುರು—ಮಂದೆ, ಕದುಪು ತುರುಬ, ತುಳಿ—*boum onerarioram* ಮೂಠೆ—(*en halte*) ಬಿಡಾರ, ಬೀಡಿಕೆ—*dux gregis* ಸಲಗ—*multitudo* ಶೇಣಿ, ಸರವಿ, ಕುಂಮಿ, ಸಂಕುಳಿ, ಮಂಡಲ..ಲಿ, ಸಮಜ.

Grill o … are, *v. n.* ಗೆಜ್ಜೆ ಹುಳದಹಾಗೆ ಕೂಗ.

Gromatic e, es, *f.* ಕ್ಷೈಮಾಷೆ.

Gross us, i, *m.* ಅತ್ತೀಕಾಯಿ—us,a, um ದಪ್ಪ, ದೊಡ್ಡ, ಬಾರಿ.

Grum a, æ, *f.* ದಂಡಿನಬಿಡಾರದ..;

ಪಟ್ಟಣ..ಮಧ್ಯ.

Grum us, i, *m.* ಮಜ್ಜು—*terræ lutosæ* ಬೆಟ್ಟು, ಕಟ್ಟೆ.

Grund io—grunn io, is, ivi, itum, ire—*v. n. porculi,* ಗುಮುಗುಮನ, ಮೊರಗ—*conatu* V. Obnitor.

Grunnit us, ûs, *m. porci* ಗುರ್ರುಗುಟ್ಟನ—*irati* ಗುರುಕ್ಕನ್ನೆ.

Gru s, is, *f.* ಕೊಕ್ಕರು, ಕಬ್ಬಕ್ಕಿ, ಕಬ್ಬು, ಕೊಕ್ಕರೆ, ಬಕ—*liberiana, vel, Indica* ಸಾರಸ, ಪುಷ್ಕರಾಖ್ಯ-*f.* ಲಕ್ಷ್ಮಣೆ—*parva* ಬಲಾಕ, ಬೆಳ್ಳಕ್ಕಿ—*numidica* ಕರೇಟು, ಹಂಗುಗುಹಕ್ಕಿ—*gruum locus* ಕಬ್ಬಕ್ಕಾಗರ—*machina ad tollendum onus, aquam* ಯಾತ

Gryll us, i, *m.* ಗೆಜ್ಜೆಹುಳ, ಜೀರುಂಡೆ, ಕಪ್ಪಟಿಗ, ಝಿಲ್ಲಿಕೆ—*pictura* ಗೇಲಿಗೆ...ಹಾಸ್ಯಕ್ಕೆ...ತ್ತಗ ಚಿತ್ರಪಟ.

GU

Gubern a, orum, *n. pl.*—acul um, i, *n. navis* ಚುಕಾಣಿ...ಣೆ—*cymba* ಹುಟ್ಟು ಹಲಿಗೆ, ಕೇನಪಾತನ.

Gubernatio, nis, *f.* ದೌಲತ್ತು, ಆಳಿಕೆ, ಆಧಿಪತ್ಯ, ಆಡಳಿತೆ — *delegata* ಕಾರುಬಾರು —*navis* ಹಡಗು ನಡಿಸುವಿಕೆ, ಅಂಬಿಗನವುದ್ಯೋಗ V. Administratio.

Gubernator, is, *m.* ಆಳುವವ, ನರ..ಪತಿ—ದೇವ, ಅಧಿಪತಿ—*civitatis* ಸ್ಥಾನೀಕ—*navis* V. Nauclerus—*poli* ಜಗದೀಶ್ವರನು—atri x, cis, *f.* ಆಳುವವಳು, ವಿಚಾರಣೆಕಾರಿ.

Guberni um, i, *n.* ರಾಜ್ಯಭಾರ, ಹಜೂರು, ಸರಕಾರ, ಸಂಸ್ಥಾನ, ಅರಮನೆ—*justum* ಧರ್ಮಾಳಿಕೆ—*tyrannicum* ಕಾಕೋಟಕಸಂಸ್ಥಾನ—*navis* ಹಡಗುನಡಿಸುವಿಕೆ.

Gubern o...are, ಆಳ, ನಡಿಸ, ರಾಜ್ಯಭಾರ..ದೌಲತ್ತು..ಮಾಡ, ಕಟ್ಟಾಳ—*uxorem* ಆಳಿಬಾಳ — *navem* ಚುಕಾಣಿಹಿಡು ಕೊಳ್ಳ—ತಿರುಗಿಸ.

Gul a, æ, *f.* ಊಟಾತುರ, ಜಿಹ್ವಾಚಾಪಲ್ಯ, ಭೋಜನಪ್ರಿಯ, ತಿನಾಳಿ...ಹೊಟ್ಟೆಬಾಕ...ತನ—*gulæ parens* ಭೋಜನಪ್ರಿಯನು—*subtilis* ರುಚಿಕರಪ್ರಿಯನು—*os follis* ತಿತ್ತಿಕೊಳವಿ V. Guttur.

Gulo, nis, *m.* V. gluto.

Gulosè, *adv. edere* ಹೆದ್ದಿಂಡಿಯಣ್ಣ—ಭೋಜನಪ್ರಿಯವಾಗಿ, ಆತುರದೊಂದಿಗೆ ನುಂಗಿಬಿಟ್ಟು.

Gulos us, a, um,—gum as, æ, *m. f.* mi a, æ, *f.* ಹೊಟ್ಟೆಬಾಕ, ಒಡಲಬಾಕ, ಅತ್ಯಾಶೆಯುಳ್ಳ V. gluto.

Gumme us, a, um, ಬಂಕೆಯಹಾಗೆ ಸುರಿಯುವ.

Gummi, *ind*, gum en, inis, *n.* ಬಂಕೆ, ಗೋಂದು, ಮೇಣ, ಹಗಿನು, ಅಂಟು—*bombacis* ಎಲದಹಗಿನು — *mangiferi* ಜೇಜಿ *arabicum* ಜೇಲದ ಅಂಟು—*ammoniacum* ನವಾಸಾಗರ, ಚಗಚೆ ಅಂಟು—*ex arboribus* juniperi, pini ಬಾದಾನಿ ಅಂಟು—*lagena plena* ಗೋಂದಾನಿ-*auris* ಕೂಕಣಿ

Gummin us, a, um, ಬಂಕೆಪೂಸಲ್ಪಟ್ಟ

Gummitio, nis, *f.* ಬಂಕೆ...ಗಚ್ಚೆ ಮೆಂಣೆ..ಪೂಸುವಿಕೆ—ಅಂಟಿಸುವಿಕೆ.

Gumm os us—inos us, a, um, ಗೋಂದು..ಬಂಕೆ..ತರುವ—ಭರಿತ, ಬಂಕೆಬಂಕೆಯಾದ, ಅಂಟಾಗಿರುವ V. glutinosus.

Gurg es, itis, *m. in flumine* ಮಡುವು, ನೀರುಸುಳಿ, ಪಾತಾಳ, ಆಳಾದ ಕುಣಿ—*cænosus* ಗೊಸಬು, ಜವಗು —*cæruleus* ಸಾಗರ—*dissipator* ದುಂಡುಗಾರ—*vitiorum* ಸಕಲದುರ್ಗುಣವುಳ್ಳವ.

Gustatio, nis, *f.* ಪದಾರ್ಥಗಳ...

ಮೊದಲನೇವರ್ಣ—ಬಡಿಸುವಿಕೆ.

Gustatori um, i, *n.* ಫಲಹಾರದ... ಸ್ಥಳ,ಊಟದ..ಜಾಗ—ಮೇಜು.

Gustat us, ûs, *m.* ರುಚಿ.

Gust o...are. ಸವಿದುನೋಡ, ಸಂಜಿಕೊಳ್ಳ,ರುಚಿನೋಡ—*voluptatem* ಸುಖಭೋಗ ಅನುಭವಿಸ—*studia* ವಿದ್ಯಾದಿಗಳನ್ನುಕಲಿತುಕೊಳ್ಳ—*cœnulam* ಸಾಯಂಕಾಲದಲ್ಲಿ ಫಲಹಾರಮಾಡ.

Gust um, i, *n.* ಮೇಲೋಗರ.

Gust us, ûs, *m.* ಸಂಜಿಕೆ,ರುಚಿ,ಸವಿ, ರುಚಿಕರ,ರಸ—*degustatio* ಸಂಜಿಕೆ,ರುಚಿಪರಿಷೆ—*discretio* ವಿಮರ್ಶೆ,ವಿವೇಕ—*cibi* ಮೊದಲನೇಪದಾರ್ಥಗಳು—*vinum* ಪರಿಷೆಗಾಗಿರುಡಿಯುವಕೊಂಚರಸ *gustûs facultas*—ಜಿಹ್ವೇಂದ್ರಿಯ.

Gutt a,æ, *f.* ಬೊಟ್ಟು,ತಟರು,ತಟುಗು, ಹನಿ, ಬಿಂದು, ಕಣ, ತೊಟ್ಟು—*roris, pluviæ* ತುಂಪರೆ,ತುಂತುರು—*aquæ* ಅಂಬುಕಣ—*paucitas* ಕೊಂಚ, ಕಿಂಚಿತ್ತು, ಕುಸ—*electrum* ಕೈಣದ್ರಾವಿ—*aloes* ಕರಿಬೋಳ —gutt æ, arum, *pl. f.* ಮಾಸು, ಕಲೆ, ಮಚ್ಚು, ಮಚ್ಚೆ—*notæ* ಗುರುತುಗಳು—*columnarum* ಬೋದಿಗೆಕೆಳಗಣಕೆಲವುಅಲಂಕಾರಗಳು.

Guttatim, *adv.* ತಟ್ಟನೆ, ಕಣಕಣವಾಗಿ, ಹನಿಹನಿಯಾಗಿ—*pluere* ಹನಿಯು, ತೊಟಗುಟ್ಟ, ಬಸಿಯ—*cadens* ತೊಟರು.

Guttur, is, *m.* ಕೊರಳು, ಗೋಮಾಳೆ, ಕಂಠ,ಗಳ,ಮೆಡ್ರಿ—*(trachée artère) spiritûs meatus* ಗೋನಾಳಿ, ಗಳನಾಳ—*lacerare* ಕೊಲ್ಲರಿಯ—*dolor* ಕಂಠಗದ, ಕಂಠ..ರುಜ—ಶೂಲೆ.

Guttural is,*m.f.*e,*n.* ಕಂಠದ, ಗಳದ—*littera* ಕಂಠವರ್ಣ, ಕಂಠಾಕ್ಷರ.

Gutturos us,a,um, ದೊಡ್ಡಕಂಠವುಳ್ಳ—*morbus* ಗಳ...ಗಂಡ—ವಾಳವುಳ್ಳ.

Gytt us, i, *m.* ಕೈಮೇಲೆಬೊಟ್ಟುಬೊಟ್ಟಾಗಿ ನೀರುಹೊಯ್ಯುವಸಂಣಕಂಠವುಳ್ಳಚೆಂಬು— *olei* ಎಣ್ಣೆರುಪ್ಪೆ — *pro sacris* ಬಲಿಪಾತ್ರೆ.

Gymna s, dis, *f.* ತಾಲೀಮಿ..ಅಂಗಸಾಧಕ...ರೂಢಿ.

Gymnasiarch a, æ–us, i,*m.* ವಸ್ತಾದಿ, ತಾಲೀಮಿಗಾರ,ವಿದ್ಯಾಶಾಲೆಯಶ್ರೇಷ್ಠನು, ಓದುವಸಾಲೆಯಲ್ಲಿ ತಲೆಯವ—gymnast a, es, æ–*m. id.*

Gymnasi um,i, *n.* ಗರುಡಿ..ಗರಡೀಮನೆ, ಸಾಧಕದಸಾಲೆ—*scientiarum* ಆಶ್ರಮ, ವಿದ್ಯಾಸಾಲೆ.

Gymnastic us, a, um, *exercitium* ದಂಡೆಸಾಮು,ಸಾಧಕ..ನೆ,ವ್ಯಾಯಾಮ, ಅಂಗಸಾಧನ,ಊಟುಕೈಸು—*facere* ಕಂತಕಟ್ಟ V. Palæstricus.

Gymnic us, a, um, ಜಟ್ಟಿಯುಸ, ಮಲ್ಲಯುದ್ಧದ.

Gynæc e um, i, *n.*—oniti s, dis,*f.* ರಾಣಿವಾಸ,ಶುದ್ಧಾಂತ,ಅಂತಃಪುರ, ಸ್ತ್ರೀಯರಕಾರ್ಖಾನೆ—gynæciari us, i, *m.* ಇಂಥಕಾರ್ಖಾನಿಗೆ ಮೇಲ್ವಿಚಾರಣೆಕರ್ತ — *custos mulierum* ಸಾವಿದಲ್ಲ,ಕಂಚಿಯಕಚರಿಗ.

Gypse us, a, um, ಗಚ್ಚಿಗೆ ಸೇರಿದ, ನಯಗಾರೆಯಾದ — gypsat us, a, um, ವಿಗ್ರಹಕ್ಕೊಪ್ಪಿಸಲ್ಪಟ್ಟದ್ದಅಡಿಮೆಯುಸುಣದಿಂದಬೊಳಿಯಲ್ಪಟ್ಟ ಕಾಲು.

Gyps o...are, *v.a.* ಸುಂಣಬೊಳಿಯ, ಗಾರೆ ..ಗಚ್ಚು...ಹಾಕ—ಮಾಡ.

Gypsoplast es, æ, *m.* ಗಾರೆಕಾರ.

Gyps um, i, *n.* ಗಾರೆ, ಗಚ್ಚಿ, ಗಚ್ಚು, —*ex lapillis* ಗಿಲಾಬು—*politum* ನಯ.. ಸಂಣ.. ಗಾರೆ — *grossum* ಸುಡ್ಡಿಗಾರೆ—

durissimum ವಜ್ರ ಗಾಳಿ--*foliatum quo utuntur ad mundanda ulcera* ಕಪೂ೯ರ ಶಿಲಾಧಾತು —*illinire, polire* ದಾವಾಶಿ ಮಾಡ—*terere* ಕುಟ್ಟ.

Gyratio, nis, *f.* ತಿರುಗಿಕೆ, ತಿರುಗಿಸುವಿಕೆ, ಸುಳಿ — *usque ad vertiginem* ಗಿಮಿರಚ್ಚಾಶಿ. V. Vertigo.

Gyr o···are, *v. n. et . a .* ಸುಳಿಯು, ಮರಳ, ತಿರುಗ, ತಿರುಗಿಸ, ಸುತ್ತ, ಹೊರಳ, ಹೊರಳಿಸ — *usque ad vertiginem* ಗಿರ್ಗಿರಿತಿರುಗ.

Gyros us, a,um, ತಿರೇತಿರುಗುವಿಕೆ.. ಗಿಂಮನೆ..ಉಳ್ಳ.

Gyr us, i, *m* . ಸುತ್ತು, ಸುತ್ತಳತೆ, ಸುರುಳು—*circulus* ವೃತ್ತ, ಬಟುವು--*lunatus* ಅರ್ಧಚಂದ್ರ — *gyros agere* ಗಿರ್ಗಿರಿತಿರುಗ —*diei* ಒಂದುದಿನದ ಅಳತೆ (*manège*) ಕುದಿರೇಸಾಧಕದರಂಗ .

H

Ha, *interj*—ಆ, ಆಹಾ—*ha, he* ಹೋಗೋ (ನಗೆ ತೋರಿಸುತ್ತ).

Haben a, æ, *f.* V. Frenum--Corrigia. *flagellum* ಚಬುಕು— *funda* ಕವಣೆ, ಅದರಬಾರು— *vinculum* ಕಟ್ಟು— haben æ, arum, *pl.* ಕಡಿವಾಳ, ಬಾರುಗಳು. —*alicui dare* ಸಡಾಗಕೊಡ-- *irarum effundere* ರೌದ್ರ ಕೋಪಕ್ಕೆ ಕೈಬಿಡ-- *imperium* ಆಳಿಕೆ, ದೊಲತ್ತು, ಅಧಿಕಾರ, ರಾಜ್ಯಭಾರ.

Habenti a,æ, *f.* V. Divitiæ.

Hab eo, es, ui, itum, ere, *v. a.* ತನಗೆ ವುಂಟಾಗಿರ,ಉಳ್ಳವ..ಸಂಪನ್ನನು···ಕೊಂಡು···ಆಗಿರ , ಸಮನಿಶ್ಚವಾಗಿರ, ಹೊಂದಿ··ಪಡದು..ಆಗಿರ —habeo illud ಇದುನನಿಗುಂಟು— *necesse habeo* ನನಗೆ ಬೇಕಾಗಿಗನ್ನದೆ — habeo suspicionem ನಂನಮೇಲೆನಂಬರು—habere meritum alicujus ಒಬ್ಬನಿಂದ ವುಪಕಾರ ಹೊಂದಿಕೊಂಡಿರ-rationem cum terrâ ಭೂಮಿಯನ್ನು ಸಾಗುವಳಿಮಾಡ—satis ಸಾಕೆಂದಿರ—parùm ಸಾಲದೆಂದಿರ— admirationem ಆಶ್ಚರ್ಯವಾಗಿರ-documento ಮಾದರಿಯಾಗಿ ಭಾವಿಸ—certum, cognitum pro certo ನಿಶ್ಚಯಿಸಿಕೊಳ್ಳ, ಪರಿಷೆಯಾಗಿ ಅರಿಯ— *dives esse* ಐಶ್ವರ್ಯವಂತನಾಗಿರ—*habere sibi aliquid* ತನಗೆಅಪಹರಿಸಿಕೊಳ್ಳ— *manere* ವಾಸಮಾಡ — habet hic ಇಲ್ಲಿವಾಸ ಮಾಡುತ್ತಾನೆ—secum ರಹಸ್ಯವಾಗಿ···ತಂನ ಮನದೊಳು..ಇಟ್ಟುಕೊಳ್ಳ—sarta tecta ಭದ್ರವಾಗಿ ಮನೆ ಮಲ್ಲಿಯುರಿಸ—convivium habere ಔತನಕೊಡ--ಮಾಡ— benè aliquem ಶೊಬ್ಬನ್ನ ಲಕ್ಷ್ಯ ಮಾಡ — malè ನಿಷ್ಠೂರವಾಗಿ ನಡಿಸ-ಮಾಡ — se malè ಆಲಸ್ಯವಾಗಿ··ಒಂದು ಬಗೆ··ಒಂದು ತೀರು···ಆಗಿರ, ದೇಹಸ್ಥಿತಿ ತಪ್ಪ—*benè se* ಸ್ವಸ್ಥ.. ಕ್ಷೇಮ ··· ವಾಗಿರ — *meliùs se habere* ಊರಚಿ..ವಾಸಿ···ಆಗ —*ità se res habet* ಕಾರ್ಯಸ್ಥಿತಿ ಹೀಗಿದೆ-*loqui* ಪ್ರಸ್ತಾಪಿಸ —*de negotiis* ವ್ಯಾಪಾರಗಳಮೇಲೆ ಮಾತಾಡ — *transire* ಕಳೆದು ಹೋಗ — *nosse* ಅರಿಯ—habeo quid agam ಮಾಡತಕ್ಕದ್ದು ಬಲ್ಲೆ — *putare* ನೆನಸಿಕೊಳ್ಳ — mortuum ಸತ್ತನೆಂತಯೆನೆಸಿಕೊಳ್ಳ—loco patris habeo ನನ್ನತಂದೆಯಂತ ಭಾವಿಸಿಕೊಳ್ಳುತ್ತೇನೆ— sic habeto ಇದನ್ನು ನಿಶ್ಚಯಿಸಿಕೋ—habeo rem pro nullo loco , in levi ಯಿಂಥ ಕಾರ್ಯವು ನನಿಗೆ ಸ್ವಲ್ಪ ಕಾರ್ಯ··· ಒಂದುತೃಣ··· ಆಗಿದೆ —habeto meam culpam ನನತಪ್ಪೇನರಿಯುಂತ ನೆನಸಲಿ— *uti* ಪ್ರಯೋಗಿಸ,

ಬಳಸ—reddere ಸಲ್ಲಿಸ— *pass.* haberi ಹೇಳಲು... ಎಣಿಸಲು... ಪಡ, ಅ... ಎ... ನಿಸಿಕೊಳ್ಳ.

Haben s, t is, *o. g.* ಗೊಳ್ಳುವ, ಶಾಲಿ, ವಂತ, ವಂತಿ, ಉಳ್ಳವ, ಸಂಪಂನ, ಸಮನ್ವಿತ್ತ, ಸಂಯುಕ್ತ, ಪ್ರದ.

Habil is, *m. f.* e, *n.* ಸಮರ್ಥನು, *f.* ಸಮರ್ಥೆ, ಕುಶಾಗ್ರಬುದ್ಧಿ—ಮತಿ, ಹುವಣವಾದ, *vir* ದಕ್ಷ, ಪಟಿಮ, ಬಲ್ಲುವವ, ಆಪ್ತ, ಶಕ್ತ—*tractatu* ಪೊರಲು..ಆಡಿಸಲು...ನಡಿಸಲು..ಹಿಡಿಯಲು..ಪಡಸುಲಕ್ಷ.

Habilita s, tis, *f.* ಯುಕ್ತಿ, ಚಮತ್ಕಾರ, ಚಮತ್ಕೃತಿ, ಒಬ್ಬನ ಮಟ್ಟು, ಸಮರ್ಥತ್ವ, ಬಲ್ಲವಿಕೆ, ಕುಶಲತೆ, ಹುಂಸ, ಹುವಣು, ದಕ್ಷತೆ, ನಿವಾರ್ಹತ.

Habiliter, *adv.* V. Faciliter.

Habitabil is, *m. f.* e, *n.* ವಾಸವಾಗತಕ್ಕ—*incolis plenus* ಒಕ್ಕಲರು ತುಂಬಿರುವಾದ.

Habita tio, nis, *f.*—cul um, i, *n.* ವಾಸ, ಎಡ, ಭವನ, ನಿಲಯ, ನಿವಾಸ, ನಿವಸನ, ವಸತಿ, ಕಾಪುರತನ, ಠಾವು, ಬಸ್ತಿ, ಅಧಿವಾಸ, ಸ್ಥಾನ, ಒಕ್ಕಲ..ನೀಕೇ...ತನ, ಪೊಲಬು, ಕ್ಷಿತಿ, ಇರವು—*stabilis* ನೆಲವನೆ—*vacua* ಬಿಡುದಿಯಾದ *religiosorum, sacerdotum* ಆಶ್ರಯ, ಆಶ್ರಮ, ಪೀಠ, ಮಠ—*Linganistæ sacerdotis præcipua* ಮೂಲ ಮಠ—annua ಮನಿಗೆ ವರುಷದ ಬಾಡಿಗೆ—*transferre habit..valetudinis causâ* ಸ್ಥಾನ ಪಲ್ಲಟಿಸ—*aucupum, vel, è tribu ejectorum* ಪಕ್ಕಣ — *vicus in vrbe quibusdam reservatus* ಕೇರಿ, ಗೇರಿ—*Brahmanarum* ಅಗ್ರಹಾರ.

Habitator, is, *m.*—tri x, cis, *f.* ನಿವಾಸಿ, ಸ್ಥಳದವ, ಕಾಪುರಸ್ತ, ಕಾಪು, ನೆಲದವ, ಕುಡಿ, ಕುಳ.

Habitio, nis, *f.* ವಶ, ಆಧೀನ, ನಿಲಯ

—*gratiæ* ಮೇಲರಿತ ಸ್ತೋತ್ರ.

Habit o··are, ನಿವಾಸಿಸ, ವಸಿಸ, ಒಕ್ಕಲನ..ಕಾಪುರ..ಮಾಡ, ವಸಯಿಸ, ನೆಲಗೊಳ — *benè* ಸೌಖ್ಯವಾದ ಸ್ಥಳದಲ್ಲಿ ವಾಸ ಮಾಡ— pruinas ಹೇಮಂತ ಶೀ ಮೆಯಲ್ಲಿ ಕುಡಿಯಿರ—in re ಪ್ರೊಂದೊಂದೇ ಕಾರ್ಯದಮೇಲೆ ಮನಸ್ಸಿಡ—in oculis ಯಾವಾಗ್ಯೂ ತಂನಂನೇ ತೋರಿಸ—secum ತಂನವಶವಾಗಿ ಯಿದ್ದುಕೊಳ್ಳ, ತಂನಂನೇ ಶೋಧಿಸಿಕೊಳ್ಳ, ಧ್ಯಾನವ ಮಾಡಿಕೊಂಡಿರ — *uti* ಪ್ರಯೋಗಿಸ, ಬಳಸ.

Habitual is, *m. f.* e, *n.* ಬಳಿಕೆಯಾದ, ಮಾಮೂಲು ಪ್ರಕಾರ, ರೂಢಿ, ಚಟವಾದ.

Habitudinari us, a, um, ಚಟಬಿದ್ದ.

Habitud o, inis, *f. consuetudo,* ಚಟ, ಧರ್ಮ, ಶೀಲ, ಮರ್ಯಾದೆ—*assumere* ಚಟ..ಹಿಡಿಯ...ಬೀಳ — *status* ಸ್ಥಿತಿ, ಅಂತಸ್ತು—*corporis* ಅಂಗಚೇಷ್ಟೆ, ದೇಹದ ಗುಣ—ಪ್ರಕೃತಿ—*animi* ಗುಣ, ಇಚ್ಛೆ, ಈವಣ, ಶಕ್ತ, V. habitus.

Habit us, ûs, *m. vultus* ಮುಖ, ರೂಪಾಕಾರ, ನೋಟ, ತೋರುವಿಕೆ—*vestitus* ವೇಷ, ಉಡುಪು, ತೊಡಿಗೆ, V, Consuetudo—*habitus naturæ* ಸ್ವ... ಭಾವ—ಧರ್ಮ—ಶಕ್ತ—pro habitu facultatum ಅವಕಾಶವಿರುವಷ್ಟು.

Hàc, *adv.* ಈ ಮಾರ್ಗವಾಗಿ, ಯಿತ್ತಲಿನಲ್ಲಿ—*hàc-illàc* ಅಲ್ಲಲ್ಲಿ.

Hactenùs, *adv.* ಇದುವರೆಗೆ—ವರಿವಿಗೆ, ಇಷ್ಟುಪರಿಯಂತ—*tantò* ಅಷ್ಟು, ಈ ಮಟ್ಟಿಗೂ—*solummodo* ಮಾತ್ರ.

Hædil e, is, *n.* ಆಡಿನದೊಡ್ಡಿ.

Hædicul us—dill us, i, *m.* ಆಡಿನಮರಿ.

Hædin us, a, um, ಆಡುಮರಿಯ.

Hædul us, i, *m.* ಮೇಕೆಮರಿ—e a,

æ, *f.* ಮೇಕೇ ಸಂಣ ಹೆಂಣುಮರಿ.

Hæd us, i, *m.* ಹೋತು ..ತ, ಸುತ, ಛಾಗ, ಛಾಗಲತ, ಬಸ್ತ—hædi, *pl.* ಒಂದು ನಕ್ಷತ್ರರಾಶಿ.

Hæmorrhagi a, æ, *f.* ರಕ್ತಪ್ರವೃತ್ತಿ, ರಕ್ತಾತಿಸಾರ.

Hæmorrhoic us, a, um, ಮೂಲವ್ಯಾಧಿಗ್ರಸ್ತನಾದ.

Hæmorrhoid es, um, *f. pl.* ಗುದದ ರಕ್ತ ನರಗಳು—*morbus* ಅರ್ಶರೋಗ, ದುರ್ನಾಮಕ, ಅನಾಮಕ..ಮೂಲ..ವ್ಯಾಧಿ *huic planta medicinalis* ಅಶೋರ್ಘ್ನ

Hæreditariè, *adv. f.* ಮಿರಾಸಿಯಿಂದ, ಕಾಣಾಚಿಸ್ವತಂತ್ರವಾಗಿ, ತರಾತರದಿಂದ

Hæreditari us, a, um, *mos* ಸಾಂಪ್ರದಾಯಿಕ, ಪರಂಪರೆ—*jus, prædium* ಮಿರಾಶಿ, ಬಾಧ್ಯ, ಪಿತ್ರಾರ್ಜನೆಯಾದ, ಪಿರ್‍ಯ್ಯರತಡೆಯಿಂದ ಬಂದ.

Hæredita s, tis, *f.* ಬಾಧ್ಯ, ಬಾಧ್ಯತೆ, ಕಾಣಾಚಿ, ಪಿತ್ರಾರ್ಜನೆ, ಸ್ವಾಸ್ತಿ, ಅಮುಲು ಜಿಂದಿಗಿ, ದಾಯ, ರಿಕ್ಥ, ವಾರಸು, ವಾಲೀವಾರಸು, ಮಿರಾಸಿ—*sine domino* ಕುಲನಷ್ಟ—*absque censu* ಆಮ್ನಾಯ.

Hæredi um, i, *n.* ಸಂಣಕಾಣಾಚಿ.

Hæ reo, res, si, sum, rere. *v. n. dat.* ಒಟ್ಟಿ...ಅಂಟಿ... ಹಿಡು...ಹಚ್ಚಿ..ಹೊಂದಿ...ಕೊಳ್ಳು—equo ಘಟ್ಟಿಯಾಗಿ ಕುದುರೇಮೇಲೆ ನಿಲ್ಲು—tergis ಬೆಂನಟ್ಟಿ—*in luto* ಕಣುಂಕ—*anxius* ಸಂಶಯಪಡ—hæret ei lingua ಬಾಯ್ತೊದಲಾರಸು—*intentis oculis* ಕಂಣಾಬಿಕೊಳ್ಳು—*perseverore* ನಿಶ್ಚೆ ನಿಲ್ಲು—*capi* ಸಿಕ್ಕ, ದೊರಕಲ್ಪಡ—*crimine* ತಪ್ಪಿನಾಬೂತಾಗಿರ V. Adhæresco.

Hære s, dis, *m. f.* ಬಾಧ್ಯಸ್ಥ, ಕರ್ತ, ಕಾಣಾಚಿಗಾರ, ದಾಯಾದಿಗ, ಧನಾಧಿಕಾರಿ, ಉತ್ತರಾಧಿಕಾರಿ, ವಾರಸುದಾರ, ಸನಾಥಿ, ಮಾಲೀಕ—*absque* ಬೇವಾರಸು—*secundus* ಬದಲು..ಎರಡನೇ..ಬಾಧ್ಯಸ್ಥ—*proles* ಸಂತತಿ—*arboris* ತಳಿರು.

Hæresc o, is, ere, *v. n.* ಅಂಟಿಕೊಳ್ಳು. V. Adhæresco.

Hæresiarch a, æ, *m.* ಬೇದತಲಕ್ಕೆ ತಲೆಯಾದವ, ವಿಶ್ವಾಸಕ್ಕೆವಿರೋಧ ಬೋಧನೆಗೆಮೂಲಕನು, ಮತಭೇದಮಾಡುವವ.

Hæres is, is, *f.* ಪತಿತ..ತನ-ಮಾರ್ಗ, ಬೇದನೇಮಗಳ್ಳಿಕೆಲವನ್ನು ಕೆಡಿಸುವಿಕೆ—ತಳ್ಳಿಬಿಡುವಿಕೆ, ಪರಮತಾವಲಂಬನೆ—*secta,* ಸಮಯ, ಮತ—*opinio* ತನಗೆ ತೋಚಿದ್ದು, ಸ್ವಂತ...ವಿಶೇಷ..ಬೋಧ.

Hæretic us, a, um, ಪತಿತ, ಸತ್ಯವಿಶ್ವಾಸಗೇಡಿ, ಮತಭ್ರಷ್ಟ, ಪರಮತಾವಲಂಬಿ—*inter Gentiles* ಪಾಗತ, ಪಾಷಂಡಿ, ಸರ್ವಲಿಂಗನಾಸ್ತಿಕ.

Hæsitabund us, a, um, ಸಂಶಯಾತ್ಮ, ಮೋಹದಂಡ, ಆಮಿಪಾಷ್ಯಕಾರಿ—*linguâ, mente* ತತ್ತರಿಸಿಪಟ್ಟ, ನಷ್ಟಬುದ್ಧಿ.

Hæsitan s, tis, *levi instructione* ಚನ್ನಾಗಿತಿಳಿಯದ, ಸ್ವಲ್ಪವಿದ್ಯವುಳ್ಳ.

Hæsitanter, *adv.* ಸಂಶಯಿಸಿ, ತತ್ತರಿಸಿಪಟ್ಟು—*linguâ* V. Balbè.

Hæsitanti a, æ, *f.* ಸಂಶಯ, ತತ್ತರಿಕೆ, ಅಂದಿಸಾಟ, ಅಂದೇಶ, ಸಂಕೋಚ, ಮನ್ನಾಟ, ಶಂಕಿ, ವಿಮನಸ್ಸು, ವಿಕಲ್ಪನೆ, ಇಕ್ಕುರು, ವಿಮಿಕಿತ್ಸೆ—*in legendo* ಗತರು, ತಡೆಬಡೆ *linguæ* ತತ್ತರಿಬಿತ್ತರಿ, ನಚುನಾಲಿಕೆ

Hæsitatio, nis, *f.* V. hæsitantia-*mora* ತಾಮಸ, ತಡೆ.

Hæsitator, is, *m.* V. hæsitabundus.

Hæsit o—are, *v. n.* ಸಂಕೋಚಿಸ, ತತ್ತರಿಬಿತ್ತರಿ...ತತ್ತಳ...ಪಡ-ಗೊಳ್ಳ, ಮನ್ನಾಡ, ಅಂದಿಸ್ಯಾಡ, ಶಂಕಿಸ—*in legendo* ಗದಿಕಿಬಿಡ—*loquendo* ಗೊತೆತ, ಬಿಕ್ಕ

...ನಚ್ಚು..ಮಾಡಾದ,ಗುಣ್ಣಾಡ—*deliberare* ಅಲೋಚಿಸ.

Hai ! *interj, admirationis,stuporis* ಆಹಾ,ಓಹೋ,ಅಯ್ಯೋಪಾಪ,ಹಾಯನೆ, ಅಣ್ಣಂಣಾ.

Hale x, cis, *f.* ಕಡಲಿನ ಪಲಪಲಕಿರಿ ಮೀನುಗಳು, ಅವುಗಳು ಊರಿಡಲ್ಪಟ್ಟ ಉಪ್ಪುನೀರು.

Halit o...are, V. halo.

Halit us, ûs, *m.* ಗುಕ್ಕು, ಉಸುರು, ಶ್ವಾಸ—*acceptus* ಉಶ್ವಾಸ—*emissus* ನಿಶ್ವಾಸ—*difficilis* ಊರ್ಧ್ವಶ್ವಾಸ, ಗುಬ್ಬಿಡಿಯು—*retinere* ಉಸುರು ಕಟ್ಟೋಳ—*attrahere* ಗುಕ್ಕುಬಿಡ-*vapor* ಆವಿ, ಹಬೆ—*solis* ಶೆಖೆ,ಬಿಸಲು-*zephyrus* ಎಳೆಗಾಳಿ.

Hal o...are ಉಸುರುಯಿಡ, ಆವಿ..ಬಿಡ—ಊದ, ವಾಸನೆ..ಸುಗಂಧ..ಬೀಸ.

Halo, nis, *m.* ಮುಂದು ದಿನದ ಕೀನಿ ಕುಡಿಯಾಟದಿಂದ ವ್ಯಾಧಿಯುಳ್ಳವ.

Halo, nis, *f.* ಸೂರ್ಯ...ಚಂದ್ರನ.. ಪರಿವೇಷಣ.

Hallucinatio, nis, *f.* V. Allucinatio ಕಂಣುಕಟ್ಟು, ವಿಭ್ರಮಣೆ.

Hamat us, a, um, V. Aduncus, —ಕೊಂಡಿಯಾದ,ಕೊಕ್ಕಿರೂಪವಾದ,ಕೊಂಡಿ...ಗಾಳ...ಉಳ್ಳ—*munera* ಪ್ರತಿದಾನಕ್ಕಾಗಿ ಕೊಟ್ಟದಾನ.

Ham o··are, *v. a.* ಗಾಳದಿಂದ ಹಿಡಿಯು, ಸಲಾಕಿಯಿಂದ ಕಿವಿಯು—*decipere* ವಂಚಿಸ.

Ham us, i, *m.* ಗಾಳ, ಕಂಠಗಾಳ, ಗಂಟಲಗಾಣ—*hamo ducere, excipere* ಗಾಳದಿಂದ ಹಿಡಿಯು (*harpon*) ಕೊಂಗು, ಕೊಂಡಿ, ಸಲಾಕಿ—*gladii* ವಲಯುವಾದ ಹೆಜ್ಜೆ—*in loricâ* ಕಬ್ಬಿಣದ ಬಳೆ—ಪುಂಗರ—*hamis conserta lorica* ವಜ್ರಾಂಗಿ—*pecten* ಕಿಕ್ಕಟ್ಟಿಗೆ—*dolus* ತಂತ್ರೋಪಾಯ.

Hariol a, æ, *f.* V. Divinatrix.

